ಕನ್ನಡ ಭಗವದ್ಗೀತೆ

(ಮೂಲಸಹಿತ)

ಅನುವಾದಕರು :
ವೆಂಕಟರಾವ ರಾಮಚಂದ್ರರಾವ ನಾಯಕ

೧೯೬೪

ಕನ್ನಡ ಸಾಹಿತ್ಯ ಸಂಘ - ಕಲಬುರ್ಗಿ

	1	2	3	4		5	6	7
MON					INTERVAL			
TUE								
WED								
THU								
FRI								
SAT								

ಮೊದಲ ಮುದ್ರಣ: ೧೯೬೪

ಪ್ರಕಾಶಕರು:
ತವಗ ಭೀಮಸೇನರಾವ್
ಅಧ್ಯಕ್ಷ
ಕನ್ನಡ ಸಾಹಿತ್ಯ ಸಂಘ - ಕಲಬುರ್ಗಿ

ಬೆಲೆ: ರೂ. ೧–೫೦

ಮುದ್ರಕರು:
ಆರ್. ಎನ್. ಹಬ್ಬು
ಉಷಾ ಪ್ರೆಸ್, ಓಲ್ಡ್ ಪೋಸ್ಟ್ ಆಫೀಸ್ ರೋಡ್, ಮೈಸೂರು

ಪ್ರಕಾಶಕರ ಎರಡು ಮಾತು

ವಾಚನಾಲಯ, ಪುಸ್ತಕಭಾಂಡಾರ, ಉತ್ಸವಾದಿಗಳು, ವ್ಯಾಖ್ಯಾನ ಮಾಲೆಗಳು, ಸಾಹಿತ್ಯಪರೀಕ್ಷೆಗಳು ಇತ್ಯಾದಿಗಳ ಮೂಲಕ ನಾಡಿನಲ್ಲಿ ಜ್ಞಾನ ವನ್ನು ಹರಡುವ ಕಾರ್ಯಕ್ರಮಗಳ ಜೊತೆಗೆ ಪುಸ್ತಕ ಪ್ರಕಾಶನದ ಕಾರ್ಯವನ್ನೂ ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘವು ನಿರ್ವಹಿಸುತ್ತ ಬಂದಿದೆ. ಕವಿ ಲಕ್ಷ್ಮೀಶನನ್ನು ಕುರಿತ ಕವಿ ಬೇಂದ್ರೆಯವರ ಒಂದು ಪುಸ್ತಕವನ್ನೂ, ಕವಿ ಬೇಂದ್ರೆಯವರನ್ನು ಕುರಿತ ಪ್ರೊ. ಕೀರ್ತಿನಾಥ ಕುರ್ತಕೋಟಿಯವರ ಕಿರುಹೊತ್ತಗೆಯೊಂದನ್ನೂ ಸಂಘವು ಈಗಾಗಲೆ ಪ್ರಕಟಿಸಿ ಸದ್ಯಃ "ಕನ್ನಡ ಭಗವದ್ಗೀತೆ"ಯನ್ನು ಕನ್ನಡಿಗರ ಕೈಯಲ್ಲಿ ಕೊಡಲು ಹೆಮ್ಮೆ ಪಡುತ್ತಲಿದೆ. ಗ್ರಂಥ ಪ್ರಕಾಶನದ ಈ ಗತಿಯು ಮಂದವಾದುದೆಂದೆನಿಸಿದರೂ "ಹತ್ತು ಕೊಡುವುದಕ್ಕೆ ಬದಲಾಗಿ ಒಂದು ಮುತ್ತು ಕೊಡು" ಎಂಬ ಮಾತು ನಮಗೆ ಬಹು ಸಮಾಧಾನವನ್ನುಂಟು ಮಾಡಿದೆ. ವಿಶ್ವಗೀತೆಯೆನಿಸಿದ ಗೀತಾಮಾತೆಯ ಸೇವೆಯಿಂದ ಈ ಸಮಾ ಧಾನಕ್ಕೆ ಕೋಡು ಮೂಡಿದಂತಾಗಿದೆ.

ಸುದೀರ್ಘ ಪರಿಶ್ರಮ ಮತ್ತು ಪ್ರಾಜ್ಞತೆಯ ಫಲವಾದ ತಮ್ಮ ಈ ಕೃತಿಶ್ರೇಷ್ಠವನ್ನು ಪ್ರಕಟನೆಗಾಗಿ ಕನ್ನಡ ಸಾಹಿತ್ಯ ಸಂಘಕ್ಕೆ ಅರ್ಪಿಸಿದು ದಲ್ಲದೆ ಮೂರುನೂರು ರೂಪಾಯಿಗಳನ್ನು ದಾನಮಾಡಿ ಅಂಶತಃ ನಮ್ಮ ಮುದ್ರಣದ ವೆಚ್ಚವನ್ನೂ ಹೊತ್ತ ಉದಾರಚರಿತರಾದ ಶ್ರೀ ವೆಂಕಟರಾವ್ ನಾಯಕರು ನಮ್ಮ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಹೀಗೆಯೇ ಈ ಸತ್ಕಾರ್ಯ ಕ್ಕಾಗಿ ಮೂರು ನೂರು ರೂಪಾಯಿಗಳನ್ನು ದಾನಮಾಡಿದ ಶ್ರಿ ಹೋಮಿ ಈರಾನಿ ಅವರಿಗೂ ಅವರನ್ನು ಪ್ರೇರಿಸಿದ ಶ್ರೀ ಜೋಶಿ ಮತ್ತು ಶ್ರೀ ಸು. ವೆಂ. ಕಟ್ಟಿ ಅವರಿಗೂ ನಾವು ಋಣಿಯಾಗಿದ್ದೇವೆ. ಪ್ರಗಲ್ಭವಾದ ಮುನ್ನುಡಿಯನ್ನು ಬರೆದುಕೊಟ್ಟು ಆಶೀರ್ವದಿಸಿದ, ನಮ್ಮವರೇ ಆಗಿದ್ದ, ಪ್ರೊ. ವಿ. ಕೆ. ಗೋಕಾಕ ಅವರ ಉಪಕಾರ ಸ್ಮರಣೆಯನ್ನು ಮಾಡುವುದು ಹೇಗೆ? ಗ್ರಂಥವನ್ನು ಅಂದವಾಗಿ ಮುದ್ರಿಸಿ ಕೊಟ್ಟ ಮೈಸೂರಿನ

ಮುನ್ನುಡಿ

ಶ್ರೀಮಾನ್ ವೆಂ. ರಾ. ನಾಯಕರವರು ಜಿಲ್ಲಾ ವಿದ್ಯಾಧಿಕಾರಿಗಳೆಂದು ನಿವೃತ್ತರಾದರೂ ಒಂದು ಸಂಸ್ಥೆಯ ಪ್ರಾಚಾರ್ಯರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ನೈಜಮನೋಧರ್ಮಕ್ಕೆ ಇದರಿಂದ ಯಾವ ಅಭ್ಯಂತರವೂ ಉಂಟಾಗಿಲ್ಲ. ಭಗವದ್ಗೀತೆಯ ಲಲಿತ ಕನ್ನಡಾನುವಾದವನ್ನು ಅವರು ಇದೀಗ ಕನ್ನಡಿಗರಿಗೆ ಒದಗಿಸಿದ್ದಾರೆ.

ಅನೇಕ ಅನುವಾದಗಳು ಕನ್ನಡದಲ್ಲಿ ಉಪಲಬ್ಧವಾಗಿವೆ. ಆದರೆ ಒಂದು ದೃಷ್ಟಿಯಿಂದ ಗೀತೆಯ ಅನುವಾದಗಳು ಅದೆಷ್ಟು ಬಂದರೂ ಕಡಮೆಯೇ. ವಿಶ್ವಹೃದಯದಲ್ಲಿ, ಭಾರತೀಯ ಹೃದಯದಲ್ಲಿ ಗೀತೆಯು ವಿರಾಜಮಾನವಾದಂತೆ ಅಸಂಖ್ಯಾತ ವ್ಯಕ್ತಿಗಳಿಗೂ ಅದು ಗುರುಸ್ಥಾನದಲ್ಲಿದೆ. ಕನ್ನಡ ನಾಡಿನಲ್ಲಿಯ ಉಪಾಸಕರಿಗೆ ಗೀತೆಯು ಒಂದೊಂದು ಅನುವಾದ ಒಂದೊಂದು ಸವಿಯನ್ನು ಕೊಡಬಲ್ಲದು. ಒಂದೊಂದು ಅನುವಾದ ಒಂದೊಂದು ಛಾಯಾ ಚಿತ್ರವಿದ್ದಂತೆ. ಮೂಲದ ಅನಂತ ಸೌಂದರ್ಯದ ಒಂದೊಂದು ಬಿಂದುವನ್ನಾದರೂ ಒಂದೊಂದು ಛಾಯಾ ಚಿತ್ರದಲ್ಲಿ ನಾವು ಕಾಣುತ್ತೇವೆ.

ಶ್ರೀ. ನಾಯಕರು ಆದಿ–ಅಂತ್ಯಪ್ರಾಸಗಳೆರಡನ್ನೂ ಕಾದಿದ್ದಾರೆ. ಅಂತ್ಯಪ್ರಾಸ ವಿಶೇಷ ಸ್ವರ ಸಮಾನತೆಯಲ್ಲಿ ಮಾತ್ರ ಮುಕ್ತಾಯ ಹೊಂದಿದ್ದರೂ ಅದರಿಂದ ಅನುವಾದಕ್ಕೆ ಒಂದು ಲಾಲಿತ್ಯ ಬಾರದೆ ಇಲ್ಲ. ಅಲ್ಲದೆ ಮೂಲದ ಅರ್ಥವು ಎಲ್ಲೆಲ್ಲಿಯೂ ಅಸ್ಪಷ್ಟವಾಗದಂತೆ ಅವರು ಪ್ರಸಾದ ಗುಣವನ್ನು ಸಾಧಿಸಿದ್ದಾರೆ.

ಶ್ರೀ. ನಾಯಕರು ಸಾಹಿತಿಯಾಗಬೇಕೆಂಬ ಅಭಿಮಾನದಿಂದ ಈ ಅನುವಾದವನ್ನು ರಚಿಸಿಲ್ಲ. ಸಾಧಕನ ಸಾಧನೆಯ ಭಾಗವೆಂದು ನಮ್ರತೆಯಿಂದ ಅದನ್ನು ಸಿದ್ಧಗೊಳಿಸಿದ್ದಾರೆ. ಅಂತೇ ಈ ಸಹಜತೆ ಅನುವಾದಕ್ಕೆ ಲಾಲಿತ್ಯ–ಪ್ರಸಾದ ಗುಣಗಳನ್ನು ತಂದೊದಗಿಸಿದೆ.

ಒಂದು ದೃಷ್ಟಿಯಿಂದ ಅನುವಾದವು ಪ್ರವಾದಿಯ ಕೆಲಸ. ಗೀತೆಯ

ಉಷಾ ಪ್ರೆಸ್ಸಿನ ಒಡೆಯರಾದ ಗೆಳೆಯ ಆರ್. ಎನ್. ಹಬ್ಬೂ ಅವರ ಹಾಗೂ ಮುದ್ರಣದ ಕರಡನ್ನು ತಿದ್ದಿ ಆಗಾಗ್ಗೆ ಸೂಕ್ತ ಸಲಹೆಗಳನ್ನು ನೀಡಿದ ಗೆಳೆಯ ಕುರಡಿ ಹನುಮಂತಾಚಾರ್ಯರ ಉಪಕಾರವನ್ನು ಎಂದಿಗೂ ನಾವು ಮರೆಯುವಂತಿಲ್ಲ.

ಸಂಘವು ಎಂದಿನಂತೆ ಭಕ್ತಬಾಂಧವರ ಮತ್ತು ಸಾಹಿತ್ಯ ಭಕ್ತರ ನೆರವನ್ನು ಹಾರೈಸಿದೆ.

ಕಲಬುರ್ಗಿ
೭-೭-೧೯೬೪

ಭೀಮಸೇನರಾವ್ ತವಗ
ಅಧ್ಯಕ್ಷ, ಕನ್ನಡ ಸಾಹಿತ್ಯ ಸಂಘ

ಅರಿಕೆ

ಕೃಷ್ಣ ಗೀತಾಂಬುಧಿಯೊಳೀಸುತಲಿ ನಾನು
ಎನಿತೊ ಮುತ್ತೂ ಹವಳಗಳನು ಪಡೆದಿಹೆನು ।
ಕನ್ನಡದ ದಾರದಲಿ ಪವಣಿಸುತ ತಣಿದೆ
ಘನ್ನ ಗೀತಾಮಾತೆಗರ್ಪಿಸುತ ಮಣಿದೆ ॥

ಶ್ರೀಮದ್ಭಗವದ್ಗೀತೆಯ ಹೆಸರನ್ನು ಕೇಳದವರಾರು? ಇದು ಮಹಾಭಾರತದಲ್ಲಿ ಭೀಷ್ಮಪರ್ವದ ಒಂದು ಅಂಗವಾಗಿದೆ. ಆದರೂ ಸ್ವತಂತ್ರ ಗ್ರಂಥವಾಗಿ ತನ್ನ ಹಿರಿಮೆಯನ್ನು ಮೆರೆಯಿಸಿದೆ. ಕೇವಲ ೭೦೦ ಶ್ಲೋಕಗಳನ್ನೊಳಗೊಂಡಿದ್ದರೂ ಇದು ಜೀವನದಲ್ಲಿಯ ಧಾರ್ಮಿಕ, ತಾತ್ವಿಕ, ನೈತಿಕ-ಮೌಲ್ಯಗಳನ್ನು ಸುಲಭವಾಗಿ ತಿಳಿಸಿ ಹೇಳುವ ಮಹದ್ಗ್ರಂಥ. ಅಧ್ಯಾತ್ಮ ಜ್ಞಾನವನ್ನು ಬೋಧಿಸುವ ಪ್ರಪಂಚದ ಎಲ್ಲ ಭಾಷೆಗಳ ಕಾವ್ಯಗಳಲ್ಲಿ ಇದು ಅತ್ಯಂತ ಸುಂದರವಾದ ಮತ್ತು ಪ್ರಖ್ಯಾತವಾದ ಗ್ರಂಥವೆಂದೂ ಪಂಡಿತರ ಅಭಿಪ್ರಾಯ. ಭಾರತೀಯ ವಿಚಾರ ಪ್ರಣಾಲಿಕೆಯ ಮೇಲೆ ವಿಶೇಷ ಪ್ರಭಾವವನ್ನು ಬೀರಿದೆ. ಇಷ್ಟೇ ಅಲ್ಲ, ಇದರ ಪ್ರಭಾವವು ದೇಶ ಕಾಲಗಳ ಮರ್ಯಾದೆಯನ್ನೂ ಮೀರಿ ವಿಶ್ವದಾದ್ಯಂತ ಪಸರಿಸಿದೆ. ಅಂತೆಯೇ ಜಗತ್ತಿನ ಬೇರೆಬೇರೆ ಭಾಷೆಗಳಲ್ಲಿ ಇದರ ಅನುವಾದಗಳೂ ಮೂಡಿ ಬಂದಿವೆ.

ಈ ಗ್ರಂಥವು ರಚಿತವಾಗಿ ಸುಮಾರು ೩೦೦೦ ವರ್ಷಗಳಾಗಿ ಹೋದರೂ ಇದರ ನಾವೀನ್ಯಕ್ಕೆ ಕುಂದು ಬಂದಿಲ್ಲ. ಮಾನವನ ದೈನಂದಿನ ಜೀವನದಲ್ಲಿ ಉದ್ಭವಿಸುವ ನಾನಾ ಸಮಸ್ಯೆಗಳಿಗೆ ಇದರಿಂದ ತೃಪ್ತಿಕರವಾದ ಪರಿಹಾರ ದೊರಕುತ್ತದೆ. ದುಃಖದಿಂದ ಬಳಲುವವನನ್ನು ತಾಯಿಯಂತೆ ಸಮಾಧಾನಮಾಡುತ್ತದೆ. ಅಧೈರ್ಯದಿಂದ ಕೈಕಾಲು ಕಳಕೊಂಡವನಿಗೆ ಕೈಹಿಡಿದು ಎದ್ದುನಿಲ್ಲಿಸಿ ಧೈರ್ಯದಿಂದ ಓಡಾಡುವಂತೆ ಮಾಡುತ್ತದೆ. ಇದು ಪ್ರಸ್ಥಾನತ್ರಯಗಳಲ್ಲೊಂದಾದ ಪ್ರಮಾಣ ಗ್ರಂಥ. ಎಷ್ಟೋ ವಿದ್ವಾಂಸರೂ, ಸಮಾಜಸುಧಾರಕರೂ, ಧರ್ಮಗುರುಗಳೂ, ಮತಾಚಾರ್ಯರೂ, ರಾಜಕಾರಣಿಗಳೂ ಇದರಿಂದ ಬೆಳಕನ್ನು ಕಂಡಿದ್ದಾರೆ.

ಅನುವಾದವೆಂದರೆ ಅದರ ಇನ್ನೊಂದು ಅವತಾರ. ಅನುವಾದ ಅವತಾರವಾಗಬೇಕಾದರೆ ಅನುವಾದಕನೂ ಮಹಾ ವಿಭೂತಿಯಾಗಿರಬೇಕಾದುದು ಅನಿವಾರ್ಯ. ಸಾಧಕ ಮೂಲದ ಛಾಯಾಚಿತ್ರವನ್ನು ಸಾಧಿಸಬಲ್ಲ. ಅದನ್ನು ಶ್ರೀ. ನಾಯಕರು ಮೆಚ್ಚುವಂತೆ ಸಾಧಿಸಿದ್ದಾರೆ. 'ಪೇಳುವ', 'ಪಿಡಿದ' ಮೊದಲಾದ ರೂಪಗಳು ಅಲ್ಲಲ್ಲಿ ಸುಳಿದರೂ ಒಟ್ಟಾರೆ ಅನುವಾದದ ಭಾಷೆ ಇಂದಿನ ಬಳಕೆಗನ್ನಡವಾಗಿದೆ.

ಮೂಲ ಕೃತಿಯನ್ನು ಕನ್ನಡ ಲಿಪಿಯಲ್ಲಿಯೇ ಇಲ್ಲಿ ಕೊಡಲಾಗಿದೆ. ಓದುಗರು ಅನುವಾದದಿಂದ ಮುಂದುವರಿದು ಮೂಲದ ರುಚಿಯನ್ನು ಸವಿಯಲೆಂದೇ ಹೀಗೆ ಮಾಡಿದ್ದಾಗಿದೆ. 'ಯತ್ರ ಯೋಗೇಶ್ವರ' ಎಂಬ ಕೊನೆಯ ಶ್ಲೋಕದ ಸೌಂದರ್ಯವೇ ಬೇರೆ, ಅದರ ಅನುವಾದದ ಸವಿಯೇ ಬೇರೆ, 'ಯೋಗೀಶ್ವರ' ಕನ್ನಡದಲ್ಲಿ 'ಯೋಗೇಶ' ನಾಗುತ್ತಾನೆ. 'ಧನುರ್ಧರ ಪಾರ್ಥ' 'ನರ ಧನು ಪಿಡಿದವ' ನಾಗುತ್ತಾನೆ. 'ಮಮ ಮತಿ'ಯ ಮಾಧುರ್ಯವನ್ನು ಅನುವಾದಕರು 'ಮಮ ಮತ'ದಲ್ಲಿ ಕಾದಿದ್ದಾರೆ. ಅದರೆ

'ವಿಜಯೋ ಭೂತಿಃ, ಧ್ರುವಾ ನೀತಿಃ, ಮತಿಃ',

ಎಂಬಲ್ಲಿಯ 'ತಿಃ'ಯ ಅದ್ಭುತ ಸೌಂದರ್ಯ ಹೋಗಿದೆ. 'ಭೂತಿ' 'ಪಿಡಿದವ'ದೊಡನೆ ಅಂತ್ಯಪ್ರಾಸಕ್ಕಾಗಿ 'ವೈಭವ'ವಾಗಿದೆ.

ಮೂಲದ ಸವಿಯನ್ನು ನಮಗೆ ಹಚ್ಚಿದರೆ ಅನುವಾದ ಸಾರ್ಥಕವಾದಂತೆ. ಆ ಸಾರ್ಥಕತೆ ಇಲ್ಲಿ ಸಾಧಿಸಿದೆ.

ಶ್ರಿ. ನಾಯಕರು ಇನ್ನೂ ಅನೇಕ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತಿರುಗಿಸುವರೆಂದು ಆಶಿಸುತ್ತೇನೆ.

ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘದವರು ಇದನ್ನು ಪ್ರಸಿದ್ಧಿಸುತ್ತಿರುವದು ಸಂತೋಷದ ವಿಷಯ.

ಹೈದ್ರಾಬಾದು
೨೧-೬-೬೪

ವಿ. ಕೃ. ಗೋಕಾಕ್

ತಾವು ತಾವು ಅನುಭವಿಸಿದ ರೀತಿಯಲ್ಲಿ ಗೀತೆಯ ಸಂದೇಶವನ್ನು ಜನರಿಗೆ ತಿಳಿಸಲು ಯತ್ನಿಸಿದ್ದಾರೆ. ಆದರೆ ಇದರ ಆಳವನ್ನೂ, ವಿಸ್ತಾರವನ್ನೂ ಅಳೆಯಲು ಯಾರಿಗೂ ಸಾಧ್ಯವಾಗಿಲ್ಲ. ಸಾಕ್ಷಾತ್ ಭಗವಂತನಿಂದ ಹಾಡಲ್ಪಟ್ಟ ಗೀತೆಯಾದರೂ ಅವನಷ್ಟೇ ಅಪ್ರಮೇಯವಾಗಿರಬೇಕಲ್ಲವೆ?

"ಮಾಡುವವ ತಾನಲ್ಲ. ಎಲ್ಲವೂ ಪ್ರಕೃತಿ ಗುಣದಿಂದಲೇ ನಡೆಯುತ್ತದೆ. ಕರ್ಮಮಾಡದೆ ಯಾರಿಗೂ ಒಂದು ಕ್ಷಣವಾದರೂ ಇರಲು ಶಕ್ಯವಿಲ್ಲ. ಆದುದರಿಂದ ಪ್ರತಿಯೊಬ್ಬನೂ ತನ್ನ ಪಾಲಿನ ಕರ್ಮವನ್ನು ಕರ್ತವ್ಯವೆಂದು ಬಗೆದು, ಫಲವನ್ನು ಅಪೇಕ್ಷಿಸದೆ, ಅನಾಸಕ್ತಿಯಿಂದ ಲೋಕಕಲ್ಯಾಣಕ್ಕಾಗಿ ಮಾಡಿ, ತಾನು ಮಾಡುವುದೆಲ್ಲವನ್ನೂ ಅನನ್ಯ ಭಕ್ತಿಯಿಂದ ಭಗವಂತನಿಗೆ ನಿಶ್ಚಿತ ಬುದ್ಧಿಯಿಂದ ಅರ್ಪಿಸುವದೇ ಚಿತ್ತಶಾಂತಿಯು ಅರ್ಥಾತ್ ಮುಕ್ತಿಯ ಮಾರ್ಗ. ಇದನ್ನು ಪಡೆಯಲು ಸಾಧಕನು ಪ್ರಪಂಚವನ್ನು ತ್ಯಾಗಮಾಡಿ ಸಂನ್ಯಾಸಿಯಾಗಬೇಕಾಗಿಲ್ಲ. ಸಂಸಾರದಲ್ಲಿದ್ದುಕೊಂಡೇ ಆತ್ಮನಿಗ್ರಹದಿಂದ ಇದನ್ನು ಸಾಧಿಸಬಹುದು," ಎಂಬುದೇ ಗೀತೆಯ ಅಮರ ಸಂದೇಶ. ಈ ಅಮೌಲ್ಯ ಸಂದೇಶವನ್ನು ಯೋಗಶಾಸ್ತ್ರದ ರೂಪದಲ್ಲಿ ಜಗತ್ತಿಗೆ ದಯಪಾಲಿಸಿದ ಮಹಾನ್ ಋಷಿಕವಿ ಭಗವಾನ್ ವೇದವ್ಯಾಸರು.

ಅರ್ಜುನನಂತೆ ಪ್ರತಿಯೊಬ್ಬ ಮಾನವನೂ ನಿತ್ಯ ಜೀವನದಲ್ಲಿ ಮೋಹದಿಂದ ಅಜ್ಞಾನಕ್ಕೊಳಗಾಗುತ್ತಾನೆ. ಕ್ಷಣಕ್ಷಣಕ್ಕೂ ಸಂದೇಹದಿಂದ ಧರ್ಮಸಂಕಟದಲ್ಲಿ ಸಿಲುಕಿ ದಾರಿಗಾಣದೆ ವ್ಯಥೆಪಡುತ್ತಾನೆ. ಇಂಥವನಿಗೆ

'ಸರ್ವ ಧರ್ಮಗಳನ್ನು ತೊರೆದೆನ್ನೊಬ್ಬನಿಗೆ ಶರಣಾಗೆಲೊ
ಸರ್ವ ಪಾಪದಿ ನಿನ್ನ ನಾನುಳಿಸುವೆನು, ಚಿಂತಿಸಬೇಡೆಲೊ'

ಎಂದು ಗೀತೆಯು ಅಭಯವನ್ನು ನೀಡುತ್ತದೆ. ಶ್ರದ್ಧೆಯಿಂದ ಗೀತಾಮಾತೆಗೆ ಶರಣಾದವನ ಮೋಹವಳಿದು ಜ್ಞಾನಜ್ಯೋತಿಯು ಪ್ರಜ್ವಲಿಸಹತ್ತುವದು—ಗೀತೆಯ ತತ್ವ ರತ್ನಗಳು ಒಂದೊಂದಾಗಿ ಪ್ರಕಾಶಿಸುವುವು. ಆ ಬೆಳಕಿನಲ್ಲಿ ಆತನಿಗೆ ಸರಿಯಾದ ಮಾರ್ಗವು ತಾನಾಗಿಯೇ ಕಾಣಿಸಿಕೊಳ್ಳುವುದು.

ಉಪಾಸಕರು ಗೀತೆಯನ್ನು ಓದಿದರಷ್ಟೇ ಸಾಲದು. ಇದರಲ್ಲಿಯ ಒಂದೊಂದು ಮಾತನ್ನು ಚೆನ್ನಾಗಿ ಮನನಮಾಡಿಕೊಂಡು ಆಚರಣೆಯಲ್ಲಿ ತಂದದ್ದಾದರೆ ಜೀವನವು ಸಾರ್ಥಕವಾದೀತು. ಸ್ವಾರ್ಥ, ಭ್ರಷ್ಟಾಚಾರಗಳು ತಾಂಡವವಾಡುತ್ತಿರುವ ಈ ಕಾಲದಲ್ಲಿ ಮನುಷ್ಯನೂ ಮಾನವನಾಗಿ ಬಾಳಿ ಜೀವನದ ಸೌಂದರ್ಯವನ್ನು ಸವಿದು ಆನಂದಿಸ ಬೇಕಾದರೆ ಅಧ್ಯಾತ್ಮವು ವ್ಯವಹಾರದಲ್ಲಿ ಹಾಸು ಹೊಕ್ಕಾಗಿ ಬೆರೆಯಬೇಕು. ನೀತಿಯೇ ನಮ್ಮ ಊರುಗೋಲಾಗಬೇಕು. ಇದರ ವಿನಾ ಆತ್ಮೋದ್ಧಾರವಾಗಲೀ, ದೇಶದ ಉನ್ನತಿಯಾಗಲೀ ಸಾಧ್ಯವಿಲ್ಲೆಂದು ನನ್ನ ಪ್ರಾಮಾಣಿಕವಾದ ನಂಬಿಗೆ.

ಸಂಸ್ಕೃತ ಬಲ್ಲವರು ಮೂಲ ಭಗವದ್ಗೀತೆಯನ್ನು ಓದಿ ಅದರ ಸವಿಯನ್ನು ನೇರವಾಗಿ ಸವಿಯಬಹುದು. ಆದರೆ ಸಂಸ್ಕೃತ ಅರಿಯದ ಕನ್ನಡಿಗರ ಗತಿ ಏನು ? ಅವರಿಗೂ ಈ ಗೀತಾಮೃತವು ದೊರಕುವ ಬಗೆಯಾವುದು ? ಎಂಬ ಯೋಚನೆಯು ನನ್ನಲ್ಲಿ ಎಷ್ಟೋ ವರ್ಷಗಳಿಂದ ಸುಳಿದಾಡುತ್ತಿತ್ತು. ಗೀತೆಯ ಪದ್ಯಾನುವಾದವನ್ನು ಕನ್ನಡದಲ್ಲಿ ಮಾಡಬಾರದೇಕೆಂಬ ವಿಚಾರವೂ ಒಮ್ಮೆ ಮಿಂಚಿ ಹೋಯಿತು.

'ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು,
ಬಯಕೆ ಬರುವುದರ ಕಣ್ಣನ್ನೆ ಕಾಣೋ,

ಎಂಬಂತೆ ಈಶ ಪ್ರೇರಣೆಯಿಂದ ಬಯಕೆಯು ಸಂಕಲ್ಪದ ರೂಪವನ್ನು ತಾಳಿತು.

ಭಗವದ್ಗೀತಾಮೃತವನ್ನು ಕನ್ನಡದ ಬಟ್ಟಲಲ್ಲಿ ಹಾಕಿ ಕನ್ನಡಿಗರಿಗೆ ಉಣಬಡಿಸುವ ಸೇವೆಗಾಗಿ ಭಗವಂತನೇ ನನ್ನನ್ನು ನಿಯಮಿಸಿರುವದಾಗಿ ಭಾವಿಸಿ ಗೀತೆಯ ಅಭ್ಯಾಸ ಪ್ರಾರಂಭಮಾಡಿದೆ. ಭಗವದ್ಗೀತೆಯನ್ನು ಅನುವಾದಿಸುವದು ಒಂದು ಸಾಹಸದ ಕಾರ್ಯ. ಈ ಮಹತ್ಕಾರ್ಯ ಸಾಧನೆಗೆ ಬೇಕಾಗುವಂತಹ ಭಾಷಾ ಜ್ಞಾನ, ಛಂದಸ್ಸಿನ ಜ್ಞಾನ, ಅಧ್ಯಾತ್ಮ ಮನೋಭಾವ ಇವುಗಳಾವುವೂ ನನ್ನಲ್ಲಿ ಸಾಕಷ್ಟು ಇಲ್ಲವೆಂಬ ಅರಿವಿನ ಜೊತೆಗೆ ಭಯವೂ ಬಾರದಿರಲಿಲ್ಲ. ಸ್ವಾಧ್ಯಾಯವೆಂದು ಪ್ರಾರಂಭಿಸಿದ ಕಾರ್ಯವು ಕಾಲಕ್ರಮೇಣ ಅನುವಾದ ರೂಪವನ್ನು ತಾಳಿತು. ಈ ಸಂದರ್ಭದಲ್ಲಿ

ಚಾರ್ಯರು, ಅಗ್ನಿಹೋತ್ರಿ ಜಯತೀರ್ಥಾಚಾರ್ಯರು–ದಿ. ಹರವಾಳ ಕಿಶನರಾಯರು ಮತ್ತು ನನ್ನ ಮಾವಂದಿರಾದ ದಿ, ವಾಸುದೇವಶಾಸ್ತ್ರಿ, ಇವರೆಲ್ಲರು ಅನುವಾದವನ್ನು ಓದಿ, ಕೇಳಿ ಕಾಲಕಾಲಕ್ಕೆ ಸೂಕ್ತ ಸಲಹೆಗಳನ್ನು ಕೊಟ್ಟು ಈ ಕೃತಿಗೆ ಈಗಿನ ರೂಪವನ್ನು ಕೊಡಲು ಕಾರಣರಾಗಿದ್ದಾರೆ.

ಪದ್ಮಶ್ರೀ ವಿ, ಕೃ. ಗೋಕಾಕರು ಅನುವಾದದ ಹಸ್ತಪ್ರತಿಯನ್ನು ಓದಿ ಉಪಯುಕ್ತ ಸಲಹೆಗಳನ್ನಿತ್ತುದಲ್ಲದೆ, ಇದಕ್ಕೆ ಮುನ್ನುಡಿಯನ್ನೂ ಬರೆಯುವ ಅನುಗ್ರಹ ಮಾಡಿ ನನ್ನನ್ನು ಬಹಳೇ ಉಪಕೃತನನ್ನಾಗಿ ಮಾಡಿರುವರು.

ಕಲಬುರ್ಗೆಯ 'ಕನ್ನಡ ಸಾಹಿತ್ಯ ಸಂಘ' ದವರು ಸಂಘದ ಪರವಾಗಿ ಇದನ್ನು ಪ್ರಸಿದ್ಧಿಸುವ ಹೊಣೆ ಹೊತ್ತು ನನ್ನನ್ನು ಪ್ರೋತ್ಸಾಹಿಸಿದ್ದಾರೆ.

ಈ ಎಲ್ಲ ಮಹನೀಯರಿಗೂ ನನ್ನ ಕೃತಜ್ಞತಾಪೂರ್ವಕ ವಂದನೆಗಳು,

ಕಲಬುರ್ಗಿ
೨—೭—೧೯೬೪.

ಸಜ್ಜನ ವಿಧೇಯ,
ವೆಂಕಟರಾವ ರಾಮಚಂದ್ರರಾವ ನಾಯಕ
(ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿ)

ಅನೇಕ ಗ್ರಂಥಗಳನ್ನು ಅವಲೋಕಿಸುವ ಸದವಕಾಶವೂ ನನಗೆ ಲಭಿಸಿತು. ಆದರೂ ಗೀತೆಯನ್ನು ಯಥಾರ್ಥವಾಗಿ ಅರಿತುಕೊಳ್ಳುವ ಸೌಭಾಗ್ಯ ಇನ್ನೂ ನನಗೆ ಲಭಿಸಬೇಕಾಗಿದೆ. ಈ ದೃಷ್ಟಿಯಿಂದ ನಾನೊಬ್ಬ ಆಜೀವ ವಿದ್ಯಾರ್ಥಿಯೇ ಸರಿ. ಅಂತೂ ೧೯೩೭ರಲ್ಲಿ ಪ್ರಾರಂಭವಾದ ಅನುವಾದ ಕಾರ್ಯವು ೧೯೭೪ರಲ್ಲಿ 'ಕನ್ನಡ ಭಗವದ್ಗೀತೆ'ಯ ರೂಪದಲ್ಲಿ ಕನ್ನಡಿಗರ ಸೇವೆಗಾಗಿ ಅರ್ಪಿತವಾಗುತ್ತಿರುವದು ಸಂತೋಷದ ಸಂಗತಿ. ಜಿಜ್ಞಾಸುಗಳಾದ ಓದುಗರ ಸೌಲಭ್ಯಕ್ಕಾಗಿ ಮೂಲವನ್ನೂ ಇದರಲ್ಲಿ ಸೇರಿಸಲಾಗಿದೆ. ಸುಹೃದಯರಾದ ಕನ್ನಡಿಗರು ಇದನ್ನೋದಿ ಗೀತೆಯ ಮಾಧುರ್ಯವನ್ನು ಸವಿದು ಆನಂದಿಸುವಂತಾದರೆ ಈ ಕೃತಿಯು ಸಾರ್ಥಕವೆಂದು ನನ್ನ ಭಾವನೆ. ಈ ಉದ್ದೇಶವು ಎಷ್ಟರ ಮಟ್ಟಿಗೆ ಸಾಧಿಸಿದೆ ಎಂಬುದನ್ನು ನಿಷ್ಪಕ್ಷಪಾತ ಓದುಗರೇ ಹೇಳಬೇಕು.

ಕನ್ನಡದಲ್ಲಿ ಈಗಾಗಲೇ ಗೀತೆಯ ಹಲವಾರು ಪದ್ಯಾನುವಾದಗಳು ರಚಿತವಾಗಿವೆ. ಮತ್ತೆ ಈ ಅನುವಾದದ ಅವಶ್ಯಕತೆ ಏನು ? ಎಂದು ಕೆಲವರು ಕೇಳಬಹುದು. ಈ ಪ್ರಶ್ನೆಗೆ ನನ್ನಲ್ಲಿ ನೇರವಾದ ಉತ್ತರವಿಲ್ಲ. ಬೇಕಾಗಿ ಈ ಅನುವಾದಕ್ಕೆ ನಾನು ಕೈಹಾಕಿದವನಲ್ಲ. ಭಗವತ್ಪ್ರೇರಣೆಯಿಂದಲೆ ನಡೆದ ಈ ಕಾರ್ಯಕ್ಕೆ ನಾನು ನಿಮಿತ್ತ ಮಾತ್ರನಾಗಿರುವೆ. ಅನೇಕ ಹಿರಿಯರು ಸುಂದರವಾದ ಪುಷ್ಪಹಾರಗಳಿಂದಲೂ, ಮುತ್ತಿನ ಸರಗಳಿಂದಲೂ, ವಜ್ರವೈಡೂರ್ಯಗಳಿಂದಲೂ, ಅಲಂಕರಿಸಿ ಗೀತಾ ಮಾತೆಯ ಪೂಜೆಮಾಡಿ ಧನ್ಯರಾಗಿರಬಹುದು. ಆ ಮಹಾ ತಾಯಿಯ ಚರಣಗಳಲ್ಲಿ ಪುತ್ರನೊಬ್ಬನು ಶ್ರದ್ಧೆಯಿಂದ ಸಲ್ಲಿಸಿದ ಇನ್ನೊಂದು ಕುಸುಮ ಇದು ಏಕಾಗಬಾರದು ? ಎಂದು ಮಾತ್ರ ನನ್ನ ಉತ್ತರ. 'ಕೆರೆಯ ನೀರನು ಕೆರೆಗೆ ಹಾಕಿ ವರವ ಪಡೆದಂತೆ' ಈಶಾನುಗ್ರಹ ಸಂಕೇತವಾದ ಈ 'ಕನ್ನಡ ಭಗವದ್ಗೀತೆ'ಯನ್ನು ಆ ಪುರುಷೋತ್ತಮನಿಗೆ ಅನನ್ಯಭಾವದಿಂದ ಅರ್ಪಿಸಿ ಕೃತ-ಕೃತ್ಯನಾಗುವೆ.

ಈ ಕೆಲಸದಲ್ಲಿ ನನಗೆ ಅನೇಕ ಸ್ನೇಹಿತರು ನೆರವುನೀಡಿದ್ದಾರೆ. ನಾನು ಅವರೆಲ್ಲರನ್ನೂ ಇಲ್ಲಿ ಸ್ಮರಿಸದಿರಲಾರೆ.

ಸರ್ವಶ್ರೀ—ತವಗ ಭೀಮಸೇನರಾಯರು, ಬೆಂಡೆಬಿಂಬಳಿ ರಾಮಾ

ಅರ್ಪಣೆ

ನನ್ನ ಪೂಜ್ಯರಾದ ಮಾತಾಪಿತೃಗಳ ಪವಿತ್ರ ಸ್ಮರಣೆಗಾಗಿ
ಕಲಬುರ್ಗಿಯ ಕನ್ನಡ ಸಾಹಿತ್ಯ ಸಂಘದ ಮೂಲಕ
ಒಲುಮೆಯ ಕನ್ನಡ ಜನತೆಗೆ.

ಗೀತೆಯ ಮಹಿಮೆ

ಪುಣ್ಯ ಗೀತಾ ಶಾಸ್ತ್ರವನು ನಿಯಮದಲಿ ಪಠಿಸುವ ಪುರುಷನು ।
ಬನ್ನ ಭಯಗಳನಳಿದು ವಿಷ್ಣು ಪದಾರವಿಂದವ ಪಡೆವನು ॥ ೧ ॥

ಇನ್ನು ಪ್ರಾಣಾಯಾಮ ಮಾಡುತ ಗೀತೆ ಪಠನದಿ ಮಗ್ನನು ।
ಮುನ್ನ ಜನ್ಮದಿ ಮಾಡಿದಂತಹ ಪಾಪಗಳ ತಾ ಕಳೆವನು ॥ ೨ ॥

ಬೇಕು ದಿನ ದಿನ ಜಲದ ಸ್ನಾನವು ದೇಹ ಮಲವನು ತೊಳೆಯಲು ।
ಸಾಕು ಗೀತಾಂಬುಧಿಯ ಒಂದೇ ಸ್ನಾನ ಭವಮಲ ತೊಳೆಯಲು ॥ ೩ ॥

ಇಂಥ ಗೀತಾಧ್ಯಯನ ಸಾಲದೆ ? ಅನ್ಯ ಶಾಸ್ತ್ರಗಳೇಕೆಲೊ ।
ಸ್ವಂತ ಕೃಷ್ಣ ಮುಖಾರವಿಂದದೊಳುದಿಸಿ ಬಂದಿಹುದಿದು ಎಲೊ ॥ ೪ ॥

ವಿಷ್ಣು ವದನದಿ ಸಾಗಿ ಬಂದಿತು ಭಾರತಾಮೃತವೆಲ್ಲವು ।
ಘನ್ನ ಗೀತಾ ಜಾಹ್ನವಿಯ ಜಲಪಾನ ಮುಕ್ತಿಯ ಮಾರ್ಗವು ॥ ೫ ॥

ಸರುವ ಉಪ ನಿಷದಗಳು ಗೋಗಳು, ಕರೆಯುವವ ವಸುನಂದನ ।
ಕರುವು ನರ, ಸುಜ್ಞಾನಿ ಭೋಕ್ತೃವು, ಕ್ಷೀರ ಗೀತಾಮೃತ ಘನ ॥ ೬ ॥

ದೇವಕೀ ಪುತ್ರನ ಗೀತೆಯೊಂದೆ ಶಾಸ್ತ್ರವು
ದೇವಕೀ ಪುತ್ರ ತಾ ನೊಬ್ಬನೇ ದೇವನು ।
ಭಾವದಲ್ಲಿ ಆತನ ನಾಮ ಒಂದೆ ಮಂತ್ರವು
ಸೇವೆ ಆ ದೇವನ ಗೈವುದೊಂದೆ ಕರ್ಮವು ॥ ೭ ॥

ಅನುಕ್ರಮಣಿಕೆ

ಕನ್ನಡ ಭಗವದ್ಗೀತೆ

ಅಧ್ಯಾಯ ೧.

ಅರ್ಜುನ ವಿಷಾದಯೋಗ

ಧೃತರಾಷ್ಟ್ರ :

ಪುಣ್ಯಮಯ ಕುರುಕ್ಷೇತ್ರದಲಿ ಸೇರಿರುವ ಯುದ್ಧಾಪೇಕ್ಷೆಯು ।
ನನ್ನ ಮಕ್ಕಳು ಮತ್ತೆ ಪಾಂಡವರೇನುಗೈದರು ಸಂಜಯ ॥ ೧ ॥

ಸಂಜಯ :

ಪಾಂಡವರು ವ್ಯೂಹದಲಿ ನಿಲಿಸಿದ ಪಡೆಯ ಕೌರವರಾಯನು ।
ಕಂಡು ದ್ರೋಣರ ಬಳಿಗೆ ಪೋಗುತ ನುಡಿದನಾಗೀನುಡಿಯನು ॥ ೨ ॥

ನಿಟ್ಟಿಪುದು ಆಚಾರ್ಯ ನಿಮ್ಮಯ ಕುಶಲಬುದ್ಧಿಯ ಶಿಷ್ಯನು ।
ಧೃಷ್ಟದ್ಯುಮ್ನನು ಸಜ್ಜುಗೊಳಿಸಿದ ಪಾಂಡವರಘನಪಡೆಯನು ॥ ೩ ॥

ಇಲ್ಲಿ ಸೇನೆಯಲಿಹರು ನರಭೀಮರಿಗೆ ಸರಿಸಮ ಶೂರರು ।
ಒಳ್ಳೆ ಹಿರಿಬಿಲ್ಲಾಳು ಸಾತ್ಯಕಿ, ದ್ರುಪದವೀರ, ವಿರಾಟರು ॥ ೪ ॥

ಧೃಷ್ಟಕೇತೂ ಚೇಕಿತಾನನು, ಶೂರ ಕಾಶೀರಾಜನು ।
ಶ್ರೇಷ್ಠಮಾನವ ಶೈಬ್ಯ, ಆ ಪುರುಜಿತ್ತು ಕುಂತೀಭೋಜನು ॥ ೫ ॥

ಉತ್ತಮೌಜ ಬಲಿಷ್ಠ ಆ ಅಭಿಮನ್ಯು, ದ್ರೌಪದಿಕುವರರು ।
ಮತ್ತೆ ವಿಕ್ರಮಿ ಯುಧಾಮನ್ಯುವು, ಆ ಮಹಾರಥರೆಲ್ಲರು ॥ ೬ ॥

ನಮ್ಮ ಸೇನೆಯ ಪ್ರಮುಖ ಯೋಧರ, ನಾಯಕರುಗಳ ಹೆಸರನು ।
ನಿಮ್ಮ ಜ್ಞಾಪಕಕಾಗಿ ವಿಪ್ರೋತ್ತಮರೆ, ಕೇಳಿರಿ ಒರೆವೆನು ॥ ೭ ॥

ತಾವು, ಭೀಷ್ಮರು, ಸಮರದಲಿ ಜಯಶಾಲಿ ಕೃಪನು, ಕರ್ಣನು ।
ಆ ವಿಕರ್ಣನು ಮತ್ತೆ ಭೂರಿಶ್ರವನು ಅಶ್ವತ್ಥಾಮನು ॥ ೮ ॥

ಅನ್ಯರೆನಿಬರೊ ವಿವಿಧ ಶಸ್ತ್ರಗಳನ್ನು ಧರಿಸಿದ ವೀರರು ।
ಎನ್ನ ದೆಸೆಯಿಂ ಪ್ರಾಣದಾಸೆಯ ತೊರೆದ ಯುದ್ಧ ಪ್ರವೀಣರು ॥ ೯ ॥

ಇಹುದಪರ್ಯಾಪ್ತವದು ನಮ್ಮೀ ಭೀಷ್ಮರಕ್ಷಿತ ಸೇನೆಯು ।
ಇಹುದು ತಾ ಪರ್ಯಾಪ್ತ ಆವರಾಭೀಮ ರಕ್ಷಿತ ಸೇನೆಯು ॥ ೧೦ ॥

ಎಲ್ಲ ವ್ಯೂಹ ಪ್ರವೇಶ ಮಾರ್ಗದಿ ನಿಮ್ಮನಿಮ್ಮಯ ಸ್ಥಳದೊಳು ।
ನಿಲ್ಲುತಲಿ ಸಂರಕ್ಷಿಸಿರಿ ಭೀಷ್ಮರನೆ ನೀವುಗಳೆಲ್ಲರು ॥ ೧೧ ॥

ಕುರುಕುಲದ ಮುತ್ತಾತ ಭೀಷ್ಮನು ಮಾಡಿ ಸಿಂಹನಿನಾದವ ।
ಹರುಷಹುಟ್ಟಿಸಲಾತನಲಿ ಬಲವಾಗಿ ಊದಿದ ಶಂಖವ ॥ ೧೨ ॥

ಬಳಿಕ ಶಂಖ, ನಗಾರಿ, ಡೋಲು, ಮೃದಂಗ, ಗೋಮುಖವೆಲ್ಲವು ।
ಮೊಳಗಲೊಂದೇಕಾಲಕಾಯಿತು ಬಹು ಭಯಂಕರ ಶಬ್ದವು ॥ ೧೩ ॥

ಬಿಳಿಯ ಕುದುರೆಯ ಹಿರಿಯ ರಥದಲಿ ಕುಳಿತ ಅರ್ಜುನ ಕೃಷ್ಣರು ।
ಬಳಿಕ ತಮ್ಮಯ ದಿವ್ಯಶಂಖಗಳೂದಿದರು ಅವರೀರ್ವರು ॥ ೧೪ ॥

ಹರಿಯು ಊದಿದ ಪಾಂಚಜನ್ಯವ, ದೇವದತ್ತವ ಆ ನರ ।
ಭರದಿ ಊದಿದ ಪೌಂಡ್ರಶಂಖವ ಭೀಮಕರ್ಮಿ ವೃಕೋದರ ॥ ೧೫ ॥

ತಾನು ಆಗ ಅನಂತವಿಜಯವನೂದಿದನು ನೃಪ ಧರ್ಮನು ।
ಆ ನಕುಲ ಸುಘೋಷವನು, ಮಣಿಪುಷ್ಪಕವ ಸಹದೇವನು ॥ ೧೬ ॥

ಶ್ರೇಷ್ಠಧನುವಿನ ಕಾಶಿರಾಜ, ಶಿಖಂಡಿ ತಾಮಹ ರಥಿಕನು ।
ಧೃಷ್ಟದ್ಯುಮ್ನ, ಅಜೇಯ ಸಾತ್ಯಕಿ, ಮತ್ತೆ ರಾಜ ವಿರಾಟನು ॥ ೧೭ ॥

ದ್ರುಪದ ಮತ್ತಭಿಮನ್ಯುವೀರನು, ದ್ರೌಪದಿಯ ಸುತರೈವರು ।
ನೃಪನೆ, ಬೇರೆಬೇರೆ ಶಂಖಗಳೂದಿದರು ಅವರೆಲ್ಲರು ॥ ೧೮ ॥

ಪೃಥ್ವಿಯೊಳು. ಆಕಾಶದಲ್ಲಿಯು, ಆ ತುಮುಲಧ್ವನಿ ಇಡುಗಿತು ।
ಮತ್ತೆ ಆ ಧೃತರಾಷ್ಟ್ರ ಪುತ್ರರ ಎದೆಗಳನು ತಾ ಬಿರಿಯಿತು ॥ ೧೯ ॥

ಧಾರ್ತರಾಷ್ಟ್ರರು ಸಿದ್ಧರಾಗುತ ಶಸ್ತ್ರಹೂಡುವ ಸಮಯದಿ !
ಪಾರ್ಥಕಪಿಕೇತನನು ಅವರನು ನೋಡಿ ಬಿಲ್ಲನ್ನೇರಿಸಿ ॥ ೨೦ ॥

ನುಡಿದನಾಗೀ ವಚನವನು ತಾ ಹೃಷೀಕೇಶನಿಗರಸನೆ ।

ಅರ್ಜುನ :

ಪಡೆಗಳೆರಡರ ನಡುವೆ ನಿಲ್ಲಿಸು ಎನ್ನರಥವನು ಕೃಷ್ಣನೆ ॥ ೨೧ ॥

ಯಾರು ಯುದ್ಧವ ಬಯಸಿ ನಿಂತಿಹರವರ ನೀಕ್ಷಣ ನೋಳ್ಪೆನಾ ।
ಆರ ಸಂಗಡ ಕಾದ ಬೇಕಾಗಿಹುದೊ ಈ ಕೊಳುಗುಳದಿ ನಾ ॥ ೨೨ ॥

ದುಷ್ಟಮತಿ ದುರ್ಯೋಧನಗೆ ಆಹವದಿ ಹಿತವನ್ನೆಸಗಲು ।
ದಿಟ್ಟಸುವೆನೀಗಿಲ್ಲಿ ಬಂದಿಹರಾರು ಯುದ್ಧವ ಮಾಡಲು ॥ ೨೩ ॥

ಸಂಜಯ :

ಅರಸನೇ, ಅರ್ಜುನನು ಪೇಳಿದ ತೆರದೊಳಾ ಶ್ರೀ ಕೃಷ್ಣನು ।
ಎರಡು ದಳಗಳ ನಡುವೆ ತಂದಿರಿಸುತ್ತ ಉತ್ತಮ ರಥವನು ॥ ೨೪ ॥

ಸರುವ ಅರಸರ, ಭೀಷ್ಮ–ದ್ರೋಣರ ಸಮ್ಮುಖದೊಳಿಂತೆಂದನು ।
ನರನೆ, ನೀ ನೋಡಿಲ್ಲಿ ಸೇರಿರುವಂಥ ಈ ಕೌರವರನು ॥ ೨೫ ॥

ನರನು ಕಂಡನು ಉಭಯ ಸೇನೆಗಳಲ್ಲಿ ನಿಂತಿಹ ಪಿತೃಗಳ ।
ಗುರುವು, ಸೋದರ, ಮಿತ್ರ, ಮಾತುಳ, ಮಕ್ಕಳನು, ಮೊಮ್ಮಕ್ಕಳ ॥

ಇನ್ನು ಹಿತಚಿಂತಕರ, ಶ್ವಶುರರ ಮತ್ತೆ ಮುತ್ತಾತರುಗಳ ।
ಕಣ್ಣು ಆರಳಿಸಿ ನೋಡಿ ನಿಂತಿಹ ಸರ್ವಬಾಂಧವ ಜನಗಳ ॥ ೨೬-೨೭ ॥

ಪರಮಕರುಣಾಭರಿತನಾಗಿ ವಿಷಾದದಲಿ ನರ ನುಡಿದನು ।

ಅರ್ಜುನ :

ಹರಿಯೆ, ನೋಡಲು ಸಮರಕಣಿಯಾಗಿರುವ ನಮ್ಮೀಜನರನು ॥ ೨೮ ॥

ಬಾಯಿ ಆರುತಲಿಹುದು ಎನ್ನಯ ಗಾತ್ರಗಳು ಸಡಿಲಾದುವು ।
ಕಾಯ ಕಂಪಿಸುತಿಹುದು ರೋಮಾಂಚಗಳು ತೋರುತಲಿರುವುವು ॥ ೨೯ ॥

ನನ್ನ ಕರದಿಂ ಕಳಚುತಿದೆ ಗಾಂಡೀವ, ಮೈ ಕಾದಿರುವುದು ।
ನನ್ನ ಮನ ವಿಭ್ರಮಿಸುವುದು, ನನಗೆದ್ದು ನಿಲ್ಲಲು ಆಗದು ॥ ೩೦ ॥

ಕಾಣುತಿರುವೆನು ಕೇಶವನೆ, ವಿಪರೀತ ಅಪಶಕುನಗಳನು ।
ನಾನು ಕೊಂದೊಡೆ ರಣದಿ ಸ್ವಜನರ, ಶ್ರೇಯವಾವುದೊ ಅರಿಯೆನು ॥ ೩೧ ॥

ರಾಜ್ಯ ಬಯಸೆನು, ವಿಜಯ ಸುಖಗಳನೊಲ್ಲೆನೈ ಗೋವಿಂದನೆ ।
ರಾಜ್ಯದಿಂದೆನಗೇನು, ಭೋಗದ ಬಾಳು ಏತಕೆ ಕೃಷ್ಣನೆ ॥ ೩೨ ॥

ಭೋಗ–ಸುಖ–ರಾಜ್ಯಗಳ ಬಯಸುವೆವಾರಿಗೋಸುಗ ನಾವೆಲೊ ।
ತ್ಯಾಗಮಾಡುತ ಪ್ರಾಣಧನಗಳ, ರಣದಿ ನಿಂತಿಹರವರೆಲೊ ॥ ೩೩ ॥

ಪಿತರು, ತಾತರು, ಮಾತುಳರು, ಮಾವಂದಿರಿನ್ನಾಚಾರ್ಯರು ।
ಸುತರು, ಪೌತ್ರರು, ಭಾವಮೈದುನರಿನ್ನು ಇತರಾಪ್ತೇಷ್ಟರು ॥ ೩೪ ॥

ಮೂರು ಲೋಕದ ರಾಜ್ಯ ದೊರೆತರು ಕೊಲ್ಲಬಯಸೆನು ಇವರನು ।
ಧಾರುಣಿಯು ಮಾತೇಕೆ ಕೃಷ್ಣನೆ ಕೊಲಲಿ ಅವರೇ ನನ್ನನು ॥ ೩೫ ॥

ನಮಗದಾವಕ್ಕರತೆ ಕೃಷ್ಣನೆ? ಕೊಲಲು ಈ ಕೌರವರನು ।
ನಮಗೆ ಸೋಂಕದೆ ಪಾಪ? ಕೊಂದೊಡೆ ಆತ-ತಾಯಾದವರನು ॥ ೩೬

ನಮ್ಮ ಕೌರವ ಬಂಧುಗಳ ಕೊಲ್ಲುವುದು ಹಿತ-ನಮಗಲ್ಲವೈ ।
ನಮ್ಮ ಜನರನು ಕೊಲಲು ಮಾಧವ, ನಮಗೆ ಬಹ ಸುಖವಾವುದೈ ॥ ೩೭ ॥

ಮತ್ತೆ ಲೋಭದಿ ಬುದ್ಧಿಯನು ಕಳಕೊಂಡ ಈ ಜನರೆಲ್ಲರೂ ।
ಮಿತ್ರ ದ್ರೋಹದ ಪಾಪ, ಕುಲಕ್ಷಯ ದೋಷಕಾಣದೆ ಹೋದರೂ ॥೩೮॥

ಕುಲವಿನಾಶದಿ ಬರುವ ದೋಷವ ನಾವು ಕಂಡಿರುವಾಗಲು ।
ತಿಳಿಯಬಾರದದೇಕೆ ಕೃಷ್ಣನೆ, ಪಾಪ ವಿಮುಖರದಾಗಲು ॥ ೩೯ ॥

ಕುಲದ ನಾಶದಿ ಆ ಸನಾತನ ಕುಲದ ಧರ್ಮವು ಅಳಿವುದು ।
ಅಳಿಯೆ ಧರ್ಮವು, ಕುಲವನೆಲ್ಲ ಅಧರ್ಮ ವ್ಯಾಪಿಸಿಬಿಡುವುದು ॥ ೪೦ ॥

ಪ್ರಬಲವಾಗಲಧರ್ಮ ಕೆಡುವರು ಕುಲದ ಸ್ತ್ರೀಯರು ಕೃಷ್ಣನೆ ।
ಅಬಲೆಯರು ಕೆಡೆ ವರ್ಣ ಸಂಕರವಾಗುವುದು ವಾರ್ಷ್ಣೇಯನೆ ॥ ೪೧ ॥

ವರ್ಣಸಂಕರ ಕುಲವ ಕುಲಗೇಡಿಗಳ ಸೆಳೆವುದು ನರಕದಿ ।
ಇನ್ನವರ ಪಿತೃಗಳಿಗೆ ದುರ್ಗತಿ, ಶ್ರಾದ್ಧ ಕರ್ಮದ ಲೋಪದಿ ॥ ೪೨ ॥

ಕುಲದ ಘಾತಕರೆಸಗುತಿಹ ಈ ವರ್ಣಸಂಕರ ದೋಷದಿ ।
ಕುಲದ–ಜಾತಿಯ ಆ ಸನಾತನ ಧರ್ಮ ಅಳಿವುದು ಮೂಲದಿ ॥ ೪೩ ॥

ಹರಿಯೆ, ಆ ಕುಲಧರ್ಮ ಭ್ರಷ್ಟರು ಆದ ಮನುಜರ ವಾಸವು ।
ನರಕದಲ್ಲಿಯೆ–ತಪ್ಪದೇ ಇಹುದೆಂದು ಕೇಳುತಲಿರುವೆವು ॥ ೪೪ ॥

ಅಲಲ ! ಅತಿ-ಘನ ಪಾಪ ಕೃತ್ಯವನೆಸಗಲಣಿ ನಾವಾದೆವೈ ।
ಕೊಲಲು ಸ್ವಜನರ ರಾಜ್ಯ-ಸುಖ ಲೋಭಿಸುತ ಸಜ್ಜಾಗಿರುವೆವೈ ॥ ೪೫ ॥

ಶಸ್ತ್ರಧರಿಸದ ಸೇಡು ಬಗೆಯದ ನನ್ನನೀ ರಣರಂಗದಿ ।
ಶಸ್ತ್ರಧರಿಸಿದ ಅವರೆ ಕೊಂದರೆ ನನಗೆ ಕ್ಷೇಮವು ಬಹುಳದಿ ॥ ೪೬ ॥

ಸಂಜಯ :

ಪೇಳುತೀಪರಿ ಶೋಕದಲಿ ಕಳವಳಿಪ ಚಿತ್ತದಿ ಪಾರ್ಥನು ।
ಕಾಳಗದಿ ತಾ ಬಿಲ್ಲುಬಾಣ ಬಿಸಾಟು ರಥದಲಿ ಕುಳಿತನು ॥ ೪೭

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಕೊನೆ, ಅರ್ಜುನ ವಿಷಾದದಯೋಗ ಪ್ರಥಮಾಧ್ಯಾಯದಿ ॥

ಅಧ್ಯಾಯ ೨.

ಸಾಂಖ್ಯಯೋಗ

ಸಂಜಯಃ :

ಮರುಗುತೀಪರಿ ಕರುಣೆಯಲಿ ಕಣ್ಣೀರು ತುಂಬಿರುವಾತಗೆ ।
ಒರೆದನೀ ವಚನವನು ಮಧುಸೂದನನು ಶೋಕಿಸುವಾತಗೆ ॥ ೧ ॥

ಶ್ರೀ ಕೃಷ್ಣ :

ನಿನ್ನನೆಂತಾವರಿಸಿತರ್ಜುನ, ವಿಷಮ ಸಮಯದಿ ಮೋಹವು ।
ಇನ್ನಿದಾರ್ಯರಿಗನುಚಿತವು, ಅಪಕೀರ್ತಿಕರ, ಅಸ್ವರ್ಗ್ಯವು ॥ ೨ ॥

ನೀ ನಪುಂಸಕನಾಗದಿರು ಹೇ ಪಾರ್ಥ! ನಿನಗಿದು ಸಲ್ಲದೈ ।
ಹೀನಮನ ದೌರ್ಬಲ್ಯ ತೊರೆದು ಪರಂತಪನೆ, ಎದ್ದೇಳೆಲೈ ॥ ೩ ॥

ಅರ್ಜುನ :

ಮಾನ್ಯರಾದೀ ಭೀಷ್ಮ-ದ್ರೋಣರ ಎದುರಿಸುತ ರಣದೊಳಗೆ ನಾ ।
ಬಾಣಹೂಡುತ ಎಂತು ಕಾದಲಿ ಶತ್ರುಹರ ಮಧುಸೂದನಾ ॥ ೪ ॥

ಪೂಜ್ಯರಾದ ಗುರುಗಳ ಕೊಲ್ಲುವುದಕಿಂತಲು ।
ಈಜಗದಿ ಭಿಕ್ಷೆಯ ಅನ್ನ ತಿಂಬುದಧಿಕವು ॥
ಅರ್ಥವನ್ನೆ ಬಯಸುವ ಗುರುಗಳನ್ನು ವಧಿಸಲು ।
ರಕ್ತಸಿಕ್ತವಾಗಿಹ ಭೋಗವಿಲ್ಲಿ ತಪ್ಪದು ॥ ೫ ॥

ನಾವೆ ಅವರ ಗೆಲ್ಲಲಿ, ನಮ್ಮನವರೆ ಗೆಲ್ಲಲಿ ।
ನಾವು ತಿಳಿಯದಾದೆವು, ಶ್ರೇಯವಾವುದಿದರಲಿ ॥
ನಾವು ಕೊಂದದಾರನು ಬದುಕ ಬಯಸಲಾರೆವೊ ।
ತಾವೆ ಧಾರ್ತರಾಷ್ಟ್ರರು ನಿಂತಿರುವರೆದುರೆಲೊ ॥ ೬ ॥

ಪುರುಷಶ್ರೇಷ್ಠನೆ, ಇವುಗಳಿಂದಲಿ ವ್ಯಥೆಪಡದ ನರ ಧೀರನು ।
ಇರುತಿಹನು ಸುಖದುಃಖದಲಿ ಸಮ, ಅವನೆ ಮೋಕ್ಷಕೆ ಅರ್ಹನು ॥ ೧೫ ॥

ಇರದಸತ್ಯಕೆ ಭಾವವೆಂದಿಗು, ಸತ್ಯಕಿರದು ಅಭಾವವು ।
ಎರಡರಂತವ ಪೂರ್ಣದಲಿ ಅರಿತಿಹನು ತತ್ವಜ್ಞಾನಿಯು ॥ ೧೬ ॥

ಅವನಿಂದಲಿ ಜಗವು ತುಂಬಿಹುದಾತ ತಿಳಿ ಅವಿನಾಶಿಯು ।
ಅವನಿಗು ಈ ನಾಶರಹಿತನ ನಾಶಮಾಡಲಸಾಧ್ಯವು ॥ ೧೭ ॥

ನಾಶರಹಿತನ, ಅಪ್ರಮೇಯನ, ನಿತ್ಯನಾಗಿಹ ದೇಹಿಯು !
ಈ ಶರೀರ ವಿನಾಶಿ, ಅಂತೆಯೆ, ಕಾದು ನೀನು ಧನಂಜಯ ॥ ೧೮ ॥

ಕೊಲುವೆನವನನು ಮತ್ತೆ ಹತನವನಾದನೆಂಬುವರೀರ್ವರು ।
ತಿಳಿಯರೇನನು, ಸಾಯನಾತನು, ಅವನನಾರೂ ಕೊಲ್ಲರು ॥ ೧೯ ॥

ಮೃತ್ಯು-ಜನ್ಮಗಳಿಲ್ಲ, ಅವನೊಮ್ಮೆದ್ದು ಇರದಂತಾಗನು ।
ನಿತ್ಯ, ಶಾಶ್ವತ, ಅಜ, ಪುರಾತನ, ದೇಹವಳಿದರು ಉಳಿವನು ॥ ೨೦ ॥

ನಿತ್ಯನವ, ಅವಿನಾಶಿ, ಅವ್ಯಯ, ಅಜನು ಎಂದರಿವಾತನು ।
ಮತ್ತೆ ಯಾರನು ಎಂತು ಕೊಲಿಸುವ, ಅವನು ಕೊಲುವನದಾರನು ॥೨೧॥

ಎಂತು ನರ ಹಳೆ ಬಟ್ಟೆ ಬಿಡುತಿನ್ನೊಂದು ತೊಡುವನೊ ಹೊಸದನು ।
ಅಂತೆ ಜೀರ್ಣಶರೀರ ತ್ಯಜಿಸುತ ಜೀವ ಧರಿಪನು ಹೊಸದನು ॥ ೨೨ ॥

ಕಡಿಯಲಾರವು ಶಸ್ತ್ರ ಅವನನು ಜಲವು ತೋಯಿಸಲಾರದು ।
ಸುಡದುಬೆಂಕಿಯು ಮತ್ತೆ ಅವನನು ಗಾಳಿ ಒಣಗಿಸಲಾರದು ॥ ೨೩ ॥

ಕತ್ತರಿಸಲೊಣಗಿಸಲು ದಹಿಸಲು ತೋಯಿಸಲು ಬರದವನನು ।
ನಿತ್ಯ ಅಚಲ ಸನಾತನನು ಸ್ಥಿರ ಇರುವನೆಲ್ಲೆಡೆಗಾತನು ॥ ೨೪ ॥

ದೈನ್ಯ ದೋಷದಿಂದಲಿ ನಿಜಸ್ವಭಾವವಳಿಯಿತೈ ।
ಇನ್ನು ಧರ್ಮವರಿಯದೆ ನಾನು ನಿನಗೆ ಕೇಳ್ವೆನೈ ॥
ನನ್ನ ಶ್ರೇಯವಾವುದು ನಿಶ್ಚಯದಿ ಪೇಳೆಲೈ ।
ನಿನ್ನ ಶಿಷ್ಯನಾನಿಹೆ ಶರಣು ಬಂದೆ ಬೋಧಿಸೈ ॥

ಇಂದು ಹಗೆಗಳಿರದ ಸಮೃದ್ಧ ಧರೆಯ ರಾಜ್ಯವು ।
ಬಂದರೆಮಗೆ ಮತ್ತೆಯು ಅಮರರಾಧಿಪತ್ಯವು ॥
ಇಂದ್ರಿಯಗಳ ಶೋಷಿಪ ನನ್ನ ಶೋಕ ಕಳೆಯಲು ।
ಒಂದುಪಾಯವಾದರು ನನಗೆ ತೋರದಿರ್ಪುದು ॥

ಸಂಜಯ :

ಮಾಧವನಿಗೀಪರಿ ಪರಂತಪ ಗುಡಾಕೇಶನು ನುಡಿಯುತ ।
ಕಾದಲಾರೆನು ಎಂದು ಕೃಷ್ಣಗೆ ಪೇಳಿ ನೀರವನಾದ ತಾ ॥

ಸೈನ್ಯವೆರಡರ ಮಧ್ಯದಲಿ ಧೃತರಾಷ್ಟ್ರನೇ, ಗೋವಿಂದನು ।
ಖಿನ್ನನಾದಾತನಿಗೆ ನಗುವನ ತೆರದಿ ಈ ನುಡಿ ನುಡಿದನು ॥ ೧

ಶ್ರೀ ಕೃಷ್ಣ :

ಜ್ಞಾನಿಯಂದದಿ ವಾದಿಸುವಿ ಅಳಬಾರದವರಿಗೆ ಅಳುತಿಹೆ ।
ಜ್ಞಾನಿಗಳು ಶೋಕಿಸರು ಮೃತರಿಗೆ ಮತ್ತೆ ಜೀವಿಸುವವರಿಗೆ ॥ ೧

ಹಿಂದೆ ನಾನೂ ನೀನು, ಈ ನೃಪರಿರಲೆ ಇಲ್ಲೆಂದಲ್ಲವು ।
ಮುಂದೆಯಾದರು ನಾವು ಎಲ್ಲರು ಇರುವುದಿಲ್ಲೆಂದಲ್ಲವು ॥ ೧

ಎಂತು ಬಾಲ್ಯವೊ, ಯೌವನವೊ, ವೃದ್ಧಾಪ್ಯವೋ ಈ ದೇಹದಿ ।
ಅಂತೆ ದೇಹಾಂತರದೊಳಾದರು, ಧೀರ ಸಿಲುಕನು ಮೋಹದಿ ॥ ೧

ಶೀತ–ಶಕೆ–ಸುಖ, ದುಃಖದಾಯಕ, ವಿಷಯ ಇಂದ್ರಿಯಸ್ಪರ್ಶವು ।
ಪಾರ್ಥ, ನೀ ಸಹಿಸವುಗಳನು, ಬರುಹೋಗುವವು, ಅವು ಕ್ಷಣಿಕವು
॥ ೧

ಹೆದರಿ ರಣದಿಂದೋಡಿದವ ನೀನೆನುವರಾ ಮಹ ರಥಿಗಳು ।
ಅಧಮನೆನಿಸುವಿ, ಈಗ ನಿನ್ನನು ಮನ್ನಿಸುತ್ತಿ ಹರೆದುರೊಳು ॥ ೩೫ ॥

ನಿನ್ನ ಹಗೆಗಳು ನುಡಿಯಬಾರದ ನುಡಿಗಳೆಲ್ಲವ ನುಡಿವರೈ ।
ನಿನ್ನ ಬಲವನು ಜರೆಯುವರು, ಇದಕಿಂತ ದುಃಖವದಾವುದೈ ॥ ೩೬ ॥

ಸತ್ತರೈದುವಿ ಸ್ವರ್ಗ, ಗೆದ್ದರೆ ಪೃಥ್ವಿಭೋಗವು ನಿನಗೆಲೊ ।
ಮತ್ತೆ ಯುದ್ಧವ ಮಾಡಲೋಸುಗ ನಿಶ್ಚಯಿಸಿ ನೀ ನಿಲ್ಲೆಲೊ ॥ ೩೭ ॥

ಸುಖವು ದುಃಖವು, ಲಾಭಹಾನಿಯು, ಜಯವು ಅಪಜಯವೆಲ್ಲವು ।
ಸಕಲವೂ ಸಮವೆಂದು ಭಾವಿಸಿ ಕಾದು ; ಸೋಂಕದು ಪಾಪವು ॥ ೩೮ ॥

ನಾನು ಸಾಂಖ್ಯವ ಪೇಳಿದೆನು ; ಕೇಳೀಗ ಬುದ್ಧಿಯ ಯೋಗವ ।
ನೀನು ಹೊಂದಲು ಬುದ್ಧಿಯನು ಹರಿದೊಗೆವಿ ಕರ್ಮದ ಬಂಧವ ॥ ೩೯ ॥

ಕರ್ಮದಾರಂಭಕ್ಕೆ ನಾಶವು ಇಲ್ಲ, ವಿಘ್ನವು ಬಾರದು ।
ಧರ್ಮವಿಂತಹ ಸ್ವಲ್ಪವಾದರು, ಘೋರಭಯದಿಂಪೊರೆವುದು ॥ ೪೦ ॥

ಪಾರ್ಥನೇ, ಈ ನಿಶ್ಚಯಾತ್ಮಕ ಬುದ್ಧಿಗೊಂದೇ ಮಾರ್ಗವು ।
ಮತ್ತನ-ನಿಶ್ಚಿತ ಬುದ್ಧಿಗಿರುವವು ಶಾಖೆ ಬಹಳ, ಅನಂತವು ॥ ೪೧ ॥

ವೇದವಾದದಿ ರತರು, ಇದನುಳಿದನ್ಯವೇನಿಲ್ಲೆಂಬರು ।
ಹೇ ಧನಂಜಯ, ಇಂಥ ಬಣ್ಣದ ನುಡಿಯ ನುಡಿವರು ಮೂಢರು ॥ ೪೨ ॥

ಜನ್ಮ ಭೋಗೈಶ್ವರ್ಯಗಳು ಬಹು ವಿಧದ ಕರ್ಮದ ಫಲಗಳು ।
ಎನ್ನುತಿರುವರು ಸ್ವರ್ಗಪರರಾ ಕಾಮ್ಯಬುದ್ಧಿಯ ಜನಗಳು, ॥ ೪೩ ॥

ಇಂಥದಕೆ ಮನಸೋತವರ, ಐಶ್ವರ್ಯಭೋಗದಿ ಮಗ್ನರ ।
ಅಂಥಕಾರ್ಯಾ ಕಾರ್ಯ ನಿರ್ಣಯ ಬುದ್ಧಿಯಾಗದು ತಾಸ್ಥಿರ ॥ ೪೪ ॥

ಇರುವನವನು ಅಚಿಂತ್ಯ ಮತ್ತವ್ಯಕ್ತನೂ, ಅವಿಕಾರಿಯು।
ಅರಿತವನು ನೀನಿದನು ಆದುದರಿಂದ ಸಲ್ಲದು ಶೋಕವು ॥ ೨೫

ಇನ್ನು ನಿತ್ಯದಿ ಪುಟ್ಟುವವನವ, ಸಾಯುವವನವ ನೆನ್ನುತ।
ನೀನು ತಿಳಿದರು ಬಾಹುವೀರನೆ, ಶೋಕಿಪುದು ನಿನಗನುಚಿತ ॥ ೨೬

ಮರಣ ನಿಶ್ಚಿತ ಜನಿಸಿದವನಿಗೆ, ಮೃತಗೆ ಜನನವು ನಿಶ್ಚಿತ।
ನರನೆ, ಈ ಅನಿವಾರ್ಯ ವಿಷಯಕೆ ಶೋಕಿಪುದು ನಿನಗನುಚಿತ ॥ ೨೭

ಜನ್ಮಪೂರ್ವದಿ, ಮರಣ ನಂತರ, ಭೂತಗಳು ಅವ್ಯಕ್ತವು।
ಇನ್ನು ವ್ಯಕ್ತವು, ಮಧ್ಯದಲಿ; ಇದಕೇಕೆ ಪಾರ್ಥನೆ, ಶೋಕವು ॥ ೨೮

ಒಬ್ಬನಚ್ಚರಿಯಿಂದ ನೋಡುವ, ನುಡಿವ ಬೆರಗಿಲಿ ಅನ್ಯನು।
ಒಬ್ಬನಾಲಿಪ ಸೋಜಿಗದಿ, ಆಲಿಸಿಯು ತಿಳಿದಿಲ್ಲಾವನು ॥ ೨೯

ಸರುವ ತನುಗಳೊಳಿರುವ ಆತ್ಮವು, ಸರ್ವಕಾಲಕವಧ್ಯವು।
ತರವು ನಿನಗಲ್ಲಾವ ಭೂತರಿಗಾಗಿಯೂ ಈ ಶೋಕವು ॥ ೩೦

ನಿನ್ನ ಧರ್ಮವ ನೋಡಿದರು ಶೋಭಿಸದು ನಿನಗೀ ನಡುಕವು।
ಅನ್ಯಶ್ರೇಯವು ಧರ್ಮ ಯುದ್ಧವನುಳಿದು ಕ್ಷತ್ರಿಯಗಿಲ್ಲವು ॥ ೩೧

ತೆರೆದ ಬಾಗಿಲ ಸಗ್ಗದಂದದಿ ತಾನೆ ಒದಗಿದೆ ಯುದ್ಧವು।
ನರನೆ, ಇಂಥದು ಭಾಗ್ಯಶಾಲೀ ಕ್ಷತ್ರಿಯರಿಗೇ ಲಭ್ಯವು ॥ ೩೨

ಇನ್ನು ಮಾಡದೆ ಇದ್ದೊಡಿಂತಹ ಧರ್ಮರೂಪೀ ಯುದ್ಧವ।
ನಿನ್ನ ಕೀರ್ತಿ ಸ್ವಧರ್ಮಗಳ ಕಳಕೊಂಡು ಹೊಂದುವಿ ಪಾಪವ ॥ ೩೩ ॥

ನಿನ್ನ ಅಪಕೀರ್ತಿಯನು ಜನ ಬೀರುವರು ಸಂತತವಾಗಿಯು।
ಇನ್ನು ಸಂಭಾವಿತಗೆ ಹೇಯವು ಮರಣಕಿಂತಪಕೀರ್ತಿಯು ॥ ೩೪ ॥

ಶ್ರೀಕೃಷ್ಣ :

ಎಂದುನರ ತೊರೆಯುವನೊ ಮನದೊಳು ಬರುವ ಕಾಮಗಳೆಲ್ಲವ ।
ಎಂದು ತನ್ನೊಳು ತಾನು ತೃಪ್ತನೊ, ಅಂದು ಸ್ಥಿತಪ್ರಜ್ಞನು ಅವ ॥ ೫೫ ॥

ಆಗದವ ಉದ್ವಿಗ್ನ ದುಃಖದಿ, ಸುಖದೊಳಾಸೆಯು ನಿಡದವ ।
ರಾಗ ಭಯ ಕ್ರೋಧಗಳನಳಿದವ, ಸ್ಥಿರಮತಿಯು ಮುನಿಯೆನಿಸುವ ॥ ೫೬ ॥

ಸರುವರೊಳು ನಿಃಸಂಗನಾಗುತ, ಶುಭವ ಅಶುಭವ ಹೊಂದಿಯು ।
ಹರುಷಿಸನು ದ್ವೇಷಿಸನದಾವನು ಸ್ಥಿರವದಾತನ ಬುದ್ಧಿಯು ॥ ೫೭ ॥

ಎಂತು ತನ್ನವಯವವ ಸೆಳೆಯುವುದೆಲ್ಲ ದಿಶೆಯಿಂದಾಮೆಯು ।
ಅಂತೆ ವಿಷಯಗಳಿಂದ ಇಂದ್ರಿಯಸೆಳೆದವಗೆ ಸ್ಥಿರ ಬುದ್ಧಿಯು ॥ ೫೮ ॥

ನಿರಾಹಾರೀನರನ ವಿಷಯಗಳಳಿದರೂ ರಸವಳಿಯದು ।
ಪರಬ್ರಹ್ಮನ ಕಂಡ ಬಳಿಕಾ ರಸವು ಕೂಡಾ ಅಳಿವುದು ॥ ೫೯ ॥

ನರನೆ, ಎನಿತೋ ಯತ್ನ ಗೈದರು ಜ್ಞಾನಿಯಾಗಿಹ ಪುರುಷನು ।
ಭರದಿ ಪ್ರಮಥನಶೀಲ ಕರಣಗಳೆಳೆವ ವಾತನ ಮನವನು ॥ ೬೦ ॥

ಯೋಗಿ ತಾ ಮತ್ಪರನದಾಗಲಿ, ಬಿಗಿಯುತಿವುಗಳನೆಲ್ಲನು ।
ಹೀಗೆ ಇಂದ್ರಿಯಗಳನು ವಶದೊಳಗಿರಿಸಿಹನೆ ಸ್ಥಿತಪ್ರಜ್ಞನು ॥ ೬೧ ॥

ನರನು ವಿಷಯವ ಧ್ಯಾನಿಸಲು ಅವುಗಳಲಿ ಬಹುದಾಸಕ್ತಿಯು ।
ಬರುವ್ರದಾಸಕ್ತಿಯಲಿ ಕಾಮವು, ಕಾಮದಿಂದಲಿ ಕ್ರೋಧವು ॥ ೬೨ ॥

ಬರುವುದೈ ಸಂಮೋಹ ಕ್ರೋಧಧಿ, ಮರುಳತನ ಸಂಮೋಹದಿ ।
ಮರುಳತನದಿಂ ಬುದ್ಧಿನಾಶವು ; ಮರಣ ಬುದ್ಧಿಯನಾಶದಿ ॥ ೬೩ ॥

ರಾಗದ್ವೇಷಗಳಳಿದು ಇಂದ್ರಿಯದಿಂದ ವಿಷಯವನುಣುವವ ।
ಹೀಗೆ ಮನವನು ವಶದಲಿಟ್ಟವ ಚಿತ್ತಶಾಂತಿಯ ಪಡೆಯುವ ॥ ೬೪ ॥

ಆಗಮವು ತ್ರಿಗುಣಾತ್ಮಕವು, ಬಿಡು ತ್ರಿಗುಣಗಳ, ಸತ್ಯದೊಳಿರು।
ಯೋಗ–ಕ್ಷೇಮ ದ್ವಂದ್ವ ಬಯಸದೆ, ಆತ್ಮ ನಿಷ್ಠನದಾಗಿರು ॥ ೪೫

ಕೊಡದೆ ಬಾವಿಯು ಫಲವ, ಎಲ್ಲೆಡೆ ತುಂಬಿರುವ ಜಲರಾಶಿಯು।
ಪಡೆಯನೇ ವೇದಗಳ ಫಲ, ಬ್ರಹ್ಮನನು ಅರಿತಿಹ ಜ್ಞಾನಿಯು ॥ ೪೬

ಕರ್ಮದೊಳಗಧಿಕಾರ ನಿನಗಿದೆ, ಫಲದೊಳೆಂದಿಗು ಇಲ್ಲಲೊ।
ಕರ್ಮಫಲ ಬಯಸದಿರು, ಸಂಗ ಅಕರ್ಮದೊಳಗಿಡಬೇಡೆಲೊ ॥ ೪೭

ಯೋಗದಲಿ ಸ್ಥಿರವಿದ್ದು, ಸಂಗವ ತ್ಯಜಿಸಿ ಕರ್ಮವಮಾಡು ನೀ।
ಯೋಗವದು ತಾ ಸಮತೆ, ಸಿದ್ಧಿ ಅಸಿದ್ಧಿಯಲಿ ಸಮನಾಗು ನೀ ॥ ೪೮

ಬುದ್ಧಿಯೋಗಕ್ಕಿಂತ ಕರ್ಮ, ಧನಂಜಯನೆ, ಬಲುತುಚ್ಛವು।
ಬುದ್ಧಿಯನೆ ಆಶ್ರಯಿಸಿಕೊಂಡಿರು ಕೃಪಣನಹನು ಫಲೇಚ್ಛುವು ॥ ೪೯

ಬುದ್ಧಿಯುಕ್ತಗೆ ಪಾಪ ಪುಣ್ಯಗಳೆರಡು ಇಹದಲಿ ಸೋಂಕವು।
ಆದ್ದರಿಂದಲೆ ಯೋಗ ಸಾಧಿಸು; ಕರ್ಮಕೌಶಲ ಯೋಗವು ॥ ೫೦

ಕರುಮಫಲಗಳ ಬಿಟ್ಟು ಸಮ ಬುದ್ಧಿಯಲಿ ಇರುತಿಹ ಜಾಣರು!
ತರಿದು ಜನುಮದ ಬಂಧನವ, ನಿರ್ದೋಷ ಪದವಿಯು ಪಡೆವರು ॥ ೫೧

ಎಂದು ಮೋಹದ ಕಲುಷವನು ನೀಗುವುದೊ ನಿನ್ನಯ ಬುದ್ಧಿಯು।
ಅಂದು ಕೇಳಿದ, ಕೇಳಲಿಹ, ವಿಷಯದಲಿ ಬಹುದು ವಿರಕ್ತಿಯು ॥ ೫೨

ಇಂಥ ಶ್ರುತಿ ವಾಕ್ಯದಲಿ ಮೋಹಿತ ಬುದ್ಧಿ ನಿನ್ನದದೆಂದಿಗೆ।
ಕುಂತಿಸುತ, ಒಂದೆಡೆಗೆ ನಿಲುವುದೊ, ಯೋಗಹೊಂದುವಿ ಅಂದಿಗೆ ॥ ೫೩

ಅರ್ಜುನ:

ಎಂತು ಇಹನಾ ಸ್ಥಿತ, ಪ್ರಜ್ಞನು ಸಮಾಧಿಸ್ಥನು, ಕೇಶವ।
ಎಂತು ಆ ಸ್ಥಿರಜ್ಞಾನಿ ಕೂಡುವ, ನುಡಿವ ನೆಂತಾಚರಿಸುವ ॥ ೫೪

ಅಧ್ಯಾಯ ೩.

ಕರ್ಮಯೋಗ

ಅರ್ಜುನ :

ನಿನ್ನ ಮತದಲಿ ಕರ್ಮಕಿಂತಲು ಬುದ್ಧಿ ಶ್ರೇಷ್ಠವದಾದರೆ ।
ಎನ್ನನೇತಕೆ ಘೋರ ಕರ್ಮದಿ ನೂಕುತಿರುವೆಯೊ ಶ್ರೀಹರೆ ॥ ೧ ॥

ನನ್ನ ಬುದ್ಧಿಭ್ರಮಣ ಮಾಡುವಿ ಮಿಶ್ರವಾಕ್ಯಗಳಿಂದಲಿ ।
ಇನ್ನು ಹಿತಕರ ನುಡಿಯನೊಂದನೆ ಪೇಳು ನಿಶ್ಚಯದಿಂದಲಿ ॥ ೨ ॥

ಶ್ರೀ ಕೃಷ್ಣ :

ಮುನ್ನ ಪೇಳಿದೆ ದ್ವಿವಿಧ ನಿಷ್ಠೆಗಳನ್ನು, ಅನಘನೆ, ಲೋಕದಿ ।
ಜ್ಞಾನಯೋಗದಿ ಸಾಂಖ್ಯನಿಷ್ಠೆಯು, ಯೋಗನಿಷ್ಠೆಯು, ಕರ್ಮದಿ ॥ ೩ ॥

ಕರ್ಮವಾರಂಭಿಸದ ಮಾತ್ರಕೆ ಆಗನವ ನಿಷ್ಕರ್ಮಿಯು ।
ಕರ್ಮ ತ್ಯಜಿಸಿದ ಮಾತ್ರದಿಂದಲೆ ದೊರಕದವನಿಗೆ ಸಿದ್ಧಿಯು ॥ ೪ ॥

ಕರ್ಮಮಾಡದೆ ಯಾರು ಎಂದೂ ಒಂದು ಕ್ಷಣವಿರಲಾರರು ।
ಕರ್ಮಗೈವರು ಪ್ರಕೃತಿ ಗುಣಕೆ ಅಧೀನರಾಗುತ ಎಲ್ಲರೂ ॥ ೫ ॥

ತಡೆದು ಕರ್ಮೇಂದ್ರಿಯಗಳನು, ಮನದೊಳಗೆ ಇಂದ್ರಿಯ ವಿಷಯವ ।
ಬಿಡದೆ ಚಿಂತಿಪ ಮೂಢಮಾನವ, ಡಾಂಭಿಕನು ತಾನೆನಿಸುವ ॥ ೬ ॥

ಕಟ್ಟಿಮನದಿಂದಿಂದ್ರಿಯಂಗಳ, ಸಂಗವನು ಬಿಟ್ಟಿರುವವ ।
ಶ್ರೇಷ್ಠನವ ಕರ್ಮೇಂದ್ರಿಯಗಳಿಂ ಕರ್ಮಯೋಗವ ಗೈವವ ॥ ೭ ॥

ಕರ್ಮಶ್ರೇಷ್ಠ ಅಕರ್ಮಕಿಂತಲು, ನಿಯತ ಕರ್ಮವ ಮಾಡೆಲೈ ।
ಕರ್ಮವಿಲ್ಲದೆ ನಿನ್ನ ತನು ನಿರ್ವಾಹವಾದರು ನಡೆಯದೈ ॥ ೮ ॥

ಚಿತ್ತಶುದ್ಧಿಯೊಳವನ ದುಃಖಗಳೆಲ್ಲವೂ ನಿರ್ಮೂಲವು।
ಮತ್ತೆ ಚಿತ್ತಪ್ರಸನ್ನಗಪ್ಪುದು ಕ್ಷಿಪ್ರದಲಿ ಸ್ಥಿರಬುದ್ದಿಯು ॥ ೬

ನಿಷ್ಠೆಯಿಲ್ಲವು, ಬುದ್ಧಿಯಿಲ್ಲವು, ಯುಕ್ತನಲ್ಲದ ಮನುಜಗೆ।
ನಿಷ್ಠೆರಹಿತಗೆ ಶಾಂತಿ ದೊರಕದು, ಸುಖವದೆಲ್ಲಿ ಅಶಾಂತಗೆ ॥ ೬

ಮರುತ ತಾನೆಂತೆಳೆದುಕೊಂಡೊಯ್ಯುವುದೊ ಜಲದಲಿ ನೌಕೆಯ।
ಹರಿಘ ಕರಣಗಳನುಸರಿಪ ಮನ ಸೆಳೆವುದಂತೆಯೆ ಬುದ್ಧಿಯ ॥ ೬

ಇಂದ್ರಿಯಾರ್ಥಗಳಿಂದ ಇಂದ್ರಿಯಗಳನು ನಿಗ್ರಹಿಸಿಡುವವ।
ಇಂದ್ರತನುಜನೆ ಎಲ್ಲ ಬಗೆಯೊಳಗಾತನೇ ಸ್ಥಿರಮತಿಯುವ ॥ ೬

ಸರ್ವ ಭೂತರ ರಾತ್ರಿಯೊಳು ಸಂಯಮಿಯು ಜಾಗೃತನಿರುವನು।
ಸರ್ವ ಭೂತರು ಎಚ್ಚರಿರುವೆಡೆ ಜಾಣಮುನಿ ಮಲಗಿರುವನು ॥ ೬

ನಿರುತ ತುಂಬುತಿದ್ದರೂ ಅಚಲವಾಗಿ ಇರುತಿಹ।
ಶರಧಿಯನ್ನು ಹೊಳೆಗಳು ಬಂದು ಸೇರುವಂತೆಯೆ ॥
ಸರುವ ವಿಷಯವಾವನೊಳ್ ಸೇರುತಿರುವುವಾತಗೆ।
ದೊರಕಲಿಹುದು ಶಾಂತಿಯು, ಸಿಗದು ಕಾಮ್ಯಕಾಮಿಗೆ ॥ ೭

ತನ್ನ ಮನದಿಚ್ಛೆಗಳನೆಲ್ಲವ ಬಿಟ್ಟ ನಿಸ್ಪೃಹಿ ಮಾನವ।
ನನ್ನದದು, ನಾನೆಂದು ಗರ್ವಿಸದವನೆ ಶಾಂತಿಯ ಹೊಂದುವ ॥ ೭

ಇದುವೆ ಬ್ರಾಹ್ಮೀಸ್ಥಿತಿಯು ಪಾರ್ಥನೆ, ಮೋಹಿಸನು ಇದ ಪಡೆದವ।
ಇದರೊಳಂತ್ಯದಿ ಕೂಡ ಇರುವವ, ಬ್ರಹ್ಮನೊಳು ತಾ ಸೇರುವ ॥ ೭

ಶ್ರೀಕೃಷ್ಣಾರ್ಪಣವು.

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ।
ಈಗ ಮುಗಿಯಿತು ಸಾಂಖ್ಯಯೋಗವು ಎರಡನೆಯ ಅಧ್ಯಾಯದಿ ॥

ಸಂಗ ತೊರೆಯುತ ಮಾಡು, ಅಂತೆಯೆ, ನೀನು ಮಾಡುವ ಕರ್ಮವ ।
ಸಂಗ ತ್ಯಜಿಸುತ ಕರ್ಮಮಾಡುವ ಮನುಜ ಮುಕ್ತಿಯ ಪಡೆಯುವ ॥೧೯॥

ಕರ್ಮದಿಂದಲೆ ಜನಕ ಮೊದಲಾದವರು ಮುಕ್ತಿಯ ಪಡೆದರು ।
ಕರ್ಮಮಾಡುವುದುಚಿತ ನಿನಗೂ, ಲೋಕಸಂಗ್ರಹಕಾದರು ॥ ೨೦ ॥

ಆವ ಬಗೆಯಲಿ ಶ್ರೇಷ್ಠನಾಚರಿಸುವನೊ, ಅಂತೆಯೆ, ಇತರರು ।
ಆವುದವನು ಪ್ರಮಾಣವೆನುವನೊ ಅದನೆ ಜನರನುಸರಿಪರು ॥ ೨೧ ॥

ನರನೆ, ಎನಗಿಲ್ಲಾವುದೂ ಕರ್ತವ್ಯ, ಮೂರೂ ಲೋಕದಿ ।
ಇರದುದನು ನಾ ಪಡೆಯಬೇಕಿಲ್ಲಾದರೂ ಇಹೆ ಕರ್ಮದಿ ॥ ೨೨ ॥

ನಾನು ಸಂತತ ಸಾವಧಾನದಿ ಇರದೆಹೋದರೆ ಕರ್ಮದಿ ।
ಮಾನವರು ನಡೆದಾರು ಎಲ್ಲಾ ಬಗೆಯೊಳೆನ್ನೀಮಾರ್ಗದಿ ॥ ೨೩ ॥

ನಾನು ಕರ್ಮವ ಗೈಯದಿರ್ದೊಡೆ ಭ್ರಷ್ಟರಾಗುವರೀಜನ ।
ನಾನೆ ಪ್ರಜೆಗಳ ನಾಶ, ಸಂಕರಗಳಿಗೆ ಆಗುವೆ ಕಾರಣ ॥ ೨೪ ॥

ಎಂತು ಗೈವರೊ ಕರ್ಮವನು ಆಸಕ್ತಿಯಿಂದಲಿ ಮೂಢರು ।
ಅಂತೆ, ಸಂಗವ ತೊರೆದು ಜನಹಿತಕಾಗಿ ಮಾಡಲಿ ಜಾಣರು ॥ ೨೫ ॥

ಜ್ಞಾನಿ ಕರ್ಮಾಸಕ್ತ ಅಜ್ಞರ ಬುದ್ಧಿ ಭೇದಿಸಬಾರದೈ ।
ತಾನು ಯೋಗದಿ ಕರ್ಮಗೈಯುತ ಮಾಡಿಸಲಿ ಅವರಿಂದಲೈ ॥ ೨೬ ॥

ನಡೆಯುತಿದ್ದರು ಪ್ರಕೃತಿಗುಣ ಮೂಲಕವೆ ಕರ್ಮಗಳೆಲ್ಲವು ।
ನಡೆಸುವವ ತಾನೆಂದು ತಿಳಿವನು ಅಹಂಕಾರವಿಮೂಢನು ॥ ೨೭ ॥

ಗುಣದ ಕರ್ಮದ ವಿಭಜನೆಯ ತತ್ವವನು ತಿಳಿದಿಹ ಪುರುಷನು ।
ಗುಣದಿ ಗುಣಗಳು ವರ್ತಿಸುವುವೆಂದರಿತು ಸಕ್ತನದಾಗನು ॥ ೨೮ ॥

ಯಜ್ಞವೆನಿಸದ ಅನ್ಯಕರ್ಮವು ಜಗದಿ ಬಂಧನಕಾರಿಯೈ ।
ಯಜ್ಞಕಾಗಿಯೆ. ಸಂಗತ್ಯಜಿಸುತ, ನರನೆ, ಕರ್ಮವಮಾಡೆಲೈ ॥

ಯಜ್ಞದೊಂದಿಗೆ ಮೊದಲು ಪ್ರಜೆಗಳ ಸೃಜಿಸಿ ಬ್ರಹ್ಮನು ನುಡಿದನು ।
ಯಜ್ಞದಿಂದಭಿವೃದ್ಧಿ ಹೊಂದಿರಿ, ನಿಮಗದಾಗಲಿ ಸುರಭಿಯು ॥ ೧

ತಣಿಸಿರಿದರಿಂ ನೀವು ಸುರರನು, ಸುರರು ನಿಮ್ಮನು ತಣಿಸಲಿ ।
ತಣಿಸಿರೊಬ್ಬರನೊಬ್ಬರೀ ಪರಿ, ಪರಮಹಿತ ನಿಮಗಾಗಲಿ ॥ ೧

ಕೊಡುವರೈ ನಿಮಗಿಷ್ಟಭೋಗವ, ಸುರರು ಯಜ್ಞದಿ ತುಷ್ಟರು ।
ಪಡೆದುದವರಿಂದವರಿಗೀಯದೆ ಉಣ್ಣುವವರೇ ಚೋರರು ॥ ೧

ಜನ್ನದಲಿ ಉಳಿದೆನ್ನ ಸೇವಿಪ ಸಂತ, ಕಲುಷವನೀಗುವ ।
ಅನ್ನವನು ತನಗಾಗಿಯೇ ಅಡುವವನು, ಪಾಪವನುಂಬುವ ॥ ೧

ಅನ್ನದಿಂ ಪ್ರಾಣಿಗಳು ಪುಟ್ಟುವವನ್ನ ಮಳೆಯಿಂ ಬರುವುದು ।
ಇನ್ನು ಮಳೆ ತಾ ಯಜ್ಞದಿಂದಲಿ, ಯಜ್ಞ ಕರ್ಮದಿ ಜನಿಪುದು ॥ ೧

ಬ್ರಹ್ಮಕರ್ಮಕೆ ಕಾರಣನು ತಿಳಿ, ಬ್ರಹ್ಮ ಅಕ್ಷರ ಜನ್ಯನು ।
ಬ್ರಹ್ಮನೆಲ್ಲೆಡೆಗಿರುವ, ಅಂತೆಯೆ, ನಿರುತಯಜ್ಞದೊಳಿರುವನು ॥ ೧

ನರನೆ, ಆವನು ಅನುಸರಿಸನೊ, ಹೀಗೆ ತಿರುಗುವ ಚಕ್ರವ ।
ಇರುವನವ ಪಾಪಾಯು, ವಿಷಯಾಸಕ್ತ, ವ್ಯರ್ಥದಿ ಬಾಳುವ ॥ ೧

ನಿರತನಾದವಗಾತ್ಮದಲ್ಲಿಯೆ, ಆತ್ಮತೃಪ್ತಿಯ ಪಡೆದಗೆ ।
ಇರದು ಆವುದು ಕಾರ್ಯ, ಆತ್ಮಾನಂದ ಹೊಂದಿದ ಪುರುಷಗೆ ॥ ೧

ಕರುಮಗೈದರು, ಗೈಯದಿದ್ದರು, ಸ್ವಾರ್ಥವಾತನಿಗಿಲ್ಲವು ।
ಸರುವ ಭೂತರೊಳಾತನಿಗೆ ಇನ್ನಾವ ಸ್ವಾರ್ಥವು ಇಲ್ಲವು ॥ ೧

ಕವಿವವೊಲು ಹೊಗೆ ಬೆಂಕಿಯನು, ಮಲ ಮುಕುರವನು, ಪರೆಗರ್ಭವ ।
ಕವಿದಿಹವು ಈ ಕಾಮಕ್ರೋಧಗಳೆಂಬ ಹಗೆಗಳು ಜ್ಞಾನವ ॥ ೩೮ ॥

ನಿತ್ಯಶತ್ರುವು ಕಾಮರೂಪೀ ಅಗ್ನಿ, ತೃಪ್ತಿಯ ನರಿಯದು ।
ಮತ್ತೆ ಪಾರ್ಥನೆ, ಜ್ಞಾನಿಗಳ ಜ್ಞಾನವನು ಆವರಿಸಿರುವುದು ॥ ೩೯ ॥

ಮನಸು, ಇಂದ್ರಿಯ, ಬುದ್ಧಿಗಳಲಿದು ವಾಸಮಾಡುತಲಿರುವುದು ।
ಮನುಜರೆಲ್ಲರ ಜ್ಞಾನವಾವರಿಸುತ್ತ ಮೋಹದಿ ಸೆಳೆವುದು ॥ ೪೦ ॥

ನೀನು ಈ ಕಾರಣದಿ ಮೊದಲಿಗೆ, ಇಂದ್ರಿಯವ ನಿಗ್ರಹಿಸೆಲೋ ।
ಜ್ಞಾನ ವಿಜ್ಞಾನವನು ನಾಶಿಪ ಪಾಪಿಯನು ಸಂಹರಿಸೆಲೊ ॥ ೪೧ ॥

ಎನುವರಿಂದ್ರಿಯ ಸೂಕ್ಷ್ಮ, ಇಂದ್ರಿಯಕಿಂತಲೂ ಮನಸೂಕ್ಷ್ಮವು ।
ಮನಸಿಗಿಂತಲು ಬುದ್ಧಿ ಸೂಕ್ಷ್ಮವು, ಬುದ್ಧಿಗಿಂತವ ಸೂಕ್ಷ್ಮನು ॥ ೪೨ ॥

ಅರಿತು ಬುದ್ಧಿಗತೀತ-ಆತ್ಮನ, ಇರಿಸುತವನಲಿ ಮನವನು ।
ಪರಮವೀರನೆ, ವಧಿಸು ದುರ್ಜಯ ಕಾಮರೂಪೀ ಹಗೆಯನು ॥ ೪೩ ॥

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ಕರ್ಮಯೋಗವು ಮೂರನೆಯ ಅಧ್ಯಾಯದಿ ॥

ತೊಡಗಿಹನು ಗುಣಕರ್ಮದಲಿ ಆ ಪ್ರಕೃತಿಗುಣ ಸಂಮೂಢನು ।
ಕೆಡಿಸಬಾರದು ಜ್ಞಾನಿ ಅರಿಯದ ಮಂದಮತಿಗಳ ಮನವನು ॥ ೨

ಕರುಮಗಳನೆಲ್ಲವನು ಎನಗಧ್ಯಾತ್ಮ ಮನದಿಂದರ್ಪಿಸೈ ।
ತೊರೆಯುತಾಸೆಯ ಮಮತೆಯಿಲ್ಲದೆ, ಚಿಂತಿಸದೆ, ನೀ ಕಾದೆಲೈ ॥ ೩

ಮತ್ತೆ ದ್ವೇಷವ ಬಿಟ್ಟು ಶ್ರದ್ಧೆಯನಿಟ್ಟು ನನ್ನೀ ಮತದಲಿ ।
ನಿತ್ಯ ನಡೆಯುವ ಮನುಜನಾಗುವ ಮುಕ್ತ, ಕರ್ಮಗಳಿಂದಲಿ ॥ ೩

ದೋಷವರಸುತ ನನ್ನ ಮತ ವಾಚರಿಸಲಾರದ ಮೂಢರು ।
ನಾಶ ಹೊಂದುವರೆಂದು ತಿಳಿ, ಆ ಸರ್ವಜ್ಞಾನ ವಿಹೀನರು ॥ ೩

ಪ್ರಾಣಿಗಳು ನಿಜಪ್ರಕೃತಿಗನುಗುಣವಾಗಿ ನಡೆಯುತಲಿರುವವೈ ।
ಜ್ಞಾನಿಯೂ ಸಹ ಅಂತೆಯೇ, ನಿಗ್ರಹವು ಮಾಡುವುದೇನೆಲೈ ॥ ೩

ವಿಷಯ ದೊಳಗಿಂದ್ರಿಯದ ಪ್ರೀತಿ–ದ್ವೇಷ ನಿಯಮಿತವಿರುವುವು ।
ವಶನು ಇವುಗಳಿಗಾಗಕೂಡದು, ಮಾರ್ಗಕಂಟಕವೈ, ಇವು ॥ ೩

ಸುಗಮವಹ ಪರಧರ್ಮಕಿಂತಲು ಶ್ರೇಷ್ಠ, ವಿಗುಣ ಸ್ವಧರ್ಮವು ।
ಮಿಗಿಲು ಮರಣ ಸ್ವಧರ್ಮದಲಿ, ಭಯಭರಿತವದು ಪರಧರ್ಮವು ॥ ೩

ಅರ್ಜುನ :

ಇಚ್ಛೆಯಿಲ್ಲದೆ, ಬಲುಮೆಯಿಂದೆನೆ, ಸಿಲುಕಿಕೊಂಡಿಹ ಮಾನವ, ।
ಅಚ್ಯುತನೆ, ತಾನಾರ ಪ್ರೇರಣೆಯಿಂದ ಪಾಪವ ನೆಸಗುವ ॥ ೩

ಶ್ರೀಕೃಷ್ಣ :

ಕಾಮಕ್ರೋಧಗಳಿಹವು ಪ್ರೇರಕ, ಇವು ರಜೋಗುಣ ಜನ್ಯವು ।
ಈ ಮಹಾ ಪಾಪಿಗಳು ಹಗೆಗಳು ಇಹದಿ, ತೃಪ್ತಿಯನರಿಯವು ॥ ೩

ಪೊರೆಯಲೋಸುಗ ಸುಜನರನು. ದುರ್ಜನರ ನಾಶವಗೊಳಿಸಲು ।
ಧರುಮವನು ಸಂಸ್ಥಾಪಿಸಲು ಅವತರಿಸುವೆನು ಯುಗಯುಗದೊಳು ॥ ೮ ॥

ನರನೆ, ನನ್ನೀ ಜನ್ಮ ಕರ್ಮದ ದಿವ್ಯ ತತ್ವವನರಿತವ ।
ಮರಣ ಹೊಂದಲು, ಮತ್ತೆ ಜನಿಸದೆ, ನನ್ನೊಳಗೆ ತಾ ಸೇರುವ ॥ ೯ ॥

ಕ್ರೋಧಭಯರಾಗಾದಿ ರಹಿತರು ಮನ್ಮಯರು, ಮಮ ಶರಣರು ।
ಸೇರ್ಪರೆನ್ನೊಳು ಜ್ಞಾನ-ತಪ-ಪರಿಶುದ್ಧರಾದ ಅನೇಕರು ॥ ೧೦ ॥

ಭಜಿಪರಾರೆಂತೆನ್ನ ನವರಿಗೆ ಕೊಡುವೆನಂತೆಯೆ ಫಲವನು ।
ವಿಜಯ ಎಲ್ಲಾತೆರದಿ ನರರನುಸರಿಪರೆನ್ನಯ ಪಥವನು ॥ ೧೧ ॥

ಕರ್ಮಫಲದಾಕಾಂಕ್ಷಿಗಳು ದೇವತೆಯ ಪೂಜಿಪರಿಲ್ಲಿಯೆ ।
ಕರ್ಮಫಲ ದೊರಕುವುದು ಕ್ಷಿಪ್ರದಿ ಅವರಿಗೀ ಜಗದಲ್ಲಿಯೆ ॥ ೧೨ ॥

ನಾನು ಸೃಜಿಸಿದೆ ನಾಲ್ಕು ವರ್ಣವ, ಕರ್ಮಗುಣಗಳ ಭೇದದಿ ।
ನಾನಕರ್ತನು ಕರ್ತನಾಗಿಯು ಅವ್ಯಯನು ತಿಳಿಚೆಂದದಿ ॥ ೧೩ ॥

ಕರುಮ ಫಲಲಾಲಸೆಯು 'ಇಲ್ಲೆನಗಂಟಲಾರದು ಕರ್ಮವು ।
ಅರಿತುಕೊಂಡವಗೆನ್ನನೀ ಪರಿ, ಕರ್ಮಬಂಧನವಿಲ್ಲವು ॥ ೧೪ ॥

ಪೂರ್ವದಲಿ ಮೋಕ್ಷಾರ್ಥಿಗಳು ಇದನರಿತು ಗೈದರು ಕರ್ಮವ ।
ಪೂರ್ವಜರು ಮೊದಲೆಸಗಿದಂತೆಯೆ ಮಾಡು ನೀನೂ ಕರ್ಮವ ॥ ೧೫ ॥

' ಕರ್ಮವಾವುದಕರ್ಮವಾವುದು ' ಎಂದು ಕವಿಯೂ ಭ್ರಮಿಸುವ ।
ಕರ್ಮ ವಿಷಯವ ನಿನಗೆ ತಿಳಿಸುವೆ, ಅರಿತು ದಾಟುವಿ ಅಶುಭವ ॥ ೧೬ ॥

ಕರುಮವನು ನೀ ತಿಳಿಯಬೇಕು, ವಿಕರ್ಮ ತಿಳಿಯಲುಬೇಕೆಲೊ ।
ಅರಿಯಬೇಕು ಅಕರ್ಮವನು ಸಹ, ಗಹನ ಕರ್ಮದ ಗತಿಯೆಲೊ ॥ ೧೭ ॥

ಅಧ್ಯಾಯ ೪.

ಜ್ಞಾನಯೋಗ

ಶ್ರೀಕೃಷ್ಣ :

ಸೂರ್ಯನಿಗೆ ಪೇಳಿದೆನು ಅವ್ಯಯುವಾದ ಈ ಯೋಗವನು ನಾ ।
ಸೂರ್ಯ ಮನುವಿಗೆ ಒರೆದ, ಮನು ಇಕ್ಷ್ವಾಕುವಿಗೆ ಉಸುರಿದನು ತಾ
||

ಈ ಪರಂಪರ ಯೋಗ ರಾಜರ್ಷಿಗಳಿಗೂ ತಿಳಿದಿದ್ದಿತ್ತೈ ।
ಹೇ ಪರಂತಪ, ದೀರ್ಘ ಕಾಲಾವಧಿಯೊಳೀಗದು ಅಳಿದಿತ್ತೈ ||

ನೀನು ನನ್ನಯ ಭಕ್ತಸಖ ನಿಹೆ ಅಂತೆ, ಈ ಘನ ಗೌಪ್ಯವ ।
ನಾನು ಪೇಳಿದೆ ನಿನಗೆ ಈಗಲೆ ಆ ಪುರಾತನ ಯೋಗವ ||

ಅರ್ಜುನ :

ಈಗ ನೀ ಜನಿಸಿರುವಿ, ಸೂರ್ಯನದೆಂದೊ ಹಿಂದೆಯೆ ಜನಿಸಿದ ।
ಹೇಗೆ ತಿಳಿಯಲಿ ನಾನು, ನೀ ಮೊದಲಿದನು ಪೇಳಿದೆಯೆಂಬುದ ||

ಶ್ರೀಕೃಷ್ಣ :

ನನಗು ನಿನಗೂ ಅರ್ಜುನನೆ, ಬಹು ಜನುಮಗಳು ಈಗಾದುವೈ ।
ನನಗೆ ತಿಳಿಯುವುದೆಲ್ಲವಿದು, ನಿನಗದರ ಅರಿಕೆಯು ಇಲ್ಲವೈ ||

ಜನ್ಮರಹಿತನು ಅವ್ಯಯಾತ್ಮನು ಭೂತರೀಶ್ವರನಾಗಿಯೂ ।
ನನ್ನ ಮಾಯಾಬಲದಿ ಜನಿಸುವೆ, ನನ್ನ ಪ್ರಕೃತಿಯಹೊಂದಿಯೂ ||

ಎಂದಿಗೆಂದಿಗೆ ಧರ್ಮಕುಂದಿ ಅಧರ್ಮ ತಾ ಹೆಚ್ಚುವುದೆಲೊ ।
ಅಂದಿಗಂದಿಗೆ ಭಾರತನೆ. ನನ್ನನ್ನು ನಾ ಸೃಜಿಸುವೆನೆಲೊ || ೭

ಕರುಮದಲ್ಲಿ ಅಕರ್ಮ, ಕರುಮವ ತಾನಕರ್ಮದಿ ನೋಳ್ಪವ ।
ನರರೊಳೆನಿಸುವ ಜಾಣ, ಯೋಗಿಯು ; ಪೂರ್ಣಕರ್ಮವಗೈವವ ।

ಕರುಮಫಲ ವಿಚ್ಛಿಸದೆ ಜ್ಞಾನಾಗ್ನಿಯಲಿ ಕರ್ಮವ ದಹಿಪನ ।
ಕರೆಯುವರು ಬುಧಜನಗಳೆಲ್ಲರು ಪಂಡಿತನು ಎನುತಾತನ ।

ಕರ್ಮಫಲದಾಸಕ್ತಿರಹಿತ, ನಿರಾಶ್ರಯನು, ಸಂತೃಪ್ತನು ।
ಕರ್ಮಗಳಲಿ ಪ್ರವೃತ್ತನಾಗಿಯು ಮಾಡದವ, ಅವನೇನನು ॥

ಮನವ ಗೆಲಿದವ, ಆಸೆಯಿಡದವ, ಸರ್ವಸಂಗತ್ಯಾಗಿಯು ।
ತನುವಿನಿಂದಲಿ ಕರ್ಮಗೈದರು ತಾಕದವನಿಗೆ ಪಾಪವು ॥

ಸಹಜ ಲಾಭದಿ ತೃಪ್ತ, ದ್ವಂದ್ವಾತೀತ, ಮತ್ಸರರಹಿತನು ।
ಇಹನು ಸಿದ್ಧಿ ಅಸಿದ್ಧಿಯಲಿ ಸಮ ಕರ್ಮಗೈದರು ಮುಕ್ತನು ॥

ತನ್ನ ಚಿತ್ತವನಿರಿಸಿ ಜ್ಞಾನದಿ, ಸಂಗರಹಿತ, ವಿಮುಕ್ತನು ।
ಯಜ್ಞವೆಂದೇ ಗೈವ ಕರ್ಮಗಳೆಲ್ಲ ಪಡೆವುವು ಲಯವನು ॥

ಬ್ರಹ್ಮ ಹವಿ ಅರ್ಪಣವು, ಬ್ರಹ್ಮಾಗ್ನಿಯಲಿ ಹವಿಪನೆ ಬ್ರಹ್ಮನು ।
ಬ್ರಹ್ಮನನು ಕರ್ಮದಲಿ ಕಾಂಬನು ; ಬ್ರಹ್ಮನನೆ ತಾ ಪಡೆವನು ॥

ಅನ್ಯ ಕೆಲ ಯೋಗಿಗಳು ದೇವತೆಗಳನು ಪೂಜಿಸಿ ಯಜಿಪರು ।
ಇನ್ನು ಬ್ರಹ್ಮಾಗ್ನಿಯಲಿ ಯಜ್ಞವ ಹವಿಸಿ ಯಜಿಪರು ಹಲವರು ॥

ಶ್ರವಣ ಮೊದಲಾದಿಂದ್ರಿಯಂಗಳ, ಸಂಯಮಾಗ್ನಿಯೊಳನ್ಯರು ।
ಹವಿಸುವರು ಶಬ್ದಾದಿ ವಿಷಯವ, ಇಂದ್ರಿಯಾಗ್ನಿಯೊಳಿತರರು ॥

ಪ್ರಾಣ ಹಾಗೂ ಸಕಲ ಇಂದ್ರಿಯ ಕರ್ಮಗಳನಿನ್ನಿತರರು ।
ಜ್ಞಾನ–ಪ್ರಜ್ವಲಿತಾತ್ಮ ಸಂಯಮ ಯೋಗ ಅನಲದಿ ಹವಿಪರು ॥

ಅನ್ಯ ಹಲವು ಪ್ರಯತ್ನಶೀಲರು ಕಠಿಣ ವ್ರತವಾಚರಿಪರು ।
ಇನ್ನು ಧನ-ತಪಯೋಗ-ವೇದಾಧ್ಯಯನ-ಜ್ಞಾನದಿ ಯಜಿಪರು ॥ ೨೮ ॥

ಮತ್ತೆ ಪ್ರಾಣಾಯಾಮ ನಿರತರು, ಪ್ರಾಣದಲ್ಲಿ ಅಪಾನವ ।
ಮತ್ತಪಾನದಿ ಪ್ರಾಣ ಹವಿಪರು, ತಡೆದು ಪ್ರಾಣಾಪಾನವ ॥ ೨೯ ॥

ಯಜಿಸುವರು ಪ್ರಾಣದಲಿ ಪ್ರಾಣವ, ಕೆಲರು ನಿಯತಾಹಾರರು ।
ಯಜಿಸಿ ಪಾಪವನಳಿದವರೆ, ಯಜ್ಞವನು ತಿಳಿದವರಿರುವರು ॥ ೩೦ ॥

ಯಜ್ಞ ಶೇಷಾಮೃತವನುಂಬರು, ಪಡೆವರವ್ಯಯ ಬ್ರಹ್ಮನ ।
ಯಜ್ಞ ಮಾಡದಗಿಹವೆ ಇಲ್ಲವು, ಪರವದೆಲ್ಲಿಹುದರ್ಜುನ ॥ ೩೧ ॥

ವಿವಿಧ ಯಜ್ಞಗಳಿಂತು ವೇದಗಳಲ್ಲಿ ವಿಸ್ತೃತವಿರುವುವು ।
ಇವುಗಳೆಲ್ಲವು ಕರ್ಮಜನ್ಯವು, ಎಂದು ತಿಳಿದರೆ ಮೋಕ್ಷವು ॥ ೩೨ ॥

ಜ್ಞಾನ ಯಜ್ಞವು ಶ್ರೇಷ್ಠ ಪಾರ್ಥನೆ, ದ್ರವ್ಯಯಜ್ಞಕ್ಕಿಂತಲೂ ।
ಜ್ಞಾನದೊಳು ಪರಿಪೂರ್ಣವಾಗುವುವೆಲ್ಲ ರೀತಿಯ ಕ್ರಿಯೆಗಳು ॥ ೩೩ ॥

ತತ್ವವಿದ ಜ್ಞಾನಿಗಳು ನಿನಗೀ ಜ್ಞಾನ ಉಪದೇಶಿಪರೆಲೊ ।
ಮತ್ತೆ ನಮಿಸುತ, ಪ್ರಶ್ನಿಸುತ ಸೇವಿಸುತಲದ ನೀ ತಿಳಿಯೆಲೊ ॥ ೩೪ ॥

ಇಂಥ ಬಗೆಯನ್ನರಿತ ನಂತರ ಮೋಹವನು ನೀ ಹೊಂದೆಯೈ ।
ಕುಂತಿಸುತ, ನಿನ್ನಾತ್ಮದೊಳು, ಎನ್ನೊಳಗು ಭೂತರ ಕಾಂಬೆಯೈ ॥ ೩೫ ॥

ಎಲ್ಲ ಪಾಪಿಷ್ಠರಲಿ ಹೆಚ್ಚಿನ ಪಾಪಿಯಾದರು ಕೂಡ ನೀ ।
ಎಲ್ಲ ಪಾಪಗಳನ್ನು ದಾಟುವಿ, ಜ್ಞಾನನೌಕೆಯುಬಲದಿ ನೀ ॥ ೩೬ ॥

ಎಂತು ಪ್ರಜ್ವಲಿಪಾಗ್ನಿ ಇಂಧನವನ್ನು ಭಸ್ಮೀಕರಿಪುದು ।
ಅಂತೆಯೇ ಜ್ಞಾನಾಗ್ನಿ ಕರ್ಮಗಳೆಲ್ಲವನು ತಾ ದಹಿಪುದು ॥ ೩೭ ॥

ಅಧ್ಯಾಯ ೫.

ಸಂನ್ಯಾಸಯೋಗ

ಅರ್ಜುನ:

ಒಮ್ಮೆ ಸಂನ್ಯಾಸವನು ಪೊಗಳುವಿ, ಒಮ್ಮೆ ಕರ್ಮದ ಯೋಗವ ।
ಒಮ್ಮನದಿ ಪೇಳೆರಡರೊಳು ಹಿತವಾದುದಾವುದೊ ಮಾಧವ ॥ ೧ ॥

ಶ್ರೀ ಕೃಷ್ಣ :

ಪರಮ ಹಿತಕರ ಕರ್ಮಯೋಗವು, ಅಂತೆಯೇ ಸಂನ್ಯಾಸವು ।
ಎರಡರೊಳು ಸಂನ್ಯಾಸಕಿಂತಲು ಕರ್ಮಯೋಗವೆ, ಶ್ರೇಷ್ಠವು ॥ ೨ ॥

ನಿತ್ಯದಲಿ ಸಂನ್ಯಾಸಿಯುವ ತಿಳಿ, ದ್ವೇಷ ಇಚ್ಛೆಗಳಿಡದವ ।
ಮತ್ತೆ ಸುಲಭದಿ ಬಂಧ ಮುಕ್ತನು, ದ್ವಂದ್ವರಹಿತನದಾದವ ॥ ೩ ॥

ಯೋಗ-ಸಾಂಖ್ಯವು ಭಿನ್ನ ಮೂಢಗೆ, ಪಂಡಿತಗೆ ಹಾಗಲ್ಲವು ।
ಸಾಗಿಸಲು ಚನ್ನಾಗಿ ಒಂದನು, ಎರಡರದು ಫಲ ಲಭ್ಯವು ॥ ೪ ॥

ಸಾಂಖ್ಯಮಾರ್ಗಿಯು ಪಡೆವ ಸ್ಥಾನವ, ಯೋಗಿಯಾದರು ಪಡೆವನು ।
ಸಾಂಖ್ಯಯೋಗಗಳೆರಡನೊಂದೇ ಎಂದು ನೋಳ್ಪನೆ ಜಾಣನು ॥ ೫ ॥

ಯೋಗವಿಲ್ಲದೆ ವೀರ ಪಾರ್ಥನೆ, ದುರ್ಲಭವು ಸಂನ್ಯಾಸವು ।
ಯೋಗಯುಕ್ತನದಾದ ಮುನಿಗತಿ ಶೀಘ್ರ ಲಭಿಪುದು ಮೋಕ್ಷವು ॥ ೬ ॥

ನಿರ್ಮಲಾತ್ಮನು, ಯೋಗಯುಕ್ತನು, ಮನಸು ಇಂದ್ರಿಯ ಗೆಲಿದವ ।
ಕರ್ಮಗೈದರು ಇಹನಲಿಪ್ತನು, ಪರರ ತನ್ನೊಲು ಬಗೆವವ ॥ ೭ ॥

ನೋಡಲಿ, ಕೇಳಲಿ, ಮುಟ್ಟಲಿ, ಮೂಸಲಿ, ।
ತಿನ್ನಲಿ, ಮಲಗಲಿ, ಉಸಿರಾಡಿಸಲಿ, ॥

ಜ್ಞಾನದಂತೆ ಪವಿತ್ರವಾದುದು ಜಗದಿ ಮತ್ತೇನಿಲ್ಲವೈ ।
ತಾನು ತನ್ನೊಳು ಸಿದ್ಧಯೋಗಿ, ಸಕಾಲದೊಳಗದ ಪಡೆವನ್ನೆ

ಜ್ಞಾನಪಡೆವ ಜಿತೇಂದ್ರಿಯನು, ತತ್ಪರನು, ಶ್ರದ್ಧಾವಂತನು ।
ಜ್ಞಾನ ಹೊಂದುತ ಶೀಘ್ರದಲಿ ತಾ ಪರಮ ಶಾಂತಿಯುಪಡೆವನು

ಅಜ್ಞ, ಶ್ರದ್ಧಾಹೀನ, ಸಂಶಯು ಜೀವಿ, ನಾಶವ ಪಡೆವನು ।
ಇನ್ನು ಇಹಪರವಿಲ್ಲವವನಿಗೆ, ಸಂಶಯಿಯು ಸುಖ ಹೊಂದನು

ಜ್ಞಾನದಿಂ ಸಂದೇಹವಳಿವವ, ಕರ್ಮಫಲವನು ಯೋಗದಿ ।
ತಾನೆ ತ್ಯಜಿಸುವ, ಆತ್ಮಜ್ಞಾನಿಯು ಬದ್ಧನಾಗನು, ಕರ್ಮದಿ

ಅಂತೆ, ಅಜ್ಞಾನದಲಿ ಜನಿಸಿದ ಮನದ ಸಂದೇಹವನು ನೀ ।
ಕುಂತಿಸುತ, ಕಡಿ, ಜ್ಞಾನಖಡ್ಗದಿ, ಯೋಗಹೊಂದುತ ನಿಲ್ಲು ನೀ

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗಿತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ಜ್ಞಾನ ಯೋಗವು ನಾಲ್ಕನೆಯ ಅಧ್ಯಾಯದಿ ॥

ಕೋವಿದನು ಸಮದರ್ಶಿ, ವಿದ್ಯಾವಿನಯಯುತ ಬ್ರಾಹ್ಮಣನಲಿ ।
ಗೋವಿನಲಿ ಆನೆಯಲಿ ಹಾಗೂ ಶುನಕನಲಿ ಅಂತ್ಯಜನಲಿ ॥ ೧೮ ॥

ಸಾಮ್ಯದಲಿ ಸ್ಥಿರಚಿತ್ತರಿಹದೊಳು ಸೃಷ್ಟಿಕ್ರಮವನು ಗೆಲುವರು ।
ಬ್ರಹ್ಮ ತಾ ನಿರ್ದೋಷಿ, ಸಮ ಆದುದಕೆ ಬ್ರಹ್ಮನಲಿರುವರು ॥ ೧೯ ॥

ಸ್ಥಿರಮತಿಯು ಮೋಹಿಸನು ಬ್ರಹ್ಮಜ್ಞಾನಿ ಬ್ರಹ್ಮನೊಳಿರುವನು !
ಹರುಷಿಸನು ಪ್ರಿಯವಾದುದಕೆ, ಅಪ್ರಿಯಕೆ ಚಿಂತಿಸನಾತನು ॥ ೨೦ ॥

ಘನ್ನ ಆತ್ಮಾನಂದ ಹೊಂದುವ ಬಾಹ್ಯವಿಷಯ ವಿರಕ್ತನು ।
ಇನ್ನು ಅಕ್ಷಯ ಸೌಖ್ಯಪಡೆಯುವ ಬ್ರಹ್ಮಯೋಗದಿ ಮಗ್ನನು ॥ ೨೧ ॥

ಇರುತಿಹವು ಸಂಸ್ಪರ್ಶದಿಂಬಹ ಭೋಗ ಕೊನೆಮೊದಲುಳ್ಳವು ।
ನರನೆ, ದುಃಖಕೆ ಮೂಲವಿವು ಇರದಿಲ್ಲಿ ಬುಧರಿಗೆ ಸ್ನೇಹವು ॥ ೨೨ ॥

ತನುವ ತ್ಯಜಿಸುವ ಮುನ್ನ ಇಹದಲಿ ಕಾಮಕ್ರೋಧದಿ ಜನಿಸುವ ।
ಮನದ ತಾಪವ ಸಹಿಸಬಲ್ಲಾ ನರನೆಯೋಗಿಯು ಸುಖಿಯುವ ॥ ೨೩ ॥

ಹೀಗೆ ತನ್ನೊಳು ಸುಖವ ಅಂತಶ್ಶಾಂತಿ ಜ್ಯೋತಿಯ ಹೊಂದುತ ।
ಯೋಗಿ ಹೊಂದುವ ಬ್ರಹ್ಮನನು, ತಾ ಬ್ರಹ್ಮಭೂತನು ಆಗುತ ॥ ೨೪ ॥

ಸರ್ವಭೂತರ ಹಿತದಿ ಮಗ್ನನು ಶಂಕೆಯಳಿದ ಯತಾತ್ಮನು ।
ಸರ್ವಪಾಪಗಳನ್ನು ಕಳೆದಿಹ ಋಷಿಯು ಮುಕ್ತಿಯ ಪಡೆವನು ॥ ೨೫ ॥

ಮನವ ಜಯಿಸಿದ ಕಾಮಕ್ರೋಧಗಳಳಿದ, ಆತ್ಮಜ್ಞಾನದಾ ।
ಮುನಿಯ ಸುತ್ತಲು ಬ್ರಹ್ಮನಿರ್ವಾಣವದು ಸುತ್ತುವುದೈ ಸದಾ ॥ ೨೬ ॥

ಹೋಗಲಾಡಿಸಿ ಬಾಹ್ಯಭೋಗವ, ನಿಟ್ಟಿಸುತ ಭ್ರೂಮಧ್ಯವ ।
ಮೂಗಿನಲಿ ಸಂಚರಿಪ ಪ್ರಾಣಾಪಾನ ಗತಿ ಸಮವಿರಿಸುವ ॥ ೨೭ ॥

ನುಡಿಯುಲಿ, ನಡೆಯುಲಿ, ತ್ಯಜಿಸಲಿ, ಗ್ರಹಿಸಲಿ, ।
ಕಣ್ಣಿನ ರೆಪ್ಪೆಯು ತೆರೆಯುಲಿ, ಮುಚ್ಚಲಿ. ॥
ಸರ್ವೇಂದ್ರಿಯಗಳು ತಮತಮ ಕ್ರಿಯೆಯುಲಿ, ।
ತಾವೇ ತೊಡಗಿಹವೆನ್ನುತ ಭಾವಿಸಿ ॥
ತತ್ವವ ತಿಳಿದಿರುವಂತಹ ಯೋಗಿಯು ।
ಮಾಡನು ತಾನೇನೆಂಬುದನರಿಯುಲಿ ॥

ತೊರೆದು ಸಂಗವ, ಬ್ರಹ್ಮಗರ್ಪಿಸಿ, ಕರ್ಮಗೈವನೊ ಆವನು ।
ದುರಿತದಿಂದ ಅಲಿಪ್ತ, ಜಲದಲಿ ಕಮಲದೆಲೆಯೊಲು ಆತನು, ॥

ಚಿತ್ತದಿಂ, ತನುಮನದಿ, ಕೇವಲ ಇಂದ್ರಿಯಗಳಿಂ, ಕರ್ಮವ ।
ಆತ್ಮಶುದ್ಧಿಗೆ ಮಾತ್ರ ಯೋಗಿಯು, ಸಂಗತ್ಯಜಿಸುತ ಗೈಯುವ ॥

ಹೊಂದುವನು ವರಶಾಂತಿ, ಕರ್ಮದ ಫಲವ ತ್ಯಜಿಸುತ ಯುಕ್ತನು
ಬಂಧಿತನು, ಆ ಕಾಮುಪರವಶ, ಫಲದಿಸಕ್ತ, ಅಯುಕ್ತನು. ॥

ತೊರೆದು ಮನದಿಂದೆಲ್ಲ ಕರ್ಮವ, ಕದಗಳೊಂಬತ್ತಿರುತಿಹ ।
ಪುರದಿ ಸಂಯಮಿ ತಾನುಮಾಡದೆ, ಮಾಡಿಸದೆ ಸುಖದಿಂದಿಹ ॥

ನಿರ್ಮಿಸನು ಪ್ರಭುಲೋಕಕರ್ಮವ ರಚಿಸನವ ಕರ್ತೃತ್ವವ ।
ಕರ್ಮಫಲಗಳ ಜೋಡಿಸನು, ಮಾಡುವುದು ಪ್ರಕೃತಿಯದೆಲ್ಲವ ॥

ಪುಣ್ಯ ಪಾಪವು ಆರದಾದರು ಅದನು ವಿಭು ಹೊರಲಾರನು ।
ಜ್ಞಾನವನು ಅಜ್ಞಾನ ಮುಸುಕಲು, ಮನುಜ ಮೋಹವ ತಳೆವನು ॥

ತನ್ನ ಅಜ್ಞಾನವನು ಆತ್ಮಜ್ಞಾನದಿಂದಲಿ ಅಳಿದವ ।
ಇನ್ನು ರವಿಯೊಲ್ ಹೊಳೆವ ಜ್ಞಾನದಿ ಕಾಂಬನವ ಪರತತ್ವವ ॥

ತತ್ಪರಾಯಣ ಅದರೊಳಗೆ ಮನ-ಬುದ್ಧಿ-ನಿಷ್ಠೆಗಳಿಟ್ಟವ ।
ಮತ್ತೆ ಜ್ಞಾನದಿ ಪಾಪ ಕಳೆದವ, ಪರಮಗತಿಯನು ಹೊಂದುವ ॥

ಅಧ್ಯಾಯ ೬.

ಆತ್ಮಸಂಯಮಯೋಗ

ಶ್ರೀಕೃಷ್ಣ :

ಯೋಗ್ಯ ಕರ್ಮವ ಫಲವ ಬಯಸದೆ ಗೈವವನೆ ಸಂನ್ಯಾಸಿಯು ।
ಯೋಗಿಯೂ ತಾನಹನು ; ಮತ್ತೆ ನಿರಗ್ನಿ, ನಿಷ್ಕ್ರಿಯನಲ್ಲವು ॥ ೧ ॥

ಆವುದಕೆ ಸನ್ಯಾಸವೆನುವರೊ, ಯೋಗ ಅದೆ ತಿಳಿ, ಪಾಂಡವ ।
ಆವ ನರನೂ ಯೋಗಿಯಾಗನು ತೊರೆಯದಲೆ ಸಂಕಲ್ಪವ ॥ ೨ ॥

ಯೋಗ ಹೊಂದಲು ಬಯಸುವಾ ಮುನಿಗಿಹುದು ಕರ್ಮವೆ ಸಾಧನ ।
ಯೋಗಸಿದ್ಧಿಯ ಪಡೆದವಗೆ ಇರುತಿಹುದು ಶಮೆಯೇ ಸಾಧನ ॥ ೩ ॥

ಕರುಮದಲಿ ಇಂದ್ರಿಯದ ವಿಷಯದಿ ಆವನಾಗನೊ ಮಗ್ನನು ।
ಸರುವ ಸಂಕಲ್ಪಗಳ ತೊರೆವನೊ, ಅವನೆ ಯೋಗಾರೂಢನು ॥ ೪ ॥

ತಾನೆ ತನ್ನುದ್ಧಾರಗೊಳಿಪುದು, ತನ್ನನುರುಳಿಸಕೂಡದೈ ।
ತಾನೆ ತನ್ನಯ ಶತ್ರು ಹಾಗೂ ಮಿತ್ರ ತಾನಾಗಿರುವನೈ ॥ ೫ ॥

ಆತ್ಮಸಂಯಮಿ ಪುರುಷ ತನ್ನಯ ಬಂಧು ತಾನಾಗಿರುವನು ।
ಆತ್ಮವನು ನಿಗ್ರಹಿಸದವ ತಾ ತನ್ನ ಹಗೆಯಂತಿರುವನು ॥ ೬ ॥

ಮಾನಅಪಮಾನದಲಿ, ಶೀತೋಷ್ಣದಲಿ ಸುಖದಲಿ, ದುಃಖದಿ ।
ತಾನು ಸಮನಿಹನಾ ಜಿತಾತ್ಮ ಪ್ರಶಾಂತ, ನಿಜಪರಮಾತ್ಮದಿ ॥ ೭ ॥

ಜ್ಞಾನ ವಿಜ್ಞಾನದಲಿ ತೃಪ್ತ, ಜಿತೇಂದ್ರಿಯನು, ಕೂಟಸ್ಥನು ।
ತಾನು ಕಲ್ಮಣ್ಣಿನ್ನ ಸಮವೆಂದರಿವ ಯೋಗಿಯು ಯುಕ್ತನು ॥ ೮ ॥

ಗೆಲಿದವನು ಮನಬುದ್ಧಿ ಇಂದ್ರಿಯ ಕ್ರೋಧಭಯ ಇಚ್ಛೆಗಳನು।
ಅಳಿದ ಮೋಕ್ಷ ಪರಾಯಣನು, ಮುನಿ, ತಾ ನಿರಂತರ ಮುಕ್ತನು

ಆಗಿರುವೆ, ತಪ-ಯಜ್ಞ-ಭೋಕ್ತೃವು, ಭೂತಸಖ, ಜಗದೀಶನು।
ಹೀಗಿರುವ ನನ್ನನ್ನು ಅರಿಯುವ ಮುನಿಯು ಶಾಂತಿಯ ಪಡೆವನು।

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ।
ಈಗ ಕೊನೆ ಸಂನ್ಯಾಸಯೋಗವು ಐದನೆಯ ಅಧ್ಯಾಯದಿ॥

ವಾತವಿರದೆಡೆ ದೀಪ ತಾ ಹೊಯ್ದಾಡದೆಂಬುವ ಉಪಮೆಯು।
ಆತ್ಮಯೋಗದಿ ಚಿತ್ತನಿಯಮಿಸಿ ಇರುವ ಯೋಗಿಗೆ ಸೂಕ್ತವು ॥ ೧೯ ॥

ಎಲ್ಲಿ ಯೋಗಾಭ್ಯಾಸದಿಂದ ನಿರುದ್ಧ ಚಿತ್ತವು ರಮಿಪುದೊ।
ಎಲ್ಲಿ ಆತ್ಮನನಾತ್ಮನಲ್ಲಿಯೆ ಕಾಣುತಲಿ ಅದು ತುಷಿಪುದೊ ॥ ೨೦ ॥

ಎಲ್ಲಿ ಇಂದ್ರಿಯದೂರ, ಬುದ್ಧಿಗ್ರಾಹ್ಯ, ಪರಮಾನಂದವೊ.।
ಎಲ್ಲಿ ಸ್ಥಿರವಾಗಿರಲು ಮನುಜನು, ತತ್ವದಿಂದಲಿ ಅಗಲನೋ ॥ ೨೧ ॥

ಆವ ಸ್ಥಿತಿ ಹೊಂದಿರಲು ಬೇರೇ ಅಧಿಕ ಲಾಭವ ಕಾಣನೊ।
ಆವೆಡೆಗೆ ಸ್ಥಿರವಿರಲು ಗುರುತರ ದುಃಖದಿಂದವ ನಡುಗನೋ ॥ ೨೨ ॥

ಕ್ಲೇಶ ರಹಿತವದಾದ ಆ ಸ್ಥಿತಿ ಯೋಗಸ್ಥಿತಿ ಯೆಂದರಿಯೆಲೊ।
ಬೇಸರಿಲ್ಲದ ಮನದಿ ದೃಢದಲಿ, ಯೋಗ ಸಾಧನೆ ಮಾಡೆಲೊ ॥ ೨೩ ॥

ಬಿಟ್ಟು ಸಂಕಲ್ಪದಲಿ ಹುಟ್ಟುವ ಕಾಮಗಳನು ಅಶೇಷದಿ।
ಕಟ್ಟುತಲಿ ಮನದಿಂದ ಇಂದ್ರಿಯಗಳನು ಎಲ್ಲಾ ಮಾರ್ಗದಿ ॥ ೨೪ ॥

ಮತ್ತೆ ದೃಢ ಬುದ್ಧಿಯಲಿ ಶಾಂತಿಯು ಮೆಲ್ಲಮೆಲ್ಲನೆ ಪಡೆಯಲಿ।
ಆತ್ಮದೊಳು ಮನ ನಿಲಿಸಿ ಅನ್ಯ ವಿಚಾರವನು ತಾ ತೊರೆಯಲಿ ॥ ೨೫ ॥

ಎತ್ತಲೆತ್ತಲು ಓಡುವುದೊ ಚಂಚಲಿತ ಅಸ್ಥಿರ ಮನವದು ।
ಅತ್ತಣಿಂದಲಿ ಅದನು ಬಂಧಿಸಿ ಆತ್ಮವಶದೊಳಗಿಡುವುದು ॥ ೨೬ ॥

ಕಲ್ಮಷವ ಕಳೆದಾ ರಜೋಗುಣರಹಿತ ಶಾಂತ-ಮನಸ್ಕನು।
ಬ್ರಹ್ಮನೊಳು ಸ್ಥಿರವಿರುವ ಯೋಗಿಯೆ, ಪಡೆವನುತ್ತಮ ಸುಖವನು
॥ ೨೭ ॥

ಹೀಗೆ ಸಂತತ ಯೋಗದಲಿ ತೊಡಗಿರುತ ಪಾಪವ ಕಳೆದಿಹ।
ಯೋಗಿ ಸುಲಭದಿ ಬ್ರಹ್ಮ ಪ್ರಾಪ್ತಿಯ ಶ್ರೇಷ್ಠ ಸುಖ ಸೇವಿಸುತಿಹ ॥ ೨೮ ॥

ಮಿತ್ರ, ಸಾಧು, ಉದಾಸಿ. ಪಾಪೀ, ಬಂಧು ಮಧ್ಯಸ್ಥರಲಿಯೂ।
ಶತ್ರು, ದ್ವೇಷ್ಯ, ಹಿತೈಷಿಯಲಿ ಸಮ ಬುದ್ಧಿಯುಳ್ಳವ ಶ್ರೇಷ್ಠನು

ಆಸೆಪಾಸೆಗಳಳಿದು ನಿರುತದಿ ಒಬ್ಬನೇ ಏಕಾಂತದಿ।
ವಾಸಿಸುತ ಚಿತ್ತಾತ್ಮ ಜಯಿಸುತ, ಯೋಗಿ ತೊಡಗಲಿ ಯೋಗದಿ

ಶುದ್ಧಸ್ಥಳದಲಿ ಕ್ರಮದಿ ಕುಶ, ಮೃಗಚರ್ಮ, ವಸ್ತ್ರವ ಹಾಸುತ
ಭದ್ರ ಆಸನ ಬಹಳ ಮೇಲ್ಕೆಳಗಾಗದೊಲು ತಾ ರಚಿಸುತ

ಯೋಗಿ ಕುಳಿತಾಸನದಿ ಇಂದ್ರಿಯ ಚಿತ್ತಗಳ ನಿಗ್ರಹಿಸುತ।
ಯೋಗ ನಡೆಸಲಿ ಆತ್ಮಶುದ್ಧಿಗೆ, ಮನವನೊಂದೆಡೆ ನಿಲಿಸುತ ।

ಬೆನ್ನು ಕುತ್ತಿಗೆ ತಲೆಗಳನು ಸಮವಾಗಿ ಇರಿಸುತ ಕದಲದೆ।
ತನ್ನ ಮೂಗಿನ ತುದಿಯ ದಿಟ್ಟಿಸಿ ಸ್ಥಿರದಿ,ಸುತ್ತಲು ನೋಡದೆ ।

ಮತ್ತೆ ಭಯವಿಲ್ಲದೆ ಪ್ರಶಾಂತನು, ಬ್ರಹ್ಮಚರ್ಯದೊಳಿರುತಲಿ।
ಚಿತ್ತವೆನ್ನೊಳಗಿರಿಸಿ ಮನ ಬಿಗಿದೆನ್ನ ಧ್ಯಾನದಿ ಕೂಡಲಿ ॥

ಹೀಗೆ ಮನ ನಿಯಮಿಸುತ, ತನ್ನನು ಸತತಯೋಗದೊಳಿರಿಸುವ।
ಯೋಗಿ ನನ್ನೊಳಗಿರುವ ಅಂತಿಮವಾದ ಶಾಂತಿಯ ಪಡೆಯುವ ॥

ಇಂಥ ಯೋಗವು ಸಿದ್ಧಿಸದು ಅತಿಯುಂಬುವಗೆ, ಉಪವಾಸಿಗೆ।
ಕುಂತಿ-ತನಯನೆ, ನಿದ್ದೆಬಡಕಗೆ, ಬಹಳ ನಿದ್ದೆಯ ಕೆಡುವಗೆ ॥

ಕರುಮದಲಿ, ಊಟದಿ, ವಿಹಾರದಿ, ಶಯನ, ಜಾಗರದಲ್ಲಿಯೂ।
ಪರಿಮಿತಿಯ ನಿಡುವವನ ವ್ಯಥೆಯನು ನೊಂದಿಪುದು ಈ ಯೋಗವು
॥

ಆತ್ಮದಲಿ ಸ್ಥಿರವೆಂದಿಗಪ್ಪುದೊ ನಿಯತವಾಗಿಹ ಚಿತ್ತವು।
ಮತ್ತೆ ಕಾಮದಿ ನಿಸ್ಪೃಹಿಯು ತಾ, ಅಂದಿಗೆನಿಸುವ ಯೋಗಿಯು ॥

ಸ್ಥಿರನದಾಗದೆ ಬ್ರಹ್ಮಮಾರ್ಗದಿ ಮೋಹಗೊಳ್ಳುತ, ಕೃಷ್ಣನೆ ।
|| ೨೯ ಎರಡಸೂ ಕಳಕೊಂಡು ಚದರಿದ ಮೋಡದಂದದಿ ನಶಿಸನೆ || ೩೮ ||

ನನ್ನ ಸಂಶಯ ಪೂರ್ಣ ಅಳಿಯಲು ಕೃಷ್ಣ, ನೀನೇ ಅರ್ಹನು ।
|| ೩೦ ನಿನ್ನನುಳಿದೀ ಶಂಕೆ ಕಳೆಯಲು ಅನ್ಯನಾವನು ದೊರಕನು || ೩೯ ||

|| ೩೧ ಶ್ರೀಕೃಷ್ಣ:

ಇರದು ಇವನಿಗೆ ನಾಶ ಇಹದಲಿ ಹಾಗು ಪರದಲಿ ಪಾರ್ಥನೆ ।
ಬರದು ದುರ್ಗತಿ ಎಂದಿಗೂ ಶುಭ ಕಾರ್ಯಗೈವಗೆ ಪ್ರಿಯನೆ || ೪೦ ||

|| ೩೨ ಪುಣ್ಯವಂತರ ಲೋಕಸೇರುತ ಅಲ್ಲಿ ಬಹುದಿನವಿರುತಲಿ ।
ಇನ್ನು ಯೋಗಭ್ರಷ್ಟ ಜನಿಪನು ಧನಿಕ ಶುಚಿಗಳ ಮನೆಯಲಿ || ೪೧ ||

ಇಲ್ಲದಿರೆ ತಾ ಪುಟ್ಟುವನು ಧೀಮಂತ ಯೋಗಿಯ ಕುಲದಲಿ ।
| ೩೩ ದುರ್ಲಭವು ನಿಜವಾಗಿಯೂ ಈ ಪರಿಯ ಜನ್ಮವು ಜಗದಲಿ || ೪೨ ||

ಹೊಂದುತಲ್ಲಿಯೆ ಪೂರ್ವಜನ್ಮದ ಬುದ್ಧಿ ಸಂಸ್ಕಾರಗಳನು ।
| ೩೪ ಮುಂದೆ ಹೆಚ್ಚಿನ ಸಿದ್ಧಿ ಹೊಂದಲು ತಾನು ಹೆಣಗುತಲಿರುವನು || ೪೩ ||

ಯೋಗದೆಡೆ ಸೆಳೆಯುವುದು ಪೂರ್ವಾಭ್ಯಾಸ ತಪ್ಪದಲಾತನ ।
ಯೋಗದಲಿ ಜಿಜ್ಞಾಸುವೂ ದಾಟುವನು ಶಬ್ದ ಬ್ರಹ್ಮನ || ೪೪ ||

| ೩೫ ಹೀಗೆ ಪಾಪವ ಕಳೆದು ಸಂಸಿದ್ಧಿಯನು ಹೊಂದುತ ಯತ್ನದಿ ।
ಯೋಗಿ ತಾ ಪಡೆಯುವನು ಮುಕ್ತಿಯ ಬಹಳ ಜನ್ಮಗಳಂತ್ಯದಿ || ೪೫ ||

| ೩೬ ಯೋಗಿಶ್ರೇಷ್ಠ ತಪಸ್ವಿಗಿಂತಲು, ಜ್ಞಾನಿಗಿಂತಲು ಮಾನ್ಯನೈ ।
ಆಗಿಹನು ಕರ್ಮಠರಿಗಧಿಕನು, ಅಂತೆ ಯೋಗಿಯದಾಗೆಲೈ || ೪೬ ||

ನನ್ನೊಳಗೆ ಮನವಿರಿಸಿ ನನ್ನನೆ ಶ್ರದ್ಧೆಯಿಂ ಭಜಿಪಾತನು ।
೩೭ ನನ್ನ ಮತದಿಂದೆಲ್ಲ ಯೋಗಿಗಳೊಳಗೆ ಅವ ಬಹು ಶ್ರೇಷ್ಠನು || ೪೭ ||

ಸರ್ವರಲಿ ಸಮಭಾವವಿಡುವವ, ಯೋಗಯುಕ್ತನದಾದವ ।
ಸರ್ವ ಭೂತರೊಳಾತ್ಮನನು, ಆತ್ಮದೊಳಗೆಲ್ಲರ ಕಾಂಬುವ

ಎನ್ನನಾವನು ಕಾಂಬನೆಲ್ಲೆಡೆ ನನ್ನೊಳೆಲ್ಲವ ಕಾಂಬನು ।
ಇನ್ನು ಆತಗೆ ದೂರನಾಗೆನು, ದೂರ ನನಗವನಾಗನು

ಸರುವ ಭೂತರೊಳಿರುವ ನನ್ನನು ಏಕಭಾವದಿ ಭಜಿಸುವ ।
ನರನು ಎಂತಾಚರಿಸಿದರು ಆ ಯೋಗಿ ನನ್ನೊಳಗಿರುತಿಹ

ಪಾರ್ಥನೇ ಸುಖದುಃಖದಲಿ ತನ್ನಂತೆ ಪರರನು ಬಗೆಯುವ ।
ಮತ್ತೆ ಎಲ್ಲರ ಸಮನೆ ನೋಡುವ ಯೋಗಿ ಉತ್ತಮನೆನಿಸುವ ।

ಅರ್ಜುನ :

ನೀನು ಪೇಳಿದೆ ಸಾಮ್ಯದಿಂದಲಿ ಲಭಿಪ ಇಂತಹ ಯೋಗವ ।
ಕಾಣೆ ನಾ ಚಂಚಲತೆಯಿಂದಲಿ ಅದರ ಸ್ಥಿರತೆಯ ಮಾಧವ ।

ಮನಸು ಪ್ರಮಥನಶೀಲ, ಚಂಚಲ, ದೃಢವು, ಪ್ರಬಲವದಾಗಿದೆ ।
ಅನಿಲದೊಲು ಮನ ಬಂಧಿಪುದು ಅತಿಕಷ್ಟವೆಂಬುದನರಿದಿಹೆ ।

ಶ್ರೀಕೃಷ್ಣ :

ನಿಜವು ವೀರನೆ, ಮನವು ಚಂಚಲ, ಆದರ ನಿಗ್ರಹ ಕಷ್ಟವು ।
ವಿಜಯನೇ, ವೈರಾಗ್ಯ ಮತ್ತಭ್ಯಾಸದಿಂದದು ಸಾಧ್ಯವು ॥

ಮನವ ಜಯಿಸದ ನರಗೆ ದುರ್ಲಭ, ನನ್ನ ಮತದಲಿ ಯೋಗವು ।
ಮನವ ಜಯಿಸಿದ ಯತ್ನಶೀಲಗುಪಾಯದಿಂದದು ಸಾಧ್ಯವು ॥

ಅರ್ಜುನ :

ಯೋಗಭ್ರಷ್ಟನು ಶ್ರದ್ಧೆಯುಳ್ಳವನಾದರೂ ಯತ್ನಿಸದಲೆ ।
ಯೋಗಸಿದ್ಧಿಯ ಹೊಂದದವಗಿನ್ನಾವ ಗತಿ ಶ್ರೀಕೃಷ್ಣನೆ ॥

ಅಧ್ಯಾಯ ೭.

ಜ್ಞಾನ ವಿಜ್ಞಾನಯೋಗ

ಶ್ರೀಕೃಷ್ಣ :

ಎನ್ನೊಳಗೆ ಮನನಿಲಿಸಿ, ಯೋಗದೊಳಿದ್ದು, ಆಶ್ರಯಿಸೆನ್ನನೆ ।
ಎನ್ನನೇ ಸಂಪೂರ್ಣ ನಿಜದಲಿ ಅರಿವ ಪರಿಕೇಳ್ ಪಾರ್ಥನೆ ॥ ೧ ॥

ಜ್ಞಾನವನು ವಿಜ್ಞಾನ ಸಹ ನಿನಗುಸುರುವೆನು ಸಂಪೂರ್ಣದಿ ।
ನೀನು ಅರಿದೊಡೆ ಅದನು, ತಿಳಿಯುವುದೇನು ಉಳಿಯದುಲೋಕದಿ ॥ ೨ ॥

ಯತ್ನಗೈವನು ಸಿದ್ಧಿಗೋಸುಗ ಸಾವಿರಾರೊಳಗೊಬ್ಬನು ।
ಯತ್ನಿಸಿಯು ಸಿದ್ಧರೊಳಗೊಬ್ಬನು ನಿಜದಿ ಎನ್ನನು ತಿಳಿವನು ॥ ೩ ॥

ಪೃಥ್ವಿ, ಜಲ, ತೇಜಾನಿಲವು, ನಭ, ಬುದ್ಧಿ, ಮನ, ಅಹಂಕಾರವು ।
ಮತ್ತೆ ಈ ಪರಿ ಎಂಟು ವಿಧದಲಿ ನನ್ನ ಪ್ರಕೃತಿ–ವಿಭಿನ್ನವು ॥ ೪ ॥

ಇದುವೆ 'ಅಪರಾ'ಪ್ರಕೃತಿ, ಇದಕಿಂತಧಿಕವೊಂದಿದೆ ತಿಳಿ 'ಪರಾ' ।
ಅದುವೆ ಭಿನ್ನವು, ಜಗವ ಧರಿಸುವ ಜೀವರೂಪವು ಹೇ ನರಾ ॥ ೫ ॥

ಪ್ರಾಣಿ ಮಾತ್ರಗಳೆಲ್ಲ ಜನಿಪುವು ಇವುಗಳಿಂದಲೆ ತಿಳಿಯೆಲೊ ।
ನಾನಿಹೆನು ಸಂಪೂರ್ಣ ಜಗದುತ್ಪತ್ತಿ ಲಯ ಕಾರಣನೆಲೊ ॥ ೬ ॥

ಬೇರೆ ಆವುದು ಶ್ರೇಷ್ಠವಿಲ್ಲ ಧನಂಜಯನೆ ನನಗಿಂತಲು ।
ದಾರದಲಿ ಪೋಣಿಸಿದ ಮಣಿಯುಂತಿಹುದಿದೆಲ್ಲವು ನನ್ನೊಳು ॥ ೭ ॥

ನರನೆ ನಾನಿಹೆ ಸೂರ್ಯ ಚಂದ್ರರ ಪ್ರಭೆಯು, ಜಲದಲಿ ರಸವು ನಾ ।
ನರರ ಪೌರುಷ, ವೇದದಲಿ ಓಂಕಾರ, ಗಗನದಿ ಶಬ್ದ ನಾ ॥ ೮ ॥

ಶ್ರೀ ಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ಆತ್ಮಸಂಯಮಯೋಗ ಷಷ್ಠಾಧ್ಯಾಯದಿ ॥

ನಾನಿಹೆನು ಪೃಥ್ವಿಯ ಸುಗಂಧವು, ಪಾವಕನ ತೇಜಸ್ಸು ನಾ ।
ಪ್ರಾಣಿಮಾತ್ರರ ಜೀವ ನಾನು, ತಪಸ್ವಿಯಲ್ಲಿ ತಪಸ್ಸು ನಾ

ನಾನು ಪಾರ್ಥನೆ, ಸಕಲ ಜೀವರಿಗಿಹೆ ಸನಾತನ ಬೀಜವು ।
ನಾನೆ ತೇಜಸ್ವಿಗಳ ತೇಜವು, ಬುದ್ಧಿವಂತರ ಬುದ್ಧಿಯು

ಪ್ರೀತಿ ಇಚ್ಛೆಗಳಿರದ ಬಲ ಬಲವಂತರೊಳು, ಅರ್ಜುನನೆ ನಾ ।
ಭೂತರೊಳು ಧರ್ಮಕೆ ವಿರೋಧವು ಆಗದಂತಹ ಕಾಮ ನಾ

ಸತ್ವರಜ ತಮ ಗುಣದ ಭಾವಗಳೆಲ್ಲ ನನ್ನಿಂದಾದುವು ।
ಮತ್ತೆ ನಾನಿಲ್ಲವುಗಳೊಳು ತಿಳಿ, ನನ್ನೊಳಗೆ ಅವು ಇರುವುವು

ತ್ರಿಗುಣದಿಂ ಕೂಡಿರುವ ಭಾವದಿ ಮೋಹಗೊಂಡಿಹ ಜಗವಿದು ।
ತ್ರಿಗುಣದಾಚೆಗೆ ಇರುವ ಅವ್ಯಯನಾದ ನನ್ನನು ಅರಿಯದು

ನನ್ನ ಗುಣಮಯ ದಿವ್ಯ ಮಾಯೆಯು ದಾಟಲಸದಳವಿರುವುದು
ನನ್ನನೇ ಭಜಿಪರಿಗೆ ಇಂತಹ ಮಾಯೆ ದಾಟಲು ಬರುವುದು

ಮಾಯೆಯಿಂದಲಿ ಜ್ಞಾನ ನಶಿಸಿದ ಮೂಢ ಮನುಜರು ಅಧಮರು
ಹೇಯ ಕರ್ಮಿಗಳಸುರ ವೃತ್ತಿಯ ಹೊಂದಿ ನನ್ನನುಭಜಿಸರು

ಆರ್ತರರ್ಥಾಪೇಕ್ಷಿತರು, ಜಿಜ್ಞಾಸು, ಜ್ಞಾನೀ ಪುರುಷರು ।
ಪಾರ್ಥ, ಈ ನಾಲ್ಕುಗೆಯ ಸತ್ಕರ್ಮಿಗಳು ನನ್ನನು ಭಜಿಪರು

ಅವರೊಳುತ್ತಮ ನಿತ್ಯಯುಕ್ತನನನ್ಯ ಭಕ್ತಿಯ ಜ್ಞಾನಿಯು ।
ಅವನಿಗತಿ ಪ್ರಿಯ ನಾನು, ಆ ಜ್ಞಾನಿಯೊಳು ನನಗತಿ ಪ್ರೀತಿಯು

ಉತ್ತಮರು ಇವರೆಲ್ಲ, ಜ್ಞಾನಿಯು ನನ್ನ ಆತ್ಮನು ಎನಿಸಿಹ ।
ಉತ್ತಮೋತ್ತಮ ಗತಿಯ ನನ್ನೊಳು ಕಂಡು ಯೋಗಿಯು ಸ್ಥಿರ
।

ಜ್ಞಾನಿ ಬಹು ಜನ್ಮಗಳ ಕೊನೆಯಲಿ ವಾಸುದೇವನನೆಲ್ಲಿಯು ।
ಕಾಣುತಲೆ, ಹೊಂದುವನು ನನ್ನನು, ವಿರಳ ಅಂತಹ ಜ್ಞಾನಿಯು ॥ ೧೯ ॥

ವಿವಿಧ ಕಾಮನೆಯಿಂದ ಮರುಳರು ತಮ್ಮ ತಮ್ಮ ಸ್ವಭಾವದಿ ।
ವಿವಿಧ ದೇವತೆಗಳನು ಭಜಿಪರು ನಡೆದು ವಿಧವಿಧ ನಿಯಮದಿ ॥ ೨೦ ॥

ಯಾವ ರೂಪವ ಶ್ರದ್ಧೆಯಿಂದರ್ಚಿಸಲು ಬಯಸುವನೊ ಭಕ್ತನು ।
ಭಾವದೊಳು ಆ ಶ್ರದ್ಧೆಯನು ಆ ರೂಪದಲಿ ಸ್ಥಿರಗೊಳಿಪೆನು ॥ ೨೧ ॥

ಹೀಗೆ ಶ್ರದ್ಧಾಯುಕ್ತನಾಗುತ ಪೂಜಿಪನು ಆ ರೂಪವ ।
ಆಗ ನಾ ನಿಯಮಿಸಿದ ಇಚ್ಛಿತ ಭೋಗ ತಪ್ಪದೆ ಪಡೆಯುವ ॥ ೨೨ ॥

ಕುಂದಮತಿಗಿದೆ ನಾಶಹೊಂದುವ ಫಲವು, ದೇವರ ಭಕ್ತನು ।
ಹೊಂದುವನು ಆಯಾಯ ದೇವರ, ನನ್ನ ಭಕ್ತನು ನನ್ನನು ॥ ೨೩ ॥

ನನ್ನ ಘನ, ಅವಿನಾಶಿ, ಅನುಪಮ, ಭಾವವರಿಯದ ಮೂಢರು ।
ಎನ್ನುವರು ನಾ ವ್ಯಕ್ತನೆಂದವ್ಯಕ್ತ ನಾನಾಗಿದ್ದರೂ ॥ ೨೪ ॥

ಯೋಗ ಮಾಯೆಯ ಮುಸುಕಿನಲಿ ನಾ ಪ್ರಕಟನೆಲ್ಲರಿಗಾಗೆನು ।
ಹೀಗೆ ಅಜ, ಅವ್ಯಯನು ಆಗಿಹ ನನ್ನನರಿಯನು ಮೂಢನು ॥ ೨೫ ॥

ಭೂತಕಾಲದ, ಈಗ ಇರುತಿಹ ಮತ್ತೆ ಮುಂದೆಯು ಆಗುವ ।
ಭೂತರೆಲ್ಲರ ಬಲ್ಲೆ, ನನ್ನನು ಅರಿಯರಾರೂ ಪಾಂಡವ ॥ ೨೬ ॥

ನರನೆ ಇಚ್ಛಾದ್ವೇಷದಿಂ ಪುಟ್ಟಿರುವ ದ್ವಂದ್ವದ ಮೋಹದಿ ।
ಇರುವ ಜೀವರು ಭ್ರಾಂತಿ ಹೊಂದುತ್ತಿರುವರೀ ಸಂಸಾರದಿ ॥ ೨೭ ॥

ಪುಣ್ಯಕರ್ಮದಿ ತಮ್ಮ ಪಾಪವ ಕಳೆದುಕೊಂಡಿಹ ಪುರುಷರು ।
ಇನ್ನು ದ್ವಂದ್ವದ ಮೋಹವಳಿಯುತ, ದೃಢದಿ ನನ್ನನು ಭಜಿಪರು ॥ ೨೮ ॥

॥ ೨೯

ಅಧ್ಯಾಯ ೮.

ಅಕ್ಷರ ಬ್ರಹ್ಮಯೋಗ

॥ ೩೦

ಅರ್ಜುನ:

ಆವುದಿಹುದಾಬ್ರಹ್ಮ, ಆ ಅಧ್ಯಾತ್ಮ ಕರ್ಮಗಳಾವುವು ।
ಆವುದೈ ಪುರುಷೋತ್ತಮನೆ, ಅಧಿಭೂತ ಮತ್ತಧಿದೈವವು ॥ ೧ ॥

ಈ ಶರೀರದೊಳಾವನಾ ಅಧಿಯಜ್ಞ, ಮತ್ತವನೆಂತಿಹ ।
ಕೇಶವನೆ, ಸಂಯಮಿಯು ಮರಣದಿ ಎಂತು ನಿನ್ನನು ಅರಿಯುವ ॥ ೨ ॥

ಶ್ರೀಕೃಷ್ಣ:

ಪರಮವಹ ಅಕ್ಷರವು ಬ್ರಹ್ಮ, ಸ್ವಭಾವವೇ ಅಧ್ಯಾತ್ಮವು ।
ಕರುಮತಾ, ಉತ್ಪತ್ತಿ ಸ್ಥಿತಿ ಕಾರಣವು ಎನಿಪ ವಿಸರ್ಗವು ॥ ೩ ॥

ಕ್ಷರದ ಸ್ಥಿತಿ ಅಧಿಭೂತ, ಮತ್ತಧಿದೈವತವು ತಾ ಪುರುಷನು ।
ನರರೊಳಧಿಕನೆ, ಈ ಶರೀರದೊಳಿರುವೆ ನಾ ಅಧಿಯಜ್ಞನು ॥ ೪ ॥

ಮರಣಸಮಯದಿ ನನ್ನನೇ ಸ್ಮರಿಸುತ್ತ ತನುವನು ತ್ಯಜಿಸುವ ।
ನರನು ನನ್ನ ಸ್ವರೂಪವೈದುವ, ಇದರೊಳಿಲ್ಲವು ಸಂಶಯ ॥ ೫ ॥

ಮನುಜ ತಾನಾವಾವ ಭಾವವ ನಿತ್ಯ ಸ್ಮರಿಸುತ, ಪಾಂಡವ ।
ತನುವನಂತ್ಯದಿ ತ್ಯಜಿಪನೊ, ಆ ಭಾವಗಳ ತಾ ಹೊಂದುವ ॥ ೬ ॥

ಆದ್ದರಿಂದಲೆ ಎಲ್ಲ ಕಾಲಕು ನನ್ನ ಸ್ಮರಿಸುತ ಕಾದು ನೀ ।
ಬುದ್ಧಿ ಮನವೆನಗರ್ಪಿಸಲು ನನ್ನನ್ನು ಹೊಂದುವಿ ನಿಜದಿ ನೀ ॥ ೭ ॥

ಅನ್ಯ ದೆಸೆ ಮನ ಹರಿಬಿಡದೆ ಅಭ್ಯಾಸ ಯೋಗದಿ ಯುಕ್ತನು ।
ನನ್ನ ಧ್ಯಾನಿಸಿ ಸತತ, ಉತ್ತಮ ದಿವ್ಯಪುರುಷನ ಪಡೆವನು ॥ ೮ ॥

ಮರಣ, ಮುದಿತನ ಕಳೆಯಲೆತ್ನಿಸುತ್ತೆನ್ನ ಆಶ್ರಯ ಹೊಂದುವ।
ನರನೆ ಬ್ರಹ್ಮವ, ಕರ್ಮ ಅಧ್ಯಾತ್ಮಗಳನೆಲ್ಲವ ಬಲ್ಲವ

ಅರಿತವರು ಅಧಿಯಜ್ಞ, ಅಧಿಭೂತಾಧಿ ದೈವದಿ ನನ್ನನು।
ಅರಿಯುವರು ಆ ಯುಕ್ತ ಚಿತ್ತರು ಮರಣದಲ್ಲಿಯು ನನ್ನನು।

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ।
ಈಗ ಕೊನೆ ವಿಜ್ಞಾನ ಜ್ಞಾನವು, ಏಳನೆಯ ಅಧ್ಯಾಯದಿ॥

ಒಂದು ಸಾವಿರ ಯುಗವು ಬ್ರಹ್ಮನ ಹಗಲು ಅಂತೆಯೆ ರಾತ್ರಿಯು ।
ಎಂದು ತಿಳಿಯುವನಾವನೋ ಅವ ಅಹೋರಾತ್ರಜ್ಞಾನಿಯು ॥ ೧೭ ॥

ವ್ಯಕ್ತವೆಲ್ಲವು ಪುಟ್ಟುವುದು ಅವ್ಯಕ್ತದಿಂದಲಿ ಹಗಲೊಳು ।
ಮತ್ತೆ ಅದು ಅವ್ಯಕ್ತದಲ್ಲಿಯೆ ಲಯುವ ಹೊಂದುವುದಿರುಳೊಳು ॥ ೧೮ ॥

ಭೂತಗಣ ಜನಿಜನಿಸಿ ಲಯಿಪುವು ವಿವಶವಾಗುತ ಇರುಳೊಳು ।
ಪಾರ್ಥನೇ ಅವುಪುಟ್ಟುವುವು ಮತ್ತುದಿಸಿ ಬರುತಿಹ ಹಗಲೊಳು ॥ ೧೯ ॥

ಮೀರಿ ಈ ಅವ್ಯಕ್ತವನ್ನು ಸನಾತನದ ಅವ್ಯಕ್ತವು ।
ಬೇರೆ ಇಹುದದಕಿಲ್ಲ ನಾಶವು, ಅಳಿದು ಹೋದರು ಭೂತವು ॥ ೨೦ ॥

ಪರಮಗತಿಯೆಂದೆನಿಪುದಕ್ಷರವಾದ ಆ ಅವ್ಯಕ್ತವು ।
ಮರಳಿ ಜನಿಸರು ಅದನು ಪಡೆದವರದುವೆ, ಮಮಘನಧಾಮವು ॥ ೨೧ ॥

ಇರುವ ಭೂತಗಳಿಹವು ಅವನೊಳು ವ್ಯಾಪ್ತವವನಿಂದೆಲ್ಲವು ।
ನರನೆ, ಅಂತಹ ಪರಮ ಪುರುಷನನನ್ಯ ಭಕ್ತಿಗೆ ಲಭ್ಯನು ॥ ೨೨ ॥

ಆವ ಸಮಯದಿ ಮರಣ ಬರಲಾಗುವನೊ ಯೋಗಿಯು ಮುಕ್ತನು ।
ಆವ ಸಮಯದಿ ಸಾಯಲಾತನು ಮರಳಿ ಜನಿಪನೊ, ಪೇಳ್ವೆನು ॥ ೨೩ ॥

ಉತ್ತರಾಯಣದಾರು ತಿಂಗಳು, ಶುಕ್ಲಪಕ್ಷದಿ, ಹಗಲೊಳು ।
ಮತ್ತೆ ಅಗ್ನಿ, ಜ್ಯೋತಿಮಾರ್ಗದಿ ಗತಿಸಿ ಬ್ರಹ್ಮನ ಪಡೆವರು ॥ ೨೪ ॥

ಧೂಮ, ರಾತ್ರೀ, ದಕ್ಷಿಣಾಯನ, ಕೃಷ್ಣಪಕ್ಷದಿ ಗತಿಸಲು ।
ಸೋಮಲೋಕವ ಸೇರಿ ಯೋಗಿಯು, ಮರಳಿ ಬರುವನು
ಜಗದೊಳು ॥ ೨೫ ॥

ಶುಕ್ಲಕೃಷ್ಣಗಳೆರಡು ಗತಿಗಳು ಜಗದಿ ಶಾಶ್ವತವೆನಿಪುವು ।
ಮುಕ್ತಿಕೊಡುವುದು ಒಂದು, ಹಿಂದಕೆ ತರುವುದಿನ್ನೊಂದವನನು ॥ ೨೬ ॥

ಆವನಿನ್ನು ಸ್ಮರಿಪನೊ ಅಚಿಂತ್ಯವಾದ ರೂಪನ ।
ಕವಿ ಪುರಾಣ ಪುರುಷನ, ಶಾಸನವನು ಗೈವನ ॥
ಸರ್ವರಾಧಾರನ ಸೂಕ್ಷ್ಮಕಿಂತ ಸೂಕ್ಷ್ಮನ ।
ಸೂರ್ಯ ಸದೃಶತೇಜನ, ತಮಸಿನಾಚೆಗಿರುವನ

ಅಂತ್ಯಕಾಲದಲ್ಲಿಯೂ, ಭಕ್ತಿಯುಕ್ತನಾಗುತ ।
ಯೋಗ ಬಲದಿ ತನ್ನಯ ಚಿತ್ತಸ್ಥಿರವ ಗೊಳಿಸುತ ॥
ಭೃಕುಟ ಮಧ್ಯದಲ್ಲಿ ಚೆನ್ನಾಗಿ ಪ್ರಾಣ ನಿಲಿಸುತ ।
ಪರಮ ದಿವ್ಯಪುರುಷನ, ಪಡೆವನವನು ನಿಶ್ಚಿತ

ವೇದವೇತ್ತರಾವುದ 'ಅಕ್ಷರ'ವು ಎಂಬರೊ ।
ರಾಗರಹಿತ ಯತಿಗಳು, ಆವುದನ್ನು ಸೇರ್ವರೊ ॥
ಆವಪದ ಅಪೇಕ್ಷಿಸಿ ಬ್ರಹ್ಮಚರ್ಯದಿರುವರೊ ।
ಅಂಥ ಪದವ ಕಿರಿದರಲ್ಲೊರೆವೆ ನಿನಗೆ ನಾನೆಲೊ

ಸರುವ ಬಾಗಿಲ ಮುಚ್ಚಿ ಮನವನು ಹೃದಯದಲಿ ಸ್ಥಿರವಿರಿಸುತ ।
ಶಿರದಿ ನಿಜಪ್ರಾಣವನು ಸ್ಥಾಪಿಸಿ ಯೋಗಧಾರಣೆ ಗೈಯುತ

ಸ್ಮರಿಸಿ 'ಓಂ' ಎಂಬೊಂದೆ ಅಕ್ಷರ ಬ್ರಹ್ಮವನು ಉಚ್ಚರಿಸುವ ।
ನರನು ದೇಹವ ತ್ಯಜಿಸಿ ಪೋಗಲು ಪರಮ ಸದ್ಗತಿ ಹೊಂದುವ

ನಿತ್ಯಯುಕ್ತನದಾದ ಯೋಗಿಯು ನನ್ನನೊಂದೇ ಚಿತ್ತದಿ ।
ನಿತ್ಯದಲಿ ಸ್ಮರಿಸಿದರೆ ನಾನಾತನಿಗೆ ಸಾಧ್ಯನು ಸುಲಭದಿ

ಉತ್ತಮೋತ್ತಮ ಸಿದ್ಧಿ ಪಡೆದೆನ್ನೊಳಗೆ ಸೇರಿ ಮಹಾತ್ಮರು ।
ಮತ್ತೆ ಶಾಶ್ವತ ದುಃಖದಾಗರವಾದ ಜನ್ಮವ ಹೊಂದರು

ಮರಳಿ ಬರುವರು ಬ್ರಹ್ಮ ಮೊದಲಾನೆಲ್ಲ ಲೋಕಗಳಿಂದಲು ।
ಮರಳಿ ಬಾರರು ನರನೆ, ನನ್ನನು ಹೊಂದಿದಂತಹ ಜನಗಳು

ಇಂಥ ಎರಡೂ ಮಾರ್ಗವರಿತಿಹ ಆವ ಯೋಗಿಯು ಭ್ರಮಿಸನ್ನೆ
ಅಂತೆ ಪಾರ್ಥನೆ, ನೀ ನಿರಂತರ ಯೋಗಯುಕ್ತನದಾಗೆಲ್ಲೆ

ವೇದಯಜ್ಞದಲ್ಲಿಯೂ, ದಾನ ತಪಸಿನಲ್ಲಿಯೂ ।
ಪೇಳಿದಂಥ ವಿಧವಿಧ, ಪಾಪಪುಣ್ಯವೆಲ್ಲವ ॥
ದಾಟ ಯೋಗಿ ತಿಳಿಯುತ ತತ್ವದಿಂದಿದೆಲ್ಲವ ।
ಪರಮ ಶ್ರೇಷ್ಠವಾಗಿಹ, ಆದಿ ಸ್ಥಾನ ಪಡೆಯುವ

ಶ್ರೀ ಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಅಕ್ಷರಬ್ರಹ್ಮ ಮುಗಿಯಿತು ಎಂಟನೆಯ ಅಧ್ಯಾಯದಿ ॥

ಅಧ್ಯಾಯ ೯.

ರಾಜವಿದ್ಯಾ, ರಾಜಗುಹ್ಯ ಯೋಗ

ಶ್ರೀಕೃಷ್ಣ :

ನೀನಸೂಯಾರಹಿತ, ಅಂತೆಯೆ, ಗುಹ್ಯತಮವಿದನೊರೆವೆನು ।
ಜ್ಞಾನವನು ವಿಜ್ಞಾನ ಸಹ ನೀನರಿತರಶುಭದಿ ಮುಕ್ತನು ॥ ೧ ॥

ಇದು ಪವಿತ್ರವು ರಾಜವಿದ್ಯಾ ರಾಜಗುಹ್ಯವು ಶ್ರೇಷ್ಠವು ।
ಇದು ಪರೋಕ್ಷದ ಮಾರ್ಗ. ಅವ್ಯಯ, ಧರ್ಮ್ಯ, ಮಾಡಲು ಸುಲಭವು ॥ ೨ ॥

ಇಂಥ ಧರ್ಮದಿ ಶ್ರಧ್ಧೆಯಿಲ್ಲದ ನರರು ನನ್ನನು ಹೊಂದರು ।
ಕುಂತಿತನಯನೆ, ಮೃತ್ಯುಮಯ ಸಂಸಾರ ಚಕ್ರದಿ ಭ್ರಮಿಪರು ॥ ೩ ॥

ಸರ್ವಜಗ ಅವ್ಯಕ್ತವಾದೆನ್ನಿಂದ ವ್ಯಾಪಿತ ವಿರುವುದೈ ।
ಸರ್ವಭೂತರಿಗಾಶ್ರಯನು ನಾನಿಹೆನು, ನನಗವರಲ್ಲವೈ ॥ ೪ ॥

ಭೂತರೆನ್ನೊಳಗಿಲ್ಲ, ನೋಡೆಲೊ ನನ್ನ ಯೋಗದ ಬಲವನು ।
ಭೂತರನು ನಾ ಸೃಜಿಪೆ. ಪೋಷಿಪೆ, ಆದರೂ ಇರೆನವರೊಳು ॥ ೫ ॥

ಎಂತು ಎಲ್ಲೆಡೆ ಚಲಿಪ ವಾಯುವು ನಿತ್ಯ ಇರುವುದೊ ನಭದಲಿ ।
ಅಂತೆಯೇ, ನೀ ತಿಳಿಯೊ, ಭೂತಗಳೆಲ್ಲ ಇರುವುವು ನನ್ನಲಿ ॥ ೬ ॥

ಕಲ್ಪದಂತ್ಯದಿ ಭೂತರೆಲ್ಲರು ಹೊಂದುವರು ಮಮ ಪ್ರಕೃತಿಯ ।
ಕಲ್ಪದಾದಿಯೊಳಿನ್ನು ಸೃಜಿಸುವೆ ಅವರನೆಲ್ಲ ಧನಂಜಯ ॥ ೭ ॥

ಇನ್ನು ಪ್ರಕೃತಿಯ ವಶದೊಳಿರುತಿಹ ಭೂತ ಗಣಗಳನೆಲ್ಲನು ।
ನನ್ನ ಮಾಯಾಬಲದಿ ವಾರಂವಾರ ನಿರ್ಮಿಸುತಿರುವೆನು ॥ ೮ ॥

ನಾನೆ ಮಳೆಗರೆಯುವವ ತಡೆವವ, ಬಿಸಿಲು ಕಾಯಿಸುವವನು ನಾ ।
ನಾನೆ ಅಮೃತವು, ಮರಣವೂ ನಾ, ಸತ್ ಅಸತ್ತುಗಳಿನ್ನು ನಾ ॥ ೧೯ ॥

ಮೂರು ವೇದವರಿತ, ಪಾಪರಹಿತ, ಸೋಮ ಕುಡಿವವ ।
ಸ್ವರ್ಗಕೋರಿ ಯಜ್ಞದಿಂದ ಭಜಿಸುತೆನ್ನ ತುತಿಪವ ॥
ತನ್ನ ಪುಣ್ಯದಿಂದಲವನು ಇಂದ್ರಲೋಕ ಹೊಂದುವ ।
ಸ್ವರ್ಗದಲ್ಲಿ ಭೋಗಿಸುವನು ದಿವ್ಯದೇವ ಭೋಗವ ॥ ೨೦ ॥

ಭೋಗಿಸುತ್ತಲವನು ಆ ವಿಶಾಲ ಸ್ವರ್ಗಲೋಕವ ।
ಪುಣ್ಯಕ್ಷೀಣವಾದ ಮೇಲೆ ಮತ್ತೆ ಧರೆಗೆ ಮರಳುವ ॥
ಹೀಗೆ ಮೂರು ವೇದ ಧರ್ಮದಂತೆ ಕರ್ಮಮಾಡುವ ।
ಕರ್ಮಫಲವ ಬಯಸಿ ಜನನ ಮರಣಗಳಿಗೆ ಸಿಲುಕುವ ॥ ೨೧ ॥

ನನ್ನನೊಂದೇ ಭಾವದಲಿ ನೆನೆನೆನೆದು ಭಜಿಸುತಲನುದಿನ ।
ನನ್ನೊಳಗೆ ಸ್ಥಿತವಿಹನ ಯೋಗಕ್ಷೇಮ ವಹಿಸುವೆ ನರ್ಜುನ ॥ ೨೨ ॥

ಅನ್ಯದೇವತೆಗಳಲಿ ಶ್ರದ್ಧೆಯನಿಟ್ಟು ಪೂಜಿಪ ಭಕ್ತರೂ ।
ನನ್ನನೇ ಪೂಜಿಪರು ಪ್ರಾರ್ಥನೆ, ಅವಿಧಿ ಪೂರ್ವಕವಾದರೂ ॥ ೨೩ ॥

ಇನ್ನು ಯಜ್ಞಕ್ಕೆಲ್ಲ ಸ್ವಾಮಿಯು, ಭೋಕ್ತೃವೂ ನಾನಿರುವೆನು ।
ನನ್ನ ನೈಜ ಸ್ವರೂಪವರಿಯದೆ ಜಾರುತಿರುವನು ಮನುಜನು ॥ ೨೪ ॥

ಮತ್ತೆ ದೇವವ್ರತನು ದೇವರ, ಪಿತೃವ್ರತನು ತಾ ಪಿತರನು ।
ಭೂತವ್ರತ ಭೂತರನು ಹೊಂದುವ, ನನ್ನ ಭಜಿಪನು ನನ್ನನು ॥ ೨೫ ॥

ಭಕ್ತಿಯಿಂದೆನಗರ್ಪಿಸಲು ಫಲಪುಷ್ಪಪತ್ರವ ಜಲವನು ।
ಭಕ್ತಿ ಪೂರ್ವಕ, ಆತ್ಮಸಂಯಮಿ ನೀಡಿದುದ ನಾನುಣುವೆನು ॥ ೨೬ ॥

ನೀನು ನೀಡುವ ದಾನ, ಮಾಡುವ ಹೋಮ, ಉಂಬುವುದೆಲ್ಲವ ।
ನೀನು ಗೈಯುವ ತಪಗಳೆಲ್ಲವ, ನನಗೆ ಅರ್ಪಿಸು ಪಾಂಡವ ॥ ೨೭ ॥

ಪಾರ್ಥ, ಕರ್ಮದಿ ಸಂಗವಿಡದಭಿಮಾನ ರಹಿತನ ತೆರದೊಳು।
ವರ್ತಿಸುವ ನನ್ನನ್ನು ಬಂಧಿಸಲಾರವಂತಹ ಕ್ರಿಯೆಗಳು

ನನ್ನ ನೇತೃತ್ವದಲಿ ಪ್ರಕೃತಿಯು ಚರವ ಅಚರವ ಸೃಜಿಪುದು।
ಇನ್ನಿದೇ ಕಾರಣದಿ ಈ ಸಂಸಾರ ನಡೆಯುತಲಿರುವುದು ।

ನನ್ನ ಭೂತ ಮಹೇಶ್ವರೀ ಘನರೂಪವರಿಯದ ಮೂಢರು।
ಇನ್ನು ಮನುಜ ಶರೀರಧಾರಿಯದಾದ ನನ್ನನು ಜರೆವರು ।

ವ್ಯರ್ಥ ಆಶೆಯ, ವ್ಯರ್ಥ ಕರ್ಮದ, ವ್ಯರ್ಥ ಜ್ಞಾನದ ಮೂಢರು।
ಪಾರ್ಥ, ಮೋಹದಿ ಅಸುರ ರಾಕ್ಷಸ ಪ್ರಕೃತಿಗಳ ಹೊಂದಿರುವರು ।

ಇನ್ನು ದೈವೀ ಪ್ರಕೃತಿ ಹೊಂದುತಲೊಂದೆ ಮನದಿ ಮಹಾತ್ಮರು।
ನನ್ನನವ್ಯಯ, ಭೂತ ಮೂಲನು ಎಂದು ತಿಳಿಯುತ ಭಜಿಪರು ।

ಯತ್ನಶೀಲರು, ದೃಢವ್ರತರು ಬಿಡದೆನ್ನ ಕೀರ್ತನೆಗೈವರು।
ನಿತ್ಯಯುಕ್ತರು ಭಕ್ತಿಯಿಂದಲಿ ನಮಿಸಿ ನನ್ನನು ಭಜಿಪರು ॥

ಅನ್ಯಕೆಲರೇಕತ್ವ ಮತ್ತೆ ಪೃಥಕ್ತ್ವ, ಬಹುವಿಧದಿಂದಲು।
ಇನ್ನು ಭಜಿಪರು ಜ್ಞಾನಯಜ್ಞದಿ ವಿಶ್ವಮುಖಿಯೆಂದೆನ್ನನು ॥

ನಾನೆ ಕ್ರತು, ನಾನಿಹೆನು ಯಜ್ಞ, ಸ್ವಧೆಯುನಾ, ಔಷಧಿಯು ನಾ।
ನಾನೆ ಮಂತ್ರವು, ಘೃತವು ನಾನೇ, ಅಗ್ನಿನಾ, ಆಹುತಿಯು ನಾ ॥

ನಾನು ಲೋಕದ ತಾಯಿ ತಂದೆಯು, ಅಜ್ಜ, ಧಾತೃ, ಪವಿತ್ರನು।
ನಾನು ಯಜು ಋಕ್ಸಾಮ ವೇದವು, ವೇದ್ಯನೂ, ಓಂಕಾರನು ॥

ನಾನೆ ಗತಿ, ಪೋಷಕ, ನಿವಾಸನು, ಸಾಕ್ಷಿ, ಪ್ರಭು, ಸಖ, ಶರಣನು।
ನಾನು ಪ್ರಳಯೋತ್ಪತ್ತಿ, ಸ್ಥಿತಿಯು, ನಿಧಾನ, ಅವ್ಯಯಬೀಜನು ॥

ಇಂತು ನೀ ಶುಭ ಅಶುಭ ಫಲಗಳ ಕರ್ಮ ಬಂಧನ ಕಡಿಯು
ಕುಂತಿ ಸುತ, ಸಂನ್ಯಾಸ ಯೋಗವ ಹೊಂದಿ ನನ್ನೊಳು ಸೇರ

ಭೂತರೆಲ್ಲರಿಗಾನು ಸಮನಿಹೆ, ಇಲ್ಲೆನಗೆ ಸಖ ರಿಪುಗಳು ।
ಪ್ರೀತಿಯಿಂದೆನಗರ್ಚಿಪರು ಇಹರೆನ್ನೊಳಗೆ ನಾನವರೊಳು

ದುಷ್ಟ ಕರ್ಮಿಯು ಸಹಿತ ಭಜಿಸಲು, ಏಕಭಾವದೊಳೆನ್ನನು ।
ಶಿಷ್ಟನವನೆಂದರಿಯುಬೇಕೀಗವನು ಶುಭ ಸಂಕಲ್ಪನು

ಬೇಗನವ ಧರ್ಮಾತ್ಮನಾಗುವ, ನಿತ್ಯಶಾಂತಿಯ ಹೊಂದುವ ।
ಹೀಗೆ ತಿಳಿ ಕೌಂತೇಯ ನನ್ನಯ ಭಕ್ತ ಹೊಂದನು ನಾಶವ

ಎನ್ನ ಆಶ್ರಯ ಹೊಂದಿ ಪಾರ್ಥನೆ, ಪಾಪಯೋನಿಗಳೆಲ್ಲರು ।
ಇನ್ನು ಸ್ತ್ರೀಯರು ವೈಶ್ಯ ಶೂದ್ರರು ಪರಮ ಗತಿಯನು ಪಡೆವರ

ಭಕ್ತ, ವಿಪ್ರರ, ಪುಣ್ಯವಾನ್ ರಾಜರ್ಷಿಗಳ ಮಾತೇಕೆಲೋ ।
ಮತ್ತೆ ನಿತ್ಯವು, ಅಸುಖಮಯ ತನು ಹೊಂದಿ ನನ್ನನು ಭಜಿಸೆ

ನನ್ನೊಳಿಡುಮನ, ಯಜಿಸು, ನನ್ನಯ ಭಕ್ತನಾಗೆಲೊ, ನಮಿಸು
ನನ್ನೊಳಾತ್ಮವನಿರಿಸಿ, ಶರಣೆನಗಾಗೆ, ಹೊಂದುವಿ ಎನ್ನ ನೀ

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗಿತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ರಾಜವಿದ್ಯಾ ರಾಜ ಗುಹ್ಯವು ನವಮದಿ ॥

ಅಧ್ಯಾಯ ೧೦.

ವಿಭೂತಿಯೋಗ

ಶ್ರೀಕೃಷ್ಣ:

ಕೇಳು ನೀ ಮತ್ತೊಮ್ಮೆ ವೀರನೆ, ನನ್ನ ಉತ್ತಮ ನುಡಿಯನು ।
ಕೇಳಿ ತುಷ್ಟಿಸುವ ನಿನಗೆ ನಿನ್ನಯ ಹಿತವ ಬಯಸುತ, ಪೇಳ್ವೆನು ॥ ೧ ॥

ಸುರ ಮಹರ್ಷಿಗಳರಿಯಲಾರರು ನನ್ನ ಉತ್ಪತ್ತಿಯನೆಲೊ ।
ಇರುವ ಬಗೆಯಲಿ ಸುರ ಮಹರ್ಷಿಗಳಾದಿ ಕಾರಣ ನಾನೆಲೊ ॥ ೨ ॥

ಅರಿವನಾವ, ಅನಾದಿ, ಲೋಕಮಹೇಶ, ಅಜನೆಂದೆನ್ನನು ।
ನರರೊಳಾತನೆ ಭ್ರಾಂತಿರಹಿತನು, ಸರ್ವ ಪಾಪದಿ ಮುಕ್ತನು ॥ ೩ ॥

ಸತ್ಯ, ಕ್ಷಮೆ, ದಮ, ಶಾಂತಿ, ಬುದ್ಧಿಯು, ಅಸಂಮೋಹವು ಜ್ಞಾನವು ।
ಮೃತ್ಯು, ಜನ್ಮವು, ದುಃಖಸೌಖ್ಯವು, ಭಯವು ಹಾಗೂ ಅಭಯವು ॥ ೪ ॥

ದಾನ, ತಪವು, ಅಹಿಂಸೆ, ಸಮತೆ, ಯಶಾಪಯಶ, ಸಂತೋಷವು ।
ಪ್ರಾಣಿಗಳ ಈ ವಿವಿಧ ಭಾವಗಳೆನ್ನ ಮೂಲಕ ಜನಿಪುವು ॥ ೫ ॥

ಮುನ್ನ ನಾಲ್ವರು, ಮತ್ತೆ ಸಪ್ತಮಹರ್ಷಿಗಳು, ಮನುವರ್ಯರು ।
ನನ್ನ ಮನ ಸಂಜಾತರವರಿಂದಿಳೆಯ ಜನ ಜನಿಸಿರುವರು ॥ ೬ ॥

ತತ್ವದಿಂದಲಿ ನನ್ನ ಯೋಗ ವಿಭೂತಿಗಳ ತಿಳಿದಾತನು ।
ಮತ್ತೆ ಅವಿಚಲ ಯೋಗವನು ಸಂದೇಹವಿಲ್ಲದೆ ಪಡೆವನು ॥ ೭ ॥

ಎಲ್ಲದರ ಉತ್ಪತ್ತಿ ಸ್ಥಾನನು, ನಾ ಪ್ರವರ್ತಕನಿರುವೆನು ।
ಬಲ್ಲವರು ಅರಿತಿದನು ಭಜಿಪರು ಭಕ್ತಿಭಾವದೊಳೆನ್ನನು ॥ ೮ ॥

ನನ್ನೊಳಿರಿಸುತ ಚಿತ್ತಪ್ರಾಣವ, ತಿಳಿಸುತೊಬ್ಬರಿಗೊಬ್ಬರು ।
ನನ್ನ ಕಥೆಗಳ ಪೇಳಿ ರಮಿಪರು ನಿತ್ಯದಲಿ ಸಂತುಷ್ಟರು

ನಿರುತ ನನ್ನಲಿ ರಮಿಸುತೀಪರಿ ಪ್ರೇಮಪೂರ್ವಕ ಭಜಿಸುವ ।
ನರಗೆ ಕೊಡುವೆನು ನನ್ನನವ ಪಡೆವಂಥ ಬುದ್ಧಿಯ ಯೋಗವ

ನಾನು ದಯತೋರಿಸಲು ಅವರಲಿ, ಅವರ ಹೃದಯದೊಳಿರುವೆ
ಜ್ಞಾನ ದೀಪವ ಬೆಳಗುತಲಿ ಅಜ್ಞಾನ ತಿಮಿರವ ಕಳೆವೆನು

ಅರ್ಜುನ :

ಪರಮಬ್ರಹ್ಮನು ಪರಮಧಾಮನು, ದಿವ್ಯ ಪುರುಷನು, ಶಾಶ್ವತ ।
ವರಪವಿತ್ರನು, ಆದಿದೇವನು, ಅಜನು, ವಿಭು ನೀನೆನ್ನುತ

ಇನ್ನು ಋಷಿ, ದೇವರ್ಷಿನಾರದ, ಅಸಿತ, ದೇವಲ ವ್ಯಾಸರು ।
ನಿನ್ನ ಬಣ್ಣಿಪರಿಂತು, ಅಂತೆಯೆ, ಪೇಳುತಿಹೆ ನೀನಾದರು

ನೀನು ಪೇಳಿದುದೆಲ್ಲವನು ನಿಜವೆಂದು ತಿಳಿವೆನು ಕೇಶವ ।
ದಾನವರು ದೇವತೆಗಳರಿಯರು, ನಿನ್ನ ಇಂಥ ಸ್ವರೂಪವ

ಜೀವರೆಲ್ಲರ ಪಿತನೆ, ಪುರುಷೋತ್ತಮನೆ, ಹೇ ಜೀವೇಶನೆ ।
ದೇವದೇವನೆ, ನೀನೆ ನಿನ್ನನು ಬಲ್ಲೆಯೈ, ಜಗದೀಶನೆ

ಇನ್ನದಾವ ವಿಭೂತಿ ರೂಪದಿ ಜಗವ ನೀ ತುಂಬಿರುವೆಯೈ ।
ನಿನ್ನ ದಿವ್ಯ ವಿಭೂತಿಯೆಲ್ಲವ ನೀನೆ ಪೇಳಲು ಅರ್ಹನೈ ।

ನಿನ್ನನನುದಿನ ಚಿಂತಿಸುತ ಎಂತರಿವೆನೈ, ಯೋಗೇಶನೆ ।
ಇನ್ನು ನಾನಾವಾವ ಭಾವದಿ ಧ್ಯಾನಿಸಲಿ, ಭಗವಂತನೆ ।

ಪೇಳು ನೀನು ಜನಾರ್ದನನೆ, ಮತ್ತೊಮ್ಮೆ ಯೋಗ, ವಿಭೂತಿಯ
ಆಲಿಸಿದರೂ ನಿನ್ನ ವಚನಾಮೃತವ ಹೊಂದೆನು ತೃಪ್ತಿಯ ।

ಶ್ರೀಕೃಷ್ಣ :

ನನ್ನ ಅತಿ ಪ್ರಾಮುಖ್ಯ ದಿವ್ಯ ವಿಭೂತಿಗಳ ನಾನೊರೆವೆನೈ ।
ನನ್ನ ವಿಸ್ತರಕಂತವಿಲ್ಲವು, ಭಾರತನೆ, ನೀ ತಿಳಿಯೆಲೈ ॥ ೧೯ ॥

ಸರ್ವ ಜೀವರ ಹೃದಯದೊಳಗರ್ಜುನನೆ, ನಾನೇ ಆತ್ಮನು ।
ಸರ್ವ ಭೂತರ ಆದಿ, ಮಧ್ಯವು, ಅಂತವೂ, ನಾನಿರುವೆನು ॥ ೨೦ ॥

ಮರುತರೊಳಗೆ ಮರೀಚಿ ನಾ, ಆದಿತ್ಯರೊಳಗಿಹೆ ವಿಷ್ಣುವು ।
ಕಿರಣಯುತ ರವಿ ಜ್ಯೋತಿಯಲಿನಾ, ತಾರೆಗಳಲಿಹೆ ಇಂದುವು ॥ ೨೧ ॥

ಸುರರೊಳಿಂದ್ರನು ನಾನು, ವೇದದಿ ಸಾಮವೇದವು ನಾನೆಲೊ ।
ಕರಣದಲಿ ನಾ ಮನಸು, ಪ್ರಾಣಿಗಳಲ್ಲಿ ಚೇತನ ನಾನೆಲೊ ॥ ೨೨ ॥

ರುದ್ರರೊಳು ಶಂಕರ, ಕುಬೇರನು ಯಕ್ಷ ರಾಕ್ಷಸರೊಳಗೆ ನಾ ।
ಅದ್ರಿಗಳಲಾಗಿಹೆನು ಮೇರುವು, ವಸುಗಳಲಿ ಪಾವಕನು ನಾ ॥ ೨೩ ॥

ತಿಳಿ, ಪುರೋಹಿತರಲ್ಲಿ ಮುಖ್ಯ ಬೃಹಸ್ಪತಿಯು ಆಗಿರುವೆ ನಾ ।
ದಳಪತಿಗಳಲಿ ಸ್ಕಂದ ನಾನು, ಸರೋವರದಿ ಸಾಗರನು ನಾ ॥ ೨೪ ॥

ವಚನದೊಳು ಏಕಾಕ್ಷರನು, ಭೃಗುಮುನಿ ಮಹರ್ಷಿಗಳಲ್ಲಿ ನಾ ।
ಅಚರಗಳಲಿ ಹಿಮಾಲಯವು, ಜಪಯಜ್ಞ ಯಜ್ಞಗಳಲ್ಲಿ ನಾ ॥ ೨೫ ॥

ಚಿತ್ರರಥ ಗಂಧರ್ವರಲಿ ನಾ, ಕಪಿಲಮುನಿ ಸಿದ್ಧರಲಿ ನಾ ।
ಮತ್ತೆ ದೇವರ್ಷಿಯಲಿ ನಾರದ, ವೃಕ್ಷದಲಿ ಅಶ್ವತ್ಥ ನಾ ॥ ೨೬ ॥

ಕ್ಷೀರಸಾಗರ ಜನ್ಯ ಉಚ್ಚೈಶ್ರವಸು ತಿಳಿ ಹಯಗಳಲಿ ನಾ ।
ಧಾರಿಣೀ ಪತಿ ಮನುಜರಲಿ, ಕರಿಗಳಲಿ ಐರಾವತನು ನಾ ॥ ೨೭ ॥

ನಾನು ಆಯುಧಗಳಲಿ ವಜ್ರವು, ಪ್ರಜೋತ್ಪಾದಕ ಕಾಮ ನಾ ।
ನಾನು ಗೋವುಗಳಲ್ಲಿ ಸುರಭಿಯು, ಸರ್ಪದಲಿ ವಾಸುಕಿಯು ನಾ ॥ ೨೮ ॥

ಪಾರ್ಥ, ಭೂತರಿಗೆಲ್ಲ ನಾ ಉತ್ಪತ್ತಿ ಕಾರಣ ಬೀಜವು ।
ಮತ್ತೆ ಸಚರಾಚರದಿ ನನ್ನನ್ನುಳಿದು ಬೇರೇನಿಲ್ಲವು ॥ ೩೯ ॥

ನನ್ನ ದಿವ್ಯ ವಿಭೂತಿಗಳಿಗಿಲ್ಲೆಂದಿಗೂ ಕೊನೆ ಪಾಂಡವ ।
ಇನ್ನು ದಿಗ್ದರ್ಶನಕೆ ಪೇಳಿದೆ, ಈ ವಿಭೂತಿ ಸ್ವರೂಪವ ॥ ೪೦ ॥

ಇನ್ನದಾವುದು ಶ್ರೀಯುತವೊ, ಊರ್ಜಿತವೊ, ವೈಭವಯುಕ್ತವೊ ।
ನನ್ನ ತೇಜದ ಅಂಶದಿಂದದು, ಪುಟ್ಟಹುದು ಎಂದರಿಯೆಲೊ ॥ ೪೧ ॥

ಇನ್ನು ಈ ವಿಸ್ತಾರವೆಲ್ಲವನರಿತೊಡೇನು ಪ್ರಯೋಜನ ।
ನನ್ನ ಒಂದೇ ಅಂಶದಲಿ ಜಗವೆಲ್ಲ ಧರಿಸಿಹೆನರ್ಜುನ ॥ ೪೨ ॥

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಕೊನೆಯು ವಿಭೂತಿ ಯೋಗವು ಹತ್ತನೆಯ ಅಧ್ಯಾಯದಿ ॥

ನಾನನಂತನು ನಾಗರೊಳು ಇಹೆ, ಪಿತೃಗಳಲಿ ಅರ್ಯಮನು ನಾ।
ನಾನು ಜಲಚರಗಳಲಿ ವರುಣನು, ಶಾಸಿಸುವರಲಿ ಯಮನು ನಾ

ದೈತ್ಯರಲಿ ಪ್ರಹ್ಲಾದ ನಾನಿಹೆ, ಗಣಿಸುವವರಲಿ ಕಾಲನು।
ಮತ್ತೆ ಸಿಂಹವು ಮೃಗಗಳಲಿ ನಾ, ಪಕ್ಷಿಗಳಲಿಹೆ ಗರುಡನು

ಶಸ್ತ್ರಧಾರಿಗಳಲ್ಲಿ ರಾಮನು. ಪವನ ಶುಚಿ ಕರ್ತರಲಿ ನಾ।
ಮತ್ಸ್ಯಗಳಲಿಹೆ ನಾನು ಮಕರನು, ನದಿಗಳಲಿ ಜಾಹ್ನವಿಯು ನಾ

ಹೇ ಧನಂಜಯ, ನಾನು ಸೃಷ್ಟಿಯ ಆದಿ, ಮಧ್ಯನು ಅಂತನು।
ವಾದಿಸುವವರ ವಾದ ನಾ, ವಿದ್ಯೆಯಲಿ ನಾ, ಅಧ್ಯಾತ್ಮನು

ಅಕ್ಷರಗಳಲಿ ನಾ 'ಅ'ಕಾರ, ಸಮಾಸಗಳಲಿಹೆ ದ್ವಂದ್ವನು।
ಅಕ್ಷಯಾತ್ಮಕ ಕಾಲ ನಾನಿಹೆ, ವಿಶ್ವತೋಮುಖ ಬ್ರಹ್ಮನು

ಜನಿಸುವರ ಉತ್ಪತ್ತಿ ಕಾರಣ, ಸರ್ವನಾಶಕ ಮೃತ್ಯು ನಾ।
ವನಿತೆಯಲಿ ಶ್ರೀ, ಕೀರ್ತಿ, ಧೃತಿ, ಸ್ಮೃತಿ, ಕ್ಷಮೆಯು ಮೇಧಾವಾ

ನಾನು ಸಾಮದಿ ಬೃಹತ್ಸಾಮನು, ಛಂದಸದಿ ಗಾಯತ್ರಿ ನಾ।
ನಾನು ಮಾಸದಿ ಮಾರ್ಗಶೀರ್ಷ, ವಸಂತನಿಹೆ ಋತುಗಳಲಿ ನಾ

ದ್ಯೂತ ನಾ ವಂಚಕರಲಿಹೆ, ತೇಜಸ್ವಿಯಲ್ಲಿಹ ತೇಜ ನಾ।
ಸತ್ವಶಾಲಿಯ ಸತ್ವ ನಾನಿಹೆ, ವಿಜಯನಾ, ನಿಶ್ಚಯನು ನಾ ।

ವಾಸುದೇವನು ಯದುಗಳಲಿ ನಾ, ಪಾರ್ಥನೈ ಪಾಂಡವರೊಳು।
ವ್ಯಾಸ ನಾ ಮುನಿಗಳಲಿ, ಶುಕ್ರಾಚಾರ್ಯ ಕವಿ ನಾ ಕವಿಯೊಳು ॥

ನಾನು ಗೌಪ್ಯದಿ ಮೌನ, ವಿಜಯೇಚ್ಛುಗಳಲಿರುತಿಹ ನೀತಿ ನಾ।
ಜ್ಞಾನಿಗಳಲಿಹ ಜ್ಞಾನ ನಾನೇ, ದಮನಗೈವರ ದಂಡ ನಾ ॥

ಸಂಜಯ :

ದೊರೆಯೆ, ಘನ ಯೋಗೇಶ ಹರಿ ತಾ ನುಡಿಯುತಲಿ ಈ ವಚನವ ।
ನರಗೆ ತೋರಿದನಾಗ ತನ್ನಯ ಪರಮ ಈಶ್ವರಿ ರೂಪವ ॥ ೯ ॥

ಎನಿತೊ ಅದ್ಭುತ ನೋಟಗಳು, ಅವಗೆನಿತೊ ಮುಖನೇತ್ರಂಗಳು ।
ಎನಿತೊ ದಿವ್ಯಾಭರಣ, ಕರದೊಳಗೆನಿತೊ ದಿವ್ಯಾಯುಧಗಳು ॥ ೧೦ ॥

ದಿವ್ಯಮಾಲಾ ವಸನಭೂಷಣ, ಸರ್ವತೋಮುಖ ದೇವನು ।
ದಿವ್ಯ ಪರಿಮಳಲೇಪ, ಸರ್ವಾಶ್ಚರ್ಯಮಯನು, ಅನಂತನು ॥ ೧೧ ॥

ನಭದೊಳೊಂದೇ ಸಮಯ ಸಾವಿರ ಸೂರ್ಯರುದಿಸುತ ಬೆಳಗಲಾ ।
ಪ್ರಭೆಯು ಸಾಟಿಯು ದಾಗಬಹುದೇ ಆ ಮಹಾತ್ಮನ ಪ್ರಭೆಗೆ ತಾ ॥ ೧೨ ॥

ಪಾಂಡವನು ಬಹುವಿಧದಿ ಬೇರೇಬೇರೆಯಾಗಿಹ ವಿಶ್ವವ ।
ಕಂಡನಾಗಲೆ ದೇವದೇವನ ದೇಹದಲಿ ಏಕತ್ರವ ॥ ೧೩ ॥

ಆಗ ವಿಸ್ಮಯಚಕಿತ ರೋಮಾಂಚಿತನದಾಗುತ ಪಾರ್ಥನು ।
ಬಾಗಿ ಶಿರಸಾನಮಿಸಿ ಕೈಜೋಡಿಸುತ ದೇವಗೆ ನುಡಿದನು ॥ ೧೪ ॥

ಅರ್ಜುನ :

ದೇವ ನಿನ್ನ ದೇಹದಿ, ನೋಳ್ಪೆನೆಲ್ಲ ದೇವರ ।
ವಿವಿಧ ವಿವಿಧವಾಗಿಹ ಭೂತಗಣಗಳೆಲ್ಲರ ॥
ಭವ್ಯ ಕಮಲ ಪೀಠದಿ ಹೊಳೆವ ಬ್ರಹ್ಮದೇವರ ।
ದಿವ್ಯವಾದ ಅಹಿಗಳ ಮತ್ತೆ ಋಷಿಗಳೆಲ್ಲರ ॥ ೧೫ ॥

ಕಾಣುತಿರುವುದೆಲ್ಲೆಡೆ, ನಿನ್ನನಂತ ರೂಪವು ।
ಕಣ್ಣು ಕೈ ಹೊಟ್ಟೆ ಬಾಯಿ ಲೆಕ್ಕವಿಲ್ಲದಿರುವುವು ॥
ನಿನ್ನ ಆದಿಯಾವುದೊ, ಮಧ್ಯ, ಅಂತವಾವುದೊ ।
ಇನ್ನು ವಿಶ್ವರೂಪಿಯೆ, ವಿಶ್ವದೊಡೆಯ ತಿಳಿಯದೊ ॥ ೧೬ ॥

ಅಧ್ಯಾಯ ೧೧.

ವಿಶ್ವರೂಪ ದರ್ಶನ

ಅರ್ಜುನ :

ನನ್ನ ಮೇಲಿನ ದಯದಿ ಪೇಳಿದ ಪರಮ ಗೂಢಾಧ್ಯಾತ್ಮವ ।
ನಿನ್ನ ಮುಖದಿಂದರಿತು ಹೊಂದಿತು ನನ್ನ ಮೋಹವು ನಾಶವ

ಪ್ರಾಣಿಗಳ ಉತ್ಪತ್ತಿ ಲಯಗಳ, ನಿನ್ನ ಅವ್ಯಯ ಮಹಿಮೆಯ ।
ನಾನು ನಿನ್ನಿಂದಾಲಿಸಿದೆ ವಿಸ್ತಾರದಲಿ ಕಮಲಾಲಯ

ಎಂತು ಪರಮೇಶ್ವರನೆ, ನಿನ್ನನು ನೀನು ಬಣ್ಣಿಸಿಕೊಂಡಿಹೆ ।
ಅಂಥ ನಿನ್ನಯ ಈಶ್ವರೀ ರೂಪವನು ನೋಡಲು ಬಯಸುವೆ

ಇನ್ನು ನೋಡಲು ಅರ್ಹ ನಾನೆಂದೆನಿಸಿದರೆ ನಿನಗೊಡೆಯನೆ ।
ನಿನ್ನ ಅವ್ಯಯ ರೂಪ ತೋರಿಸು ನನಗೆ ನೀ ಯೋಗೇಶನೆ

ಶ್ರೀಕೃಷ್ಣ :

ಸವ್ಯಸಾಚಿಯೆ, ನೋಡು ರೂಪಗಳೆನ್ನ ಅಗಣಿತವಾಗಿಹ ।
ದಿವ್ಯ ಆಕೃತಿಯುಳ್ಳ ನಾನಾ ವಿಧದ ವರ್ಣದಿ ಕೂಡಿಹ

ನೋಡು ರುದ್ರಾದಿತ್ಯ, ಅಶ್ವಿನಿ ಸುತರ, ಮರುತರ, ವಸುಗಳ ।
ನೋಡು ನೀ ಹಿಂದೆಂದು ಕಾಣದ ವಿಧವಿಧದ ಕೌತುಕಗಳ

ನನ್ನ ದೇಹದಿ ಒಂದೆ ಎಡೆ ಇಹ ಅಚರಚರ ಜಗವೆಲ್ಲವ ।
ಇನ್ನು ನೋಡೆಲೊ ಪಾರ್ಥ, ನೀನೀಕ್ಷಿಸಲು ಬಯಸುವುದೆಲ್ಲವ

ನೋಡಲಾರೆಯೊ ನಿನ್ನ ಈ ಚಕ್ಷುಗಳ ಮೂಲಕ ನನ್ನನು ।
ನೋಡು ಮಮ ಈಶ್ವರೀ ಯೋಗವ, ದಿವ್ಯದೃಷ್ಟಿಯನೀವೆನು

ಶಿರದಿ ಮುಕುಟ, ಕರದಲಿ ಚಕ್ರಗದೆಯ ಧರಿಸಿದ ।
ಸರುವ ದಿಶೆಯು ಬೆಳಗುವ ಅಮಿತ ತೇಜ ರಾಶಿಯು ॥
ಉರಿವ ಅಗ್ನಿ–ರವಿಯುವೊಲ್ ಹೊಳೆವ, ಸುತ್ತು ತೊಳಗುವ ।
ಹರಿಯೆ, ನೋಳ್ಪೆ ನಿನ್ನಯು ದುರ್ನಿರೀಕ್ಷ್ಯ ರೂಪವ

ನೀನೆ ತಿಳಿದುಕೊಳ್ಳಲು ಯೋಗ್ಯ, ಉತ್ತಮಾಕ್ಷರ ।
ನೀನೆ ಈ ಜಗತ್ತಿಗೆ ಇರುವೆ ಪರಮ ಆಶ್ರಯ ॥
ನೀನೆ ನಾಶ ರಹಿತನು ನಿತ್ಯ ಧರ್ಮ ರಕ್ಷಕ ।
ನೀನೆ ಆ ಸನಾತನ ಪುರುಷ, ಇದುವೆ ಮಮ ಮತ

ಅಂತ ಮಧ್ಯ ಆದಿಯು ಇರದ ಅಮಿತ–ವೀರ್ಯನ ।
ಅಂತ ರಹಿತ ಭುಜಗಳ, ಸೂರ್ಯಚಂದ್ರ ನೇತ್ರನ ॥
ಕಾಂತಿಯುಕ್ತ ಜಾಜ್ವಲ ಜ್ವಾಲೆಯುಳ್ಳ ವದನನ ।
ಸ್ವಂತ ತೇಜದೀ ಜಗ ತಪಿಪ ನಿನ್ನ ಕಾಂಬೆ ನಾ

ಪೃಥ್ವಿಗಗನ ಮಧ್ಯದಲ್ಲಿರುವ ಸ್ಥಳವದೆಲ್ಲವು ।
ಮತ್ತೆ ದಿಶೆಗಳೆಲ್ಲ ನಿನ್ನಿಂದ ವ್ಯಾಪ್ತವಿರುವುವು ॥
ಇಂಥ ನಿನ್ನ ಅದ್ಭುತ ಉಗ್ರರೂಪ ಕಾಣಲು ।
ಭೀತಿಯಿಂದ ನಡುಗಿತ್ತೈ ಮಹಾತ್ಮ ಮೂರು ಲೋಕವು

ಸುರ ಸಮೂಹವೆಲ್ಲವು ಸೇರುತಿಹುದು ನಿನ್ನೊಳು ।
ಕರವ ಮುಗಿದು ತುತಿಪರು ಹಲವರಿನ್ನು ಭಯದೊಳು ।
"ಇರಲಿ ಸ್ವಸ್ತಿ" ಎನುತಲಿ, ಸಿದ್ಧಗಣವು ಋಷಿಗಳು ।
ಅರರೆ! ವಿಪುಲ ಸ್ತೋತ್ರದಿಂ ನಿನ್ನ ಸ್ತುತಿಸುತಿರುವರು

ವಿಶ್ವೆದೇವ, ಸಾಧ್ಯರು, ರುದ್ರರಾದಿತ್ಯರು ।
ಅಶ್ವಿನೀ ಕುಮಾರರು, ಮರುತಗಣವು ಯಕ್ಷರು ॥
ಬಿಸಿದನುಂಬ ಪಿತೃಗಳು, ಸಿದ್ಧಗಂಧರ್ವರು ।
ಅಸುರ ಗಣಗಳೆಲ್ಲ ಕೌತುಕದಿ ನಿನ್ನ ನೋಳ್ಪರು

ಹಳವಾದ ಮುಖಗಳು, ಕಣ್ಣು ಕಾಲು ತೊಡೆಗಳು ।
ಹಳಕೋರೆ ಪಲ್ಗಳು, ವಿಪುಲ ಉದರ ಭುಜಗಳು ॥
ಹ ಸ್ವರೂಪ ನಿನ್ನಯ, ನೋಡಿ ಜನಗಳೆಲ್ಲರು ।
ಹಳ ಭಯದೊಳಿರುವರು, ಅಂತೆ ನಾನು ಆದರೂ || ೨೩ ||

ನ್ನ ಮುಗಿಲು ಮುಟ್ಟುವ, ಹೊಳೆವ ವಿವಿಧ ವರ್ಣದ ।
ನ್ನು ತೆರೆದ ಬಾಯಿಯ, ಉರಿವ ಬೃಹನ್ನೇತ್ರದ ॥
ನ್ನ ನೋಡಿ ವಿಷ್ಣುವೆ, ಚಿತ್ತವಾಯ್ತು ವ್ಯಾಕುಲ ।
ನ್ನು ಹೊಂದದಾದೆ ನಾ, ಧೈರ್ಯ ಹಾಗೂ ಶಾಂತಿಯ || ೨೪ ||

ನ್ನ ಅತಿ ಭಯಂಕರ ದಂಷ್ಟ್ರದಿಂದ ಕೂಡಿದ ।
ನ್ನು ಪ್ರಳಯ ದಗ್ನಿಯೋಲ್ಕಾಣುತಿರುವ ಮುಖಗಳ ॥
ಣ್ಣಿನಿಂದ ನೋಡುತ ನನಗೆ ದಿಕ್ಕು ತಪ್ಪಿತ್ತೈ ।
ನ್ನ ಶಾಂತಿ ಅಳಿಯಿತ್ತೈ, ದೇವದೇವ ಕರುಣಿಸೈ || ೨೫ ||

ಪೃಥ್ವಿಪಾಲರೆಲ್ಲರ ಸಂಘದಿಂದ ಕೂಡಿಯು ।
ೂತ ಪುತ್ರ ಕರ್ಣನು, ಭೀಷ್ಮ ಮತ್ತೆ ದ್ರೋಣನು ॥
ಮತ್ತೆ ನಮ್ಮ ಪಕ್ಷದ ಪ್ರಮುಖರಾದ ಯೋಧರು ।
ರ್ತರಾಷ್ಟ್ರರೊಂದಿಗೆ ಒಟ್ಟುಗೂಡುತೆಲ್ಲರು || ೨೬ ||

ನ್ನ ಈ ಭಯಂಕರ ದಂಷ್ಟ್ರಯುಕ್ತ ಮುಖದೊಳು ।
ನ್ನ ವೇಗದಿಂದಲಿ ಬಂದು ಸೇರುತಿರುವರು ॥
ನ್ನ ದಶನ ಮಧ್ಯದಿ ಸಿಕ್ಕು ಕೆಲರ ಶಿರಗಳು ।
ನ್ನು ಒಡೆದು ನುಚ್ಚು ನೂರಾದ ತೆರದಿ ತೋರ್ಪುದು || ೨೭ ||

ಹೇಗೆ ಗಣನೆಯಿಲ್ಲದ ನದಿಯ ಜಲಪ್ರವಾಹವು ।
ಸಾಗರವನು ಅರಸುತ ಬೇಗ ಸಾಗಿ ಬರುವವೊ ॥
ಹಾಗೆ ಇಳೆಯ ವೀರರು, ಬಂದು ಸೇರುತಿರುವರು ।
ವೇಗದಿಂದ ನಿನ್ನಯ ಉರಿವ ಮುಖದೊಳೆಲ್ಲರು || ೨೮ ||

ಎಂತು ತಾ ಪತಂಗವು ಪ್ರಖರವಾದ ದೀಪದಿ ।
ಅಂತ್ಯಕಾಗಿ ಬೀಳ್ವುದೊ ಮೀರಿದಂಥ ವೇಗದಿ ॥
ಅಂತೆ ಈ ನೃಲೋಕವು ಎಲ್ಲ ನಿನ್ನ ವದನದಿ ।
ಅಂತ ಹೊಂದಲೋಸುಗ ಸೇರುತಿಹುದು ರಭಸದಿ ॥ ೨

ಲೋಕಗಳನು ಎಲ್ಲವ ನಿನ್ನ ಉರಿವ ಮುಖದೊಳು ।
ಹಾಕಿ ನುಂಗಿ ನೆಕ್ಕುವಿ ನೀನು ಎಲ್ಲ ಬಗೆಯೊಳು ॥
ಲೋಕದೊಡೆಯ ನಿನ್ನಯ ಉಗ್ರವಾದ ಪ್ರಭೆಗಳು ।
ಲೋಕಗಳನು ಎಲ್ಲವ ಬೆಳಗಿ ತಪಿಸುತಿರುವುವು ॥ ೩

ಪರಮ ಉಗ್ರರೂಪಿಯೆ, ಪೇಳು ನೀನು ಆರೆಲೊ ।
ಕರುಣಿಸೆನಗೆ ದೇವನೆ ವಂದಿಸುವೆನು ನಿನಗೆಲೊ ॥
ಅರಿಯ ಬಯಪೆ ನಿನ್ನಯ ಆದಿ ಅಂತ ನಾನೆಲೊ ।
ಅರಿಯದಾದೆ ನಿನ್ನಯ ಘನ ಪ್ರವೃತ್ತಿಯೆನ್ನೆಲೊ ॥ ೩

ಶ್ರೀ ಕೃಷ್ಣ :

ನಾನು ಜಗವ ಕ್ಷಯಿಸುವ ಬೆಳೆದು ನಿಂತ ಕಾಲನು ।
ನಾನೆ ಜಗವ ನಶಿಸುವ ಕಾರ್ಯದಲಿ ಪ್ರವೃತ್ತನು ॥
ಸೇನೆಗಳಲಿ ಕಾದಲು ಬಂದ ಯೋಧರೆಲ್ಲರು ।
ನೀನು ಕಾದದಿದ್ದರೂ, ಇನ್ನು ಬದುಕಲಾರರು ॥ ೩

ಮತ್ತೆ ನೀನು ಅಂತೆಯೇ ಏಳು, ಯಶವ ಪಡೆಯೆಲೈ ।
ಶತ್ರುಗಳನು ಜಯಿಸಿ ಸಮೃದ್ಧ ರಾಜ್ಯ ಭೋಗಿಸೈ ॥
ಪಾರ್ಥ, ಇವರನೆಲ್ಲನು, ಮೊದಲೆ ಕೊಂದು ಇರುವೆನೈ ।
ಮತ್ತೆ ಸವ್ಯಸಾಚಿಯೆ, ನಿಮಿತ್ತ ಮಾತ್ರವಾಗಿರೈ ॥ ೩

ನಾನು ಕೊಂದೆ ಇರುವೆನು, ಭೀಷ್ಮ ಸೈಂಧವರನೂ ।
ದ್ರೋಣ ಕರ್ಣರನ್ನು ಇನ್ನಿತರ ಯೋಧ ಜನರನು ॥

ನೀನು ವ್ಯಥಿಸಲಾರದೆ ಸಂಹರಿಸು ಅವರನು ॥
ಇನ್ನು ಯುದ್ಧ ಮಾಡೆಲೊ, ಗೆಲುವಿ ರಣದಿ ಹಗೆಯನು ॥ ೩೪ ॥

ಸಂಜಯ :
ಕೇಶವನ ಈ ನುಡಿಯ ಕೇಳಿ ಕಿರೀಟ ಭಯದಲಿ ನಡುಗುತ ।
ಕೃಷ್ಣನಿಗೆ ಕೈಮುಗಿದು ಗದ್ಗದ ಸ್ವರದಿ ಉಸುರಿದ ನಮಿಸುತ ॥ ೩೫ ॥

ಅರ್ಜುನ :
ಹರಿಯೆ, ನಿನ್ನ ಮಹಿಮೆಯ ಪಾಡಿ ಲೋಕವೆಲ್ಲವು ।
ಹರುಷಹೊಂದಿ ನಿನ್ನನು ಪ್ರೀತಿಸುವುದು ವಿಹಿತವು ॥
ಸರುವ ದಿಶೆಯೊಳಂಜಿ ರಕ್ಕಸರು ಓಡುತಿರುವರು ।
ಸರುವ ಸಿದ್ಧಗಣಗಳು ನಿನಗೆ ನಮಿಸುತಿರುವುವು ॥ ೩೬ ॥

ನೀನು ಇರುವೆ ಬ್ರಹ್ಮನ ಶ್ರೇಷ್ಠ ಆದಿಕರ್ತನು ।
ನೀನು ಸತ್ ಅಸತ್ತಿಗೂ, ಅತೀತ ಮತ್ತನಂತನು ॥
ನೀನೆ ದೇವದೇವ, ಅಕ್ಷರ, ಜಗನ್ನಿವಾಸನೆ ।
ನಿನ್ನನೆಂತು ನಮಿಸದೆ ಇರುವರೈ ಮಹಾತ್ಮನೆ ॥ ೩೭ ॥

ನೀನು ಆದಿದೇವನು, ನೀ ಪುರಾಣ ಪುರುಷನು ।
ನೀನೆ ಈ ಜಗತ್ತಿನ ಶ್ರೇಷ್ಠತಮ ನಿಧಾನನು ॥
ನೀನನಂತ ರೂಪಿ ಈ ಜಗವ ತುಂಬಿದಾತನು ।
ನೀನೆವೇದ್ಯ, ವೇತ್ತನು, ನೀನೆ ಪರಮ ಧಾಮನು ॥ ೩೮ ॥

ನೀನು ಯಮನು, ವಾಯುವು, ಅಗ್ನಿ ವರುಣ ಚಂದ್ರನು ।
ನೀನೆ ಇಹೆ ಪ್ರಜಾಪತಿ, ಸರ್ವರಾದಿ ಪುರುಷನು ॥
ನಾನು ನಿನಗೆ ಸಾವಿರ ಬಾರಿ ಬಾಗಿ ನಮಿಪೆನು ।
ನಾನು ಮತ್ತೆ ಮತ್ತೆಯು ನಿನಗೆ ನಮಿಸುತಿರುವೆನು ॥ ೩೯ ॥

ನಾನು ನೋಡ ಲೆಳಸುವೆ ನಿನ್ನ ಮೊದಲ ರೂಪವ ।
ನೀನು ಮುಕುಟ ಧರಿಸಿಹ, ಚಕ್ರಗದೆಯ ಪಿಡಿದಿಹ ॥
ಇನ್ನು ನೀನು ಧರಿಸು ಆ ನಾಲ್ಕು ಭುಜದ ರೂಪವ ।
ಎನ್ನ ವಿಶ್ವಮೂರ್ತಿಯೆ, ಹೇ ಸಹಸ್ರಬಾಹುವೆ ॥ ೪೬ ॥

ಶ್ರೀಕೃಷ್ಣ :

ನಿನ್ನನುಳಿದು ಅನ್ಯರು ಮುನ್ನ ಯಾರು ಕಾಣದ ।
ಎನ್ನ ಆದ್ಯನಂತವು, ತೇಜ ಭರಿತವಾಗಿಹ ॥
ಎನ್ನ ವಿಶ್ವರೂಪವ ನಿನಗೆ ತೋರ್ದೆನರ್ಜುನಾ ।
ನಿನ್ನ ಮೇಲೆ ಕರುಣೆಯಿಂದೆನ್ನ ಯೋಗಬಲದಿ ನಾ ॥ ೪೭ ॥

ಯಜ್ಞ ವೇದ ಪಠನದಿ ಸ್ವಾಧ್ಯಾಯ ಧ್ಯಾನದಿ ।
ಇನ್ನು ಉಗ್ರತಪದಲಿ, ಪಾರ್ಥ, ನಿಯತಕರ್ಮದಿ ॥
ನನ್ನ ಇಂಥ ರೂಪವ ಈ ಮನುಜ ಲೋಕದಿ ।
ನಿನ್ನ ಹೊರತು ಅನ್ಯರು ಕಾಣರಾರು ನೈಜದಿ ॥ ೪೮ ॥

ನೋಡಿ ನನ್ನ ಇಂತಹ ಘೋರ ರೂಪವನ್ನು ನೀ ।
ಮೂಢಭಾವ ವಳಿಯೆಲೈ, ವ್ಯಥೆಯ ಮಾಡಬೇಡ ನೀ ॥
ದೂಡಿ ಭೀತಿಯನ್ನು ಸಂತೋಷ ಚಿತ್ತನಾಗು ನೀ ।
ನೋಡು ಮತ್ತೆ ಒಮ್ಮೆ ಈ ನನ್ನ ರೂಪವನ್ನು ನೀ ॥ ೪೯ ॥

ಸಂಜಯ :

ಇಂತು ಈ ನುಡಿಯನು ನುಡಿದು ವಾಸುದೇವನು ।
ಕುಂತಿಸುತಗೆ ತನ್ನಯ ನೈಜರೂಪ ತೋರ್ದನು ॥
ಶಾಂತವಾದ ಮೊದಲಿನ ರೂಪ ಮತ್ತೆ ತಳೆದನು ।
ಸಂತಸವನು ಬೀರ್ದನು ಹೆದರಿದಗೆ ಮಹಾತ್ಮನು ॥ ೫೦ ॥

ನಿನಗೆ ಇರಲಿ ವಂದನೆ ಹಿಂದು ಮುಂದಿನಿಂದಲು ।
ನಿನಗೆ ನಮನ ಸರ್ವನೆ, ಎಲ್ಲ ದಿಶೆಗಳಿಂದಲು ॥
ನೀನನಂತ ವೀರ್ಯನು, ನೀನಪಾರ ಶಕ್ತನು ।
ನೀನು ಸರ್ವವ್ಯಾಪಿಯು, ಅಂತೆ ನೀನು ಸರ್ವನು

ನಿನ್ನ ಇಂಥ ಮಹಿಮೆಯ ತಿಳಿಯಲಾರದಿನ್ನೆಲೊ ।
ಇನ್ನು ಪ್ರೀತಿಯಿಂದಲೊ ಅಥವಾ ಮರವಿನಿಂದಲೊ ॥
'ಕೃಷ್ಣ, ಸಖನೆ, ಯಾದವಾ' ಎಂದು ಕರೆದೆ ನಿನಗೆಲೊ ।
ಎನ್ನ ಗೆಳೆಯನೆನ್ನುತ ನಡೆದೆ ಸಲುಗೆಯಿಂದೆಲೊ

ನೀನು ಆಟ 'ಊಟದಿ ಮಲಗಿ ಅಥವ ಕುಳಿತಿರೆ ।
ಇನ್ನು ಏಕಾಂತದಿ ಅಥವಾ ಅನ್ಯರಿರುತಿರೆ ॥
ನಾನು ನಿನಗೆ ಹಾಸ್ಯದಿ ಒರಟು ನುಡಿಯ ನುಡಿದಿರೆ ।
ನೀನು ಕ್ಷಮಿಸುಎನ್ನುತ ಬೇಡಿಕೊಂಬೆ ಶ್ರೀಹರೆ

ನೀನೆ ಈ ಚರಾಚರ ಜಗಕೆ ತಂದೆಯಾಗಿಹೆ ।
ನೀನೆ ಉತ್ತಮೋತ್ತಮ ಗುರುವು ಪೂಜ್ಯನಾಗಿಹೆ ॥
ನಿನ್ನ ಸರಿಸಮಾನರು ಮೂರು ಲೋಕದಿರದಿರೆ ।
ಇನ್ನು ಅತುಲಶಕ್ತನೆ, ನಿನಗೆ ಅಧಿಕರಿರುವರೆ ?

ಮತ್ತೆ ಮೈಯನೊಡ್ಡಿ ಸಾಷ್ಟಾಂಗ ನಮನ ಮಾಡುವೆ ।
ಸ್ತುತ್ಯನಾದ ಈಶನೇ, ಕರುಣಿಸೆಂದು ಬೇಡುವೆ ॥
ಪುತ್ರನನ್ನು ಪಿತನು, ಮತ್ತೆ ಎಂತು ಪತಿಯು ಸತಿಯನು ।
ಮಿತ್ರಸಖನ ಸಹಿಸುವಂತೆ ಎನ್ನ ಸಹಿಸಲರ್ಹನು

ಮುನ್ನ ಎಂದು ಕಾಣದ ರೂಪಕಂಡು ತುಷಿಸಿದೆ ।
ನನ್ನ ಮನವು ಭಯದಲಿ, ಬಹಳ ವ್ಯಗ್ರವಾಗಿದೆ ॥
ನಿನ್ನ ದೇವ ರೂಪವ, ತೋರು ದೇವ ದೇವನೆ ।
ಇನ್ನು ನೀ ಪ್ರಸನ್ನನಾಗೈ ಜಗನ್ನಿವಾಸನೆ

ಅಧ್ಯಾಯ ೧೨.

ಭಕ್ತಿಯೋಗ

ಅರ್ಜುನ :

ಯೋಗವೇತ್ತರು ಇವರೊಳಾರ್ ? ಅವ್ಯಕ್ತ ಅಕ್ಷರ ಭಜಕರೊ ।
ಹೀಗೆ ಸಂತತ ಯುಕ್ತರಾಗುತ ನಿನ್ನುಪಾಸಿಪ ಭಕ್ತರೊ ॥ ೧ ॥

ಶ್ರೀಕೃಷ್ಣ :

ಚಿತ್ತವೆನ್ನೊಳಗಿಟ್ಟು ನನ್ನನು ಶ್ರದ್ಧೆಯಿಂದಲಿ ಭಜಿಪರು ।
ನಿತ್ಯಯುಕ್ತರು ನನ್ನ ಮತದಲಿ ಶ್ರೇಷ್ಠ ಯೋಗಿಗಳೆನಿಪರು ॥ ೨ ॥

ಸರ್ವರಲಿ ಸಮಬುದ್ಧಿಯಿರಿಸಿ ಅವರ್ಣನೀಯ, ಅಚಿಂತ್ಯನ ।
ಸರ್ವಗತ, ದೃಢ, ಅಚಲ, ಧ್ರುವ, ಅವಿನಾಶಿ ಮತ್ತವ್ಯಕ್ತನ ॥ ೩ ॥

ಸರ್ವ ಇಂದ್ರಿಯಗಳನು ಜಯಿಸುತ—ಧ್ಯಾನದಿಂ ಭಜಿಪಾತನು ।
ಸರ್ವ ಭೂತರ ಹಿತದಿ ಮಗ್ನನು, ನನ್ನನೇ ತಾ ಪಡೆವನು ॥ ೪ ॥

ಕಷ್ಟವತಿ ಮಿಗಿಲಹುದು ಆ ಅವ್ಯಕ್ತದೊಳು ಆಸಕ್ತಗೆ ।
ಕಷ್ಟದಿಂದಲೆ ಸಾಧ್ಯವಹುದವ್ಯಕ್ತಮಾರ್ಗವು ದೇಹಿಗೆ ॥ ೫ ॥

ಇನ್ನು ಮತ್ಪರರೆಲ್ಲ ಕರ್ಮಗಳೆನಗೆ ಅರ್ಪಣೆಮಾಡುತ ।
ನನ್ನ ಧ್ಯಾನವನನ್ಯ ಯೋಗದಿ ಮಾಡಿ ನನ್ನನೆ ಭಜಿಸುತ ॥ ೬ ॥

ಚಿತ್ತವೆನ್ನೊಳಗರ್ಜುನನೆ ಈರೀತಿ ಇರಿಸಿಹ ಜನರನು ।
ಮೃತ್ಯುಮಯ ಸಂಸಾರದಿಂದಲೆ ಬೇಗ ನಾನುದ್ಧರಿಪೆನು ॥ ೭ ॥

ನೀನು ಮನ ನೆಲೆಗೊಳಿಸು, ನನ್ನೊಳಗಿರಿಸು ನಿನ್ನಯ ಬುದ್ಧಿಯ ।
ನೀನು ಹೀಗಿರೆ ಪಡೆವೆ ನನ್ನನು, ಇಲ್ಲವಿದರೊಳು ಸಂಶಯ ॥ ೮ ॥

ಅರ್ಜುನ :

ಹೇ ಜನಾರ್ದನ, ಶಾಂತ ಮಾನುಷ ರೂಪನೋಡುತ ನಿನ್ನಯ ।
ನೈಜ ಭಾವವ ಹೊಂದಿ ನನ್ನಯ ಮನವು ತಾಳಿತು ಶಾಂತಿಯ

ಶ್ರೀಕೃಷ್ಣ :

ಕಾಣಲಸದಳವಾದ, ನೀ ಕಂಡಿರುವ, ನನ್ನೀ ರೂಪವ ।
ಕಾಣಲೋಸುಗ ದೇವತೆಗಳೂ ನಿತ್ಯ ಪಡುತಿಹರಿಷ್ಟವ

ನೀನು ಕಂಡಿಹ ನನ್ನ ಇಂತಹ ರೂಪವಾರೂ ಕಾಣರು ।
ದಾನ ತಪ ಯಜ್ಞಗಳ ಗೈದರು ವೇದ ಪಠಿಸಿದೊಡಾದರು

ನನ್ನ ನೀಪರಿ ನೋಡಲೋಸುಗ ಮತ್ತೆ ತತ್ವದಿ ತಿಳಿಯಲು ।
ಇನ್ನು ಒಂದೇ ಭಕ್ತಿಯಿಂದಲೆ ಶಕ್ಯ ನನ್ನೊಳು ಸೇರಲು

ನಾನು ಉತ್ತಮನೆನುವವ, ಕರ್ಮವೆನಗರ್ಪಿಸುವವ ।
ನನ್ನ ಭಕ್ತಿಯ ಗೈವವ, ಸಂಗವನು ತ್ಯಜಿಸಿರುವವ ॥
ಪ್ರಾಣಿ ಮಾತ್ರದಿ ಲೇಶವೂ ದ್ವೇಷವನು ತಾನಿಡದವ ।
ಇನ್ನು ಕುಂತೀ ತನಯನೇ. ನನ್ನನೇ ತಾ ಹೊಂದುವ

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ವಿಶ್ವರೂಪವು ಹತ್ತು ಒಂದಧ್ಯಾಯದಿ ॥

ತಾನು ತೃಪ್ತನು ದೊರಕಿದುದರಲಿ, ನಿಂದೆಸ್ತುತಿ ಸಮ ಬಗೆವನು ।
ಮೌನಿಯೂ ಅನಿಕೇತ ಸ್ಥಿರಮತಿ ಭಕ್ತಪ್ರಿಯ ನೆನಗೆನಿಪನು ॥ ೧೯ ॥

ನನ್ನ ಇಂತಹ ಅಮೃತ ಧರ್ಮವ ಶ್ರದ್ಧೆಯಿಂದಾಚರಿಪರು
ಇನ್ನು ಮತ್ಪರರಾದ ಭಕ್ತರು ನನಗೆ ಬಹು ಪ್ರಿಯರೆನಿಪರು ॥ ೨೦ ॥

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ಭಕ್ತಿಯೋಗವು ಹತ್ತು ಎರಡಧ್ಯಾಯದಿ ॥

ಚಿತ್ತ ಸ್ಥಿರವಾಗಿಡಲು ನೀನಸಮರ್ಥನಾದೊಡೆ ಪಾರ್ಥನೆ ।
ಮತ್ತೆ ನೀ ಅಭ್ಯಾಸಯೋಗದಿ ಹೊಂದಲಿಚ್ಛಿಸು ನನ್ನನೆ

ನನ್ನ ಹೊಂದುವ ಕರ್ಮಗೈ, ಅಭ್ಯಾಸ ಸಾಧಿಸದಿದ್ದರೂ ।
ಘನ್ನ ಸಿದ್ಧಿಯು ಪಡೆವೆ ನೀ ಎನಗಾಗಿ ಕರ್ಮವಗೈದರೂ

ಮತ್ತೆ ನಿನಗಿದು ಶಕ್ಯವಿರದೊಡೆ, ನನ್ನ ಯೋಗದಲಿರುತ ನೀ ।
ಚಿತ್ತ ಬಂಧಿಸಿ ಸರ್ವ ಕರ್ಮದ ಫಲದ ತ್ಯಾಗವಮಾಡು ನೀ

ಜ್ಞಾನ ಮಿಗಿಲಭ್ಯಾಸಕಿಂತಲು, ಜ್ಞಾನಕಿಂತಲು ಧ್ಯಾನವು ।
ಧ್ಯಾನಕಿಂತಲು ಫಲದ ತ್ಯಾಗವು, ತ್ಯಾಗದಿಂದಲೆ ಶಾಂತಿಯು

ಭೂತ ಮಿತ್ರನು, ದ್ವೇಷರಹಿತ, ಕೃಪಾಳು, ನಿರಹಂಕಾರನು ।
ಆತನಿರ್ಮಮ, ಕ್ಷಮಾಶೀಲನು, ದುಃಖ ಸುಖದಿ ಸಮಾನನು

ಆತ್ಮಸಂಯಮಿ, ಯೋಗಿ, ದೃಢನಿಶ್ಚಯಿಯು, ಸಂತತತುಷ್ಟನು ।
ಚಿತ್ತ ಬುದ್ಧಿಗಳೆನಗೆ ನೀಡಿದ ಭಕ್ತ ಪ್ರಿಯನೆನಗೆನಿಪನು

ತಾಪ ಕೊಡನವ ಜಗಕೆ, ಜಗದಿಂದಾಗನವನುದ್ವಿಗ್ನನು ।
ಕೋಪ ಹರ್ಷೋದ್ವೇಗ ಭಯದಿಂ ಮುಕ್ತ. ಪ್ರಿಯನೆನಗೆನಿಪನು

ದಕ್ಷ, ಸಕಲಾರಂಭತ್ಯಾಗಿ, ಪವಿತ್ರ, ಚಿಂತಾರಹಿತನು ।
ಪಕ್ಷಪಾತ ವಿರಹಿತ, ನಿಸ್ಪೃಹಿ ಭಕ್ತಪ್ರಿಯನೆನಗೆನಿಪನು

ದ್ವೇಷಿಸನು, ಹರ್ಷಿಸನು, ಶೋಕಿಸನಶುಭಶುಭಗಳನೆಣಿಸನು ।
ಆಶೆ ಆಕಾಂಕ್ಷೆಗಳ ತೊರೆದಿಹ ಭಕ್ತಪ್ರಿಯ ನೆನಗೆನಿಪನು

ಮಿತ್ರರಿಪು, ಮಾನಾಪಮಾನಗಳಲ್ಲಿ ಸಮನಿರುವಾತನು ।
ಶೀತ, ಶಕೆ, ಸುಖ ದುಃಖದಲಿ ಸಮನಿಹನು ಸಂಗವಿರಕ್ತನು

ಪತ್ನಿ-ಪುತ್ರ-ಗೃಹಾದಿಯಲಿ ನಿರ್ಮಮತೆ, ನಿಃಸಂಗತ್ವವು ।
ಮತ್ತೆ ಇಷ್ಟಾನಿಷ್ಟದೊರೆತರು, ನಿತ್ಯದಲಿ ಸಮಭಾವವು ॥ ೯ ॥

ನನ್ನೊಳೊಂದೇ ನಿಷ್ಠೆಯಲಿ ಇರಿಸಿರುವ ನಿಶ್ಚಲ ಭಕ್ತಿಯು ।
ಇನ್ನು ಏಕಾಂತದಲಿ ವಾಸವು, ಜನ ಸಮೂಹದೊಳರುಚಿಯು ॥ ೧೦ ॥

ತತ್ವಜ್ಞಾನ ವಿಚಾರ, ನಿತ್ಯಾಧ್ಯಾತ್ಮಜ್ಞಾನದ ಮನನವು ।
ಮತ್ತಿದೆಲ್ಲವು ಜ್ಞಾನ; ಮಿಕ್ಕಿದುದೆಲ್ಲವೂ ಅಜ್ಞಾನವು ॥ ೧೧ ॥

ಅರಿದೊಡಾವುದ ಜೀವ ಮುಕ್ತನೊ, ಅಂಥಜ್ಞೇಯವಪೇಳ್ವೆನು ।
ಪರಮಬ್ರಹ್ಮ ಅನಾದಿ, ಅದು ತಾ ಸತ್ ಅಸತ್ತುಗಳೆನಿಸದು ॥ ೧೨ ॥

ಎಲ್ಲೆಡೆಗೆ ಕೈಕಾಲು ಮುಖಗಳು, ಅದಕೆ ತಲೆ ಕಿವಿ ಕಣ್ಗಳು ।
ಎಲ್ಲದಿಶೆಯಲಿ ಅದುವೆ ವ್ಯಾಪಿಸಿ ನಿಂತಿಹುದು ಈ ಜಗದೊಳು ॥ ೧೩ ॥

ಸರ್ವ ಇಂದ್ರಿಯ ಗುಣವ ಬೆಳಗಿಸಿ ಸರ್ವ ಇಂದ್ರಿಯರಹಿತವು ।
ಸರ್ವವನು ಧರಿಸಿಯು ಅಲಿಪ್ತವು, ನಿರ್ಗುಣವು ಗುಣಭೋಕ್ತೃವು ॥೧೪॥

ಚರವುಅಚರವದಾಗಿಹುದು, ಭೂತಂಗಳೊಳಹೊರಗಿರುವುದು ।
ಇರುವುದದು ಸನಿಯದಲಿ ದೂರದಿ, ಸೂಕ್ಷ್ಮ, ತಿಳಿಯಲಸಾಧ್ಯವು ॥ ೧೫ ॥

ಭೂತರಲ್ಲಿ ವಿಭಕ್ತವಾಗಿಯೂ, ತಾನಿಹುದು ಅವಿಭಕ್ತವು ।
ಭೂತಪೋಷಕ, ಸೃಷ್ಟಿಲಯಗಳ ಕಾರಣವು ಆ ಜ್ಞೇಯವು ॥ ೧೬ ॥

ತಾನೆ ಜ್ಯೋತಿಗಳಲ್ಲಿ ಜ್ಯೋತಿಯು, ತಮಸಿನಾಚೆಗೆ ಇರುವುದು ।
ಜ್ಞಾನ, ಜ್ಞೇಯವು ಜ್ಞಾನಗಮ್ಯವು ಸರ್ವ ಹೃದಯದೊಳಿರುವುದು
॥ ೧೭ ॥

ಕ್ಷೇತ್ರ ಹಾಗೂ ಜ್ಞಾನ ಜ್ಞೇಯಗಳಿಂತು ಸ್ವಲ್ಪದಿ ಒರೆದೆನು ।
ಮತ್ತೆ ಇದನರಿತಂಥ ನನ್ನಯ ಭಕ್ತ ನನ್ನನು ಪಡೆವನು ॥ ೧೮ ॥

ಅಧ್ಯಾಯ ೧೩.

ಕ್ಷೇತ್ರ ಕ್ಷೇತ್ರಜ್ಞ ವಿಭಾಗಯೋಗ

ಶ್ರೀಕೃಷ್ಣ:

ಕ್ಷೇತ್ರವೆಂಬುವ ಹೆಸರು, ಕುಂತೀತನಯನೇ, ಈತನುವಿಗೆ ।
ಮತ್ತೆ ಜ್ಞಾನಿಗಳೆಂಬುವರು, ಕ್ಷೇತ್ರಜ್ಞನೆಂದಿದನರಿತಗೆ

ಕ್ಷೇತ್ರವೆಲ್ಲದರೊಳಗೆ ತಿಳಿ ಕ್ಷೇತ್ರಜ್ಞ ನಾನೇ ಭಾರತ ।
ಕ್ಷೇತ್ರ ಕ್ಷೇತ್ರಜ್ಞಗಳ ಜ್ಞಾನವೆ, ಜ್ಞಾನವೆಂದೆನ್ನಭಿಮತ

ಕ್ಷೇತ್ರವಾವುದು, ಹೇಗೆಬಂದಿತು, ಆವರೂಪ ವಿಕಾರವು ।
ಮತ್ತೆ ಕೇಳ್ ಸಂಗ್ರಹದಿ ಆರವ, ಎಂಥದವನ ಪ್ರಭಾವವು

ಇದನು ಋಷಿಗಳು ನಿಶ್ಚಯಾತ್ಮಕ ಬ್ರಹ್ಮಸೂತ್ರದ ಮಂತ್ರದಿ ।
ವಿಧವಿಧದ ಛಂದಸ್ಸಿನಲಿ ಪಾಡಿಹರು ವಿವಿಧ ಪ್ರಕಾರದಿ

ಪಂಚಮಹ ಭೂತಗಳು, ಬುದ್ಧಿಯು, ಅಹಂಕಾರವು, ಪ್ರಕೃತಿಯ
ಪಂಚ–ಪಂಚೇಂದ್ರಿಯಗಳು, ಮನ, ಪಂಚ–ಇಂದ್ರಿಯ ವಿಷಯ

ದ್ವೇಷ, ಇಚ್ಛೆಯು, ಧೃತಿಯು, ದೇಹವು, ಚೇತನವು, ಸುಖ, ದು
ಈ ಸಮುಚ್ಚಯವೆಲ್ಲವೂ 'ಸವಿಕಾರ ಕ್ಷೇತ್ರವು' ಎನಿಪುವು

ಮಾನ-ದಂಭಗಳಿಲ್ಲದಿರುವುದು, ಕ್ಷಮೆಯು, ಸರಳತೆ, ಶುದ್ಧಿಯು
ಇನ್ನಹಿಂಸೆಯು, ಆತ್ಮನಿಗ್ರಹ, ಸ್ಥಿರತೆ, ಗುರು ಶುಶ್ರೂಷೆಯು

ಮತ್ತೆ ನಿರಹಂಕಾರ, ಇಂದ್ರಿಯ ವಿಷಯದಲಿ ವೈರಾಗ್ಯವು ।
ಮೃತ್ಯು-ಜನ್ಮದ, ಜರೆಯು-ರೋಗದ ದುಃಖದೋಷ ವಿಚಾರವು

ಪ್ರಕೃತಿ ಪುರುಷಗಳೆರಡು ಇಹವು ಅನಾದಿ ಎಂಬುದನರಿತಿರು ।
ಪ್ರಕೃತಿ ಜನ್ಯವು ಗುಣ ವಿಕಾರಗಳೆಂಬುದಾದರು ತಿಳಿದಿರು

ಪ್ರಕೃತಿಯದು ತಾ ಕಾರ್ಯ ಕಾರಣಗಳಿಗೆ ಕಾರಣವೆನುವರು ।
ಸುಖದ ದುಃಖದ ಭೋಗಕೆಲ್ಲಕು ಪುರುಷ ಕಾರಣವೆನುವರು

ಇನ್ನು ಪ್ರಕೃತಿಯೊಳಿದ್ದು ಪ್ರಕೃತಿಜ ಗುಣವ ಭುಜಿಪನು ಪುರು
ಪುಣ್ಯ ಪಾಪದ ಯೋನಿ ಜನ್ಮಕೆ ಮೂಲ, ಗುಣಗಳ ಸಂಗ ತಾ

ಈ ಶರೀರದೊಳಿದ್ದು ನೋಳ್ಪನು, ಪರಮ ಪುರುಷ. ಮಹೇಶನ
ಪೋಷಿಪನು, ಅನುಮೋದಿಪನು, ಪರಮಾತ್ಮ ತಾನೆಂದಿನಿಪನು

ಆವನರಿವನೊ ಇಂಥ ಪುರುಷನ ಮತ್ತೆ ಗುಣ ಸಹ ಪ್ರಕೃತಿಯ
ಆವ ಬಗೆಯೊಳಗಾತ ನಡೆದರು, ಮತ್ತೆ ಹೊಂದನು ಜನ್ಮವ

ತಮ್ಮೊಳಗೆ ಕಾಣುವರು ಆತ್ಮನ ಧ್ಯಾನ ಮಾರ್ಗದಿ ಕೆಲವರು ।
ಕರ್ಮಮಾರ್ಗದೊಳಿನ್ನು ಅನ್ಯರು, ಜ್ಞಾನಮಾರ್ಗದಿ ಹಲವರು

ಪಥವನಿಂಥದನರಿಯದಲೆ ಪರರಿಂದ ಕೇಳುವರಿತರರು ।
ಶ್ರುತಿಪರಾಯಣರಿವರು ಕೂಡಾ, ಭಜಿಸಿ ಮರಣವ ಗೆಲುವರು

ಪಾರ್ಥ, ಸ್ಥಾವರ ಜಂಗಮಾತ್ಮಕ ವಸ್ತು ಪುಟ್ಟಹುದಾವುದೋ ।
ಕ್ಷೇತ್ರ ಕ್ಷೇತ್ರಜ್ಞಗಳ ಮಿಲನದಿ ಪುಟ್ಟತದು ಎಂದರಿಯೆಲೊ

ಕ್ಷರದೊಳಕ್ಷರನಾಗಿ, ಸಮತಾನಾಗಿ ಜೀವಿಗಳೊಳಗೆಯು ।
ಇರುವನಾ ಪರಮಾತ್ಮ ಎಂದರಿವಾತನೇ ನಿಜ ಜ್ಞಾನಿಯು

ಮತ್ತೆ ಈಶ್ವರನೆಲ್ಲಿಯೂ ಸಮನಾಗಿ ಇರುತಿಹನೆನುವವ ।
ಆತ್ಮ ಘಾತವ ಮಾಡಿಕೊಳ್ಳದೆ ಪರಮಗತಿಯನು ಪಡೆಯುವ

ತ್ಮನಿಹನು ಅಕರ್ತ, ಪ್ರಕೃತಿಯ ಬಲದಿ ಕರ್ಮಗಳೆಲ್ಲವು।
॥ ಅತ್ತೆ ನಡೆಯುತಲಿಹವು ಎಲ್ಲಾ ಬಗೆಯೊಳೆಂಬನೆ ಜ್ಞಾನಿಯು ॥ ೨೯ ॥

ರುವ ಜೀವರ ಪೃಥಗ್ಭಾವಗಳೊಂದೆಡೆಗೆ ಕಾಂಬಾತನು।
॥ ರಡಿತಿದರಿಂದೆಲ್ಲವೆಂದರಿವವನು ಬ್ರಹ್ಮನ ಪಡೆವನು ॥ ೩೦ ॥

ನಾಶರಹಿತ ಅನಾದಿ, ನಿರ್ಗುಣ, ಅರ್ಜುನನೆ ಪರಮಾತ್ಮನು।
॥ ಹ ಶರೀರದೊಳಿದ್ದರೂ ತಾನೇನು ಮಾಡನಲಿಪ್ತನು ॥ ೩೧ ॥

ಎಂತಲಿಪ್ತವೊ ಎಲ್ಲೆಡೆಗೆ ವ್ಯಾಪಿಸಿದ ಸೂಕ್ಷ್ಮಾಕಾಶವು।
॥ ಅಂತೆ, ಎಲ್ಲಾ ದೇಹದೊಳಗಿಹ ಆತ್ಮವೂ ನಿರ್ಲಿಪ್ತವು ॥ ೩೨ ॥

ಒಬ್ಬ ರವಿ ತಾನೆಂತು ಬೆಳಗುವ, ಅರ್ಜುನನೆ ಜಗವೆಲ್ಲವ।
॥ ಒಬ್ಬನೇ ಕ್ಷೇತ್ರಜ್ಞ, ಅಂತೆ, ಸಮಸ್ತ ಕ್ಷೇತ್ರವ ಬೆಳಗುವ ॥ ೩೩ ॥

ಕ್ಷೇತ್ರ ಕ್ಷೇತ್ರಜ್ಞರಲಿ ಭೇದವ, ಭೂತಪ್ರಕೃತಿಯ ಮೋಕ್ಷವ।
॥ ಮತ್ತೆ ಜ್ಞಾನದ ದೃಷ್ಟಿಯಿಂದರಿತವನು, ಬ್ರಹ್ಮನ ಹೊಂದುವ ॥ ೩೪ ॥

ಶ್ರೀ ಕೃಷ್ಣಾರ್ಪಣವು.

॥ ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ।
ಈಗ ಮುಗಿಯಿತು ಕ್ಷೇತ್ರಕ್ಷೇತ್ರಜ್ಞವದು ಹತ್ತೊಮೂರಲಿ ॥

ಅಧ್ಯಾಯ ೧೪.

ಗುಣತ್ರಯ ವಿಭಾಗಯೋಗ

ಶ್ರೀಕೃಷ್ಣ :

ಜ್ಞಾನದಲಿ ಅತಿ ಶ್ರೇಷ್ಠ ಜ್ಞಾನವ ಪೇಳುವೆನು ಮತ್ತೊಮ್ಮೆ ನಾ ।
ಜ್ಞಾನಿ ಪಡೆದಿಹನಿಲ್ಲಿಯೇ ಘನಸಿದ್ಧಿ ಅರಿಯುತ ಅದನು ತಾ

ಹೊಂದಿದವರೀ ಜ್ಞಾನವನು ಸಾರೂಪ್ಯಪದವಿಯ ಪಡೆವರು ।
ಹೊಂದರೆಂದಿಗು ವ್ಯಥೆಯ ಪ್ರಳಯದಿ, ಸೃಷ್ಟಿಕಾಲದಿ ಪುಟ್ಟರು

ನನ್ನ ಯೋನಿಯು ಪ್ರಕೃತಿ, ಅದರೊಳಗಿರಿಸುವೆನು ನಾ ಗರ್ಭವ ।
ಇನ್ನು ಅದರಿಂದೆಲ್ಲ ಜೀವರು, ನರನೆ, ತಳೆವರು ಜನ್ಮವ

ಸಕಲ ಯೋನಿಗಳಲ್ಲಿ ಪುಟ್ಟುವ ನಿಖಿಲ ತನುಗಳಿಗರ್ಜುನಾ ।
ಪ್ರಕೃತಿ ದೇವಿಯೆ ತಾಯಿ, ಗರ್ಭಾದಾನ ಮಾಡುವ ತಂದೆ ನಾ

ಸತ್ವರಜತಮವೆಂಬ ಗುಣಗಳು ಪ್ರಕೃತಿಜನ್ಯ ಧನಂಜಯ ।
ಮತ್ತೆ ಬಂಧಿಸಿ ಇರಿಸುವುವು ದೇಹದಲಿ ಅವ್ಯಯ ದೇಹಿಯ

ಸತ್ವವದರೊಳು ನಿರ್ವಿಕಾರಿಯು, ನಿರ್ಮಲತ್ವದಿ ಹೊಳೆವುದು ।
ಮತ್ತೆ ಅನಘನೆ, ಜ್ಞಾನ ಸುಖಸಂಗದಲಿ ಬಂಧಿಸಿ ಇಡುವುದು

ರಜವು ರಾಗಾತ್ಮಕವು ತಿಳಿ, ಅದು ಸಂಗತೃಷೆಗಳ ಮೂಲವು ।
ವಿಜಯನೇ, ಬಂಧಿತನು ಆಗುವ, ಕರ್ಮಸಂಗದಿ ದೇಹಿಯು

ತಿಳಿಯೊ, ತಮ ಅಜ್ಞಾನಜನ್ಯವು, ಜೀವರೆಲ್ಲರ ಮೋಹದಿ ।
ಸಿಲುಕಿಸುತ ಬಿಗಿಯುವುದು ನಿದ್ರಾಲಸ್ಯ ಹಾಗು ಪ್ರಮಾದದಿ

ಸತ್ವ ತೊಡಕಿಸುತಿಹುದು ಸುಖದಲಿ, ನರನೆ, ರಜವದು ಕರ್ಮದಿ ।
ಮತ್ತೆ ತಮಜ್ಞಾನವನು ಮುಸುಗುತ, ತೊಡಕಿಸುವುದು ಪ್ರಮಾದದಿ
॥ ೯ ॥

ಸತ್ವ ಬೆಳೆವುದು ಅದುಮಿ ರಜತಮಗುಣವ, ಅಂತೆಯೆ ರಜವು ತಾ ।
ಸತ್ವತಮಗಳನದುಮಿ ಬೆಳೆವುದು ; ತಮವು, ರಜಸತ್ವಗಳ ತಾ ॥ ೧೦ ॥

ಈ ಶರೀರದ ಎಲ್ಲ ದ್ವಾರದೊಳುದಿಸೆ ಜ್ಞಾನ, ಪ್ರಕಾಶವು ।
ಆ ಸಮಯದಲಿ ಸತ್ವಗುಣ ಬೆಳೆದಿರುವುದೆಂಬುದನರಿವುದು ॥ ೧೧ ॥

ರಜವು ವೃದ್ಧಿಸಲಾಗ ಲೋಭಪ್ರವೃತ್ತಿ, ಕರ್ಮಾರಂಭವು ।
ವಿಜಯನೇ, ಉದ್ಭವಿಸುತಿರುವುವು, ತೃಷ್ಣೆ ಮತ್ತೆ ಅಶಾಂತಿಯು ॥ ೧೨ ॥

ಕತ್ತಲೆಯು ಮತ್ತಪ್ರವೃತ್ತಿಯು, ಮೋಹ ಹಾಗು ಪ್ರಮಾದವು ।
ಮತ್ತೆ ಕುರುನಂದನನೆ, ತಮದಭಿವೃದ್ಧಿಕಾಲಕೆ ಜನಿಪುವು ॥ ೧೩ ॥

ಭಾರತನೆ, ನರ ಮರಣಹೊಂದಲು ಸತ್ವಗುಣದುತ್ಕರ್ಷದಿ ।
ಸೇರುವನು ತಾ, ಪರಮಜ್ಞಾನಿಯ ವಿಮಲವಾಗಿಹಲೋಕದಿ ॥ ೧೪ ॥

ರಜದ ಪ್ರಾಬಲ್ಯದಲಿ ಮಡಿದವ ಕರ್ಮ ಸಂಗಿಯೊಳುದಿಸುವ ।
ವಿಜಯನೇ, ತಮದಲ್ಲಿ ಮಡಿದವ ಮೂಢಯೋನಿಯೊಳುದಿಸುವ ॥ ೧೫ ॥

ಸಾತ್ವಿಕವು ಸತ್ಕರ್ಮ ಫಲವದು, ಇರುತಿಹುದು ನಿರ್ದೋಷವು ।
ಮತ್ತೆ ರಾಜಸ ಫಲವು ದುಃಖವು, ತಮದ ಫಲ ಅಜ್ಞಾನವು ॥ ೧೬ ॥

ಸತ್ವದಿಂದುದಿಸುವುದು ಜ್ಞಾನವು, ರಜದಿ ಬರುವುದು ಲೋಭವು ।
ಮತ್ತೆ ತಮದಿಂದುದಿಸುವುವು ಅಜ್ಞಾನ, ಮೋಹ, ಪ್ರಮಾದವು ॥ ೧೭ ॥

ಸಾತ್ವಿಕನಿಗಿಹುದೂರ್ಧ್ವಗತಿ, ರಾಜಸಗೆ ಮಧ್ಯಮ ಲೋಕವು ।
ಮತ್ತಧೋಗತಿ, ಹೀನ ವೃತ್ತಿಯ ತಾಮಸನಿಗದು ಪ್ರಾಪ್ತವು ॥ ೧೮ ॥

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಕೊನೆ ಗುಣತ್ರಯ ವಿಭಾಗವು ಚತುರ್ದಶ ಅಧ್ಯಾಯದಿ ॥

ಗುಣಗಳನು ಉಳಿದನ್ಯ ಕರ್ತೃವು ಇಲ್ಲವೆಂಬುವ ಜಾಣನು ।
ಗುಣಗಳಾಚೆಗೆ ಇರುವ ವಸ್ತುವನರಿತು ಹೊಂದುವ ನನ್ನನು

ನರನು ದೇಹದಿ ಉದಿಸಿರುವ ಈ ಮೂರು ಗುಣಗಳದಾಟಿ ತಾ
ಮರಣ ಜನ್ಮ ಜರಾದಿ ದುಃಖವ ನೀಗಿ ಮೋಕ್ಷವ ಪಡೆವತಾ

ಅರ್ಜುನ :

ಮೂರು ಗುಣಗಳ ಮೀರಿದಾತನ ಪ್ರಭುವೆ, ಲಕ್ಷಣವಾವುದು ?
ಮೂರು ಗುಣಗಳನೆಂತು ದಾಟುವ, ಅವನ ನಡತೆಯು ಆವುದ

ಶ್ರೀಕೃಷ್ಣ :

ಜ್ಞಾನ ಹಾಗು ಪ್ರವೃತ್ತಿ, ಮೋಹವು, ಪಾಂಡವನೆ, ದೊರೆತಾಗ
ತಾನುದ್ವೇಷಿಸ ನವುಗಳನು, ಇಚ್ಛಿಸನು ಅವು ಸಿಗದಾಗಲೂ

ಗುಣಗಳಿಂದಲಿ ಕದಲದಲೆ ತಾ ಉದಾಸೀನನೊಲಿರುವನು ।
ಗುಣಗಳೇ ವರ್ತಿಸುವುವೆನುವವ. ಚಲಿಸದಲೆ ಸ್ಥಿರವಿರುವನು

ತನ್ನ ಸ್ತುತಿನಿಂದಾ ಪ್ರಿಯಾಪ್ರಿಯ ದುಃಖ ಸುಖದಿ ಸಮಾನನು
ಚಿನ್ನ ಕಲ್ಮಣ್ಣುಗಳು ಸಮ ತಿಳಿವವನು ಸ್ವಸ್ಥನು, ಧೀರನು

ಶತ್ರು ಮಿತ್ರರ ಪಕ್ಷದಲಿ ಮಾನಾಪಮಾನ ಸಮಾನನು ।
ಮತ್ತೆ ಸರ್ವಾರಂಭ ತ್ಯಜಿಪನು, ಗುಣಾತೀತನು ಎನಿಪನು

ಎನ್ನನವ್ಯಭಿಚಾರ ಭಕ್ತಿಯ ಮಾರ್ಗದಿಂ ಭಜಿಪಾತನು ।
ಇನ್ನು ಈ ಗುಣಗಳನು ದಾಟುತ ಮುಕ್ತಿಗಾಗುವ ಯೋಗ್ಯನು

ಇನ್ನು ಅವ್ಯಯ ಅಮೃತ ಬ್ರಹ್ಮದ ಮತ್ತೆ ಶಾಶ್ವತ ಧರ್ಮದ
ಘನ್ನ ಅಂತಿಮ ಸ್ಥಾನ ನಾನಿಹೆ ಉತ್ತಮೋತ್ತಮ ಸೌಖ್ಯದ

ಶ್ರೀ ಕೃಷ್ಣಾರ್ಪಣವು

ಅಧ್ಯಾಯ ೧೫.

ಪುರುಷೋತ್ತಮಯೋಗ

ಶ್ರೀಕೃಷ್ಣ :

ಕೆಳಗೆ ಕೊಂಬೆಯು ಬೇರು ಮೇಲಿಹ ಅವ್ಯಯದ ಅಶ್ವತ್ಥವು ।
ಎಲೆಯು ವೇದಗಳದಕೆ, ಆದನರಿತವನೆ ವೇದಜ್ಞಾನಿಯು ॥

ನರನೆ ಗುಣದಿ ಬೆಳೆದ ಅಂಕುರಿತ ವಿಷಯಶಾಖೆಯು ।
ಹರಡಿಕೊಂಡು ಇರುವುವು ಕೆಳಗೆ ಮತ್ತೆ ಮೇಲೆಯು ॥
ಕರುಮ ರೂಪಹೊಂದುವ ಆದರ ಬೇರ್ಗಳೆಲ್ಲವೂ ।
ಭರದಿ ಬಂದು ಸೇರಿವೆ ಮನುಜ ಲೋಕದಲ್ಲಿಯೂ ॥

ಇದರ ಈ ಸ್ವರೂಪವು ಇಹದಿ ಲಭ್ಯವಿಲ್ಲವು ।
ಆದಕೆ ಅಂತ ಆದಿಯು ಆಧಾರವಿಲ್ಲವು ॥
ದೃಢದಿ ಬೇರೂರಿದೀ ಅಶ್ವತ್ಥವನ್ನು ನೀ ।
ಕಡಿದು ಹಾಕಿ ದೃಢದಲಿ ನಿಃಸಂಗ ಶಸ್ತ್ರದಿ ॥

"ನಂತರದಿ ಪುರಾತನ ಪ್ರವೃತ್ತಿಯನ್ನು ಹರಡಿಹ ।
ಅಂಥ ಆದಿಪುರುಷನ ನಾನು ಪಡೆವೆನೆನ್ನುತ" ॥
ಎಂಥ ಪದವಿ ಪಡೆದರೆ ನರನು ತಿರುಗಿಬಾರನೊ ।
ಅಂಥ ಪದವಿಯನ್ನು ನೀ ಹುಡುಕಿಕೊಳ್ಳಬೇಕೆಲೊ ॥

ಮಾನ ಮೋಹ ತ್ಯಜಿಸಿ ಆಸಕ್ತಿ ದೋಷ ಗೆಲಿದವ ।
ಮಗ್ನನಧ್ಯಾತ್ಮದಿ, ಕಾಮಗಳನು ತೊರೆದವ ॥
ಇನ್ನು ಸುಖವು ದುಃಖವು ಎಂಬ ದ್ವಂದ್ವವಳಿದವ ।
ಘನ್ನವಾದ ಅವ್ಯಯ ಪದವ ಜ್ಞಾನಿ ಹೊಂದುವ ॥

ಸ್ಥಾನವಾವುದ ಹೊಂದಿ ಮರಳರೊ ಆದುವೆ ಮಮಘನಧಾಮವು ।
ಭಾನುಪಾವಕ ಶಶಿಗಳಾರೂ ಅದನು ಬೆಳಗಿಸಲಾರರು ॥ ೬ ॥

ನನ್ನದಾದ ಸನಾತನಾಂಶದಿ ದೇಹದೊಳಗಿಹ ಜೀವನು ।
ಇನ್ನು ಪ್ರಕೃತಿಯಲಿರುವ ಮನಸಹ ಆರು ಇಂದ್ರಿಯ ಸೆಳೆವನು ॥ ೭ ॥

ಕಾಯ ಧರಿಸುವ, ತ್ಯಜಿಪ ಸಮಯದಿ ಇವುಗಳನು ಜೀವಾತ್ಮನು ।
ವಾಯು ಗಂಧವ ಸ್ಥಾನದಿಂ ಸೆಳೆದೊಯ್ವ ತೆರದಲಿ ಒಯ್ವನು ॥ ೮ ॥

ಕಣ್ಣು, ಕಿವಿ, ತ್ವಚ ಮೂಗು ನಾಲಗೆಗಳನು ಹಾಗೂ ಮನವನು ।
ಇನ್ನು ಆಶ್ರಯಿಸುತ್ತ ಆತನು ವಿಷಯಭೋಗವನುಣುವನು ॥ ೯ ॥

ತೊಲಗಿ ಪೋಪನ, ಒಳಗಿಹನ, ಗುಣದಿಂದ ವಿಷಯವನುಣುವನ ।
ತಿಳಿಯರಜ್ಞರು; ಜ್ಞಾನದೃಷ್ಟಿಯ ಜನರು ತಿಳಿಯುವರಾತನ ॥ ೧೦ ॥

ಯತ್ನಿಸುವ ಯೋಗಿಗಳು ತಮ್ಮೊಳಗಿರುವ ಅವನನು ಕಾಂಬರು ।
ಯತ್ನಿಸಿದರೂ ಕಾಣರಾ ಸಂಸ್ಕಾರವಿರಹಿತ ಮೂಢರು ॥ ೧೧ ॥

ಆವ ಸೂರ್ಯನ ತೇಜ ಈ ಜಗವೆಲ್ಲ ಬೆಳಗುತಲಿರುವುದು ।
ಆವ ತೇಜವು ಅಗ್ನಿ ಚಂದ್ರರೊಳಿಹುದೊ, ತಿಳಿ ಅದು ನನ್ನದು ॥ ೧೨ ॥

ಸೇರಿ ಭೂಮಿಯ ನನ್ನ ತೇಜದಿ ಭೂತರನು ನಾ ಧರಿಪೆನು ।
ನಾ ರಸಾತ್ಮಕ ಸೋಮನಾಗುತ ಓಷಧಿಯ ಪೋಷಿಸುವೆನು ॥ ೧೩ ॥

ನಾನು ವೈಶ್ವಾನರನು ಆಗುತ ಹೊಂದಿ ಪ್ರಾಣಿಯ ದೇಹವ ।
ಪ್ರಾಣ ಹಾಗು ಅಪಾನ ಕೂಡಿಸಿ ಪಚಿಪೆ ನಾಲ್ಬಗೆ ಅನ್ನವ ॥ ೧೪ ॥

ನಾನು ಎಲ್ಲರೆದೆಯಲಿ ವಾಸವಾಗಿ ಇರುವೆನು ।
ಜ್ಞಾನ, ಸ್ಮೃತಿ, ಪರಿಭ್ರಮಗಳಿಗೆ ನಾನೆ ಮೂಲನು ॥
ನಾನು ಸಕಲ ವೇದದಿಂದರಿತುಕೊಳ್ಳಲರ್ಹನು ।
ನಾನೆ ವೇದಾಂತದ ಕರ್ತ, ವೇದವೇತ್ತನು ॥ ೧೫ ॥

ಕ್ಷರರು ಅಕ್ಷರರೆಂದು ಈ ಲೋಕದಲಿ ಈರ್ವರು ಪುರುಷರು ।
ಕ್ಷರರು ಭೂತ ಸಮಸ್ತರೂ. ಕೂಟಸ್ಥಗಕ್ಷರವೆನುವರು ॥ ೧೬

ಬೇರೆ ಉತ್ತಮ ಪುರುಷ ನಿನ್ನಿಹ, ಎನಿಪನವ ಪರಮಾತ್ಮನು ।
ಮೂರು ಲೋಕವ ವ್ಯಾಪಿಸುತ ಪೋಷಿಪನು ಅವ್ಯಯ ಈಶನು ॥ ೧೭

ನಾನತೀತನು ಕ್ಷರಕೆ, ಅಕ್ಷರಕಿಂತ ಉತ್ತಮನಿರುವೆನು ।
ನಾನು ವೇದದಿ–ಜಗದಿ, ಪುರುಷೋತ್ತಮನು ಎಂದು ಪ್ರಸಿದ್ಧನು ॥ ೧೮

ನರನೆ, ಮೋಹವ ತ್ಯಜಿಸಿ, ಪುರುಷೋತ್ತಮನು ನಾನೆಂದೆನ್ನನು ।
ಅರಿಯುವವ ಸರ್ವಜ್ಞ ; ನನ್ನನು ಸರ್ವಭಾವದಿ ಭಜಿಪನು ॥ ೧೯

ಒರೆದೆ ನಾನೀ ಗೂಢ ದೊಳಗತಿ ಗೂಢ ಶಾಸ್ತ್ರವನನಘನೆ ।
ಅರಿತು ನರನಿದ, ಜ್ಞಾನಿಯಾಗಿ ಕೃತಾರ್ಥನಾಗುವ ಪಾರ್ಥನೆ ॥ ೨೦

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಕೊನೆ ಪುರುಷೋತ್ತಮವು, ಹದಿನೈದನೆಯ ಅಧ್ಯಾಯದಿ ॥

ಅಧ್ಯಾಯ ೧೬.

ದೈವಾಸುರಸಂಪದ್ವಿಭಾಗಯೋಗ

ಶ್ರೀಕೃಷ್ಣ :

ಜ್ಞಾನಯೋಗದಿ ಏಕನಿಷ್ಠೆಯು, ಚಿತ್ತಶುದ್ಧಿಯು, ಅಭಯವು ।
ದಾನ, ದಮ, ಸ್ವಾಧ್ಯಾಯ, ಯಜ್ಞವು, ತಪವು, ಸರಲಸ್ವಭಾವವು
॥ ೧ ॥

ಸತ್ಯ, ತ್ಯಾಗ, ಅಹಿಂಸೆ, ಶಾಂತಿ, ಅಪೈಶುನವು, ಅಕ್ರೋಧವು ।
ಭೂತದಯೆಯು, ಅಲೋಲುಪತ್ವವು, ಮೃದುತೆ, ಲಜ್ಜೆಯು,
ಸ್ಥಿರತೆಯು ॥ ೨ ॥

ಮತ್ತೆ ಶುಚಿ, ಅದ್ರೋಹ, ಧೃತಿ, ಕ್ಷಮೆ, ತೇಜ, ನಿರಹಂಕಾರವು ।
ಪಾರ್ಥ, ದೈವೀಸಂಪದದಿ ಪುಟ್ಟಿಹಗೆ ಇವುಗಳು ಬರುವುವು ॥ ೩ ॥

ಪಾರ್ಥನೇ, ಆಸುರೀಸಂಪದ ಹೊಂದಿದವಗಭಿಮಾನವು ।
ಮತ್ತೆ ದರ್ಪವು, ದಂಭ, ಕ್ರೋಧ, ಕಠೋರತೆಯು, ಅಜ್ಞಾನವು ॥ ೪ ॥

ದೈವಿಸಂಪದ ಮೋಕ್ಷದಾಯಕ, ಆಸುರಿಯು ಬಂಧಕವೆಲೊ ।
ದೈವಿಸಂಪದ ಪಡೆದು ಪುಟ್ಟಿಹೆ ನೀನು, ಶೋಕಿಸಬೇಡೆಲೊ ॥ ೫ ॥

ಎರಡು ಬಗೆ ಭೂತರ ಸ್ವಭಾವವು ಜಗದಿ, ದೈವೀ, ಆಸುರೀ, ।
ಒರೆದೆ ದೈವೀಗುಣವ ವಿವರದಿ ಆಸುರೀ ಗುಣ ಕೇಳು ನೀ ॥ ೬ ॥

ಅರಿಯರಸುರರು ಆ ಪ್ರವೃತ್ತಿ, ನಿವೃತ್ತಿಗಳ ತಾವೆಂದಿಗೂ ।
ಇರವು ಶ್ರೇಷ್ಠಾಚಾರ, ಸತ್ಯ, ಶುಚಿತ್ವ, ಅವರೊಳು ಎಂದಿಗೂ ॥ ೭ ॥

ಹೊಂದಿ ದರ್ಪವ, ಅಹಂಕಾರವ, ಕಾಮ, ಕ್ರೋಧವ, ಬಲವನು।
ನಿಂದಿಸುತ ದ್ವೇಷಿಪರು ತಮ್ಮೊಳು, ಪರರೊಳಿರುತಿಹ ಎನ್ನನು ॥ ೧೮ ॥

ದ್ವೇಷಿಸುವ ಆ ಕ್ರೂರ ಪಾಪಿ, ನರಾಧಮರನೀ ಜಗದೊಳು।
ಆಸುರೀ ಯೋನಿಗಳಲಿಯೆ ಹಾಕುವೆನು, ನಾನಾವಾಗಲೂ ॥ ೧೯ ॥

ಜನುಮ ಜನುಮ ದೊಳಾಸುರೀ ಯೋನಿಯನು ಹೊಂದಿದ ಮೂಢರು।
ಕೊನೆಗೆ ನನ್ನನು ಕಾಣಲಾರದೆ ಹೀನಗತಿಯನು ಪಡೆವರು ॥ ೨೦ ॥

ಮೂರು ವಿಧ ದ್ವಾರಗಳು ನರಕಕೆ, ಕಾಮ, ಕ್ರೋಧವು, ಲೋಭವು।
ಮೂರನೂ ನೀ ತ್ಯಜಿಸು, ಇವುಗಳು ಆತ್ಮಘಾತಕವಿರುವುವು ॥ ೨೧ ॥

ಮೂರು ನರಕದ ದ್ವಾರದಿಂದಲಿ ದೂರ ಇರುತಿಹ ಪುರುಷನು।
ಭಾರತನೆ, ಅವ ತನ್ನಶ್ರೇಯುವ ಹೊಂದಿ ಪರಗತಿ ಪಡೆವನು ॥ ೨೨ ॥

ಶಾಸ್ತ್ರವಿಧಿಯನು ತ್ಯಜಿಸಿ, ಸ್ವಚ್ಛಂದದಲಿ ಆಚರಿಪಾತನು।
ಉತ್ತಮೋತ್ತಮ ಗತಿಯ ಹೊಂದನು, ಸಿದ್ಧಿ ಸುಖಗಳ ಪಡೆಯನು ॥ ೨೩ ॥

ಶಾಸ್ತ್ರ ನಿನಗೆ ಪ್ರಮಾಣ, ಕಾರ್ಯಾ ಕಾರ್ಯ ನಿರ್ಣಯದೊಳಗೆಲೊ।
ಶಾಸ್ತ್ರ ವಿಧಿಯರಿತಿಲ್ಲಿ ಕರ್ಮವ ಗೈಯಲರ್ಹನು ನೀನೆಲೊ ॥ ೨೪ ॥

ಶ್ರೀ ಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ।
ಈಗ ದೈವಾಸುರೀ ಸಂಪದ ಮುಗಿದಿಹುದು ಷೋಡಶದಲಿ ॥

ಮಿಥ್ಯವೀಜಗ, ಕಾಮುಕೇಳಿಯ ಫಲ, ಪ್ರತಿಷ್ಠಾರಹಿತವು ।
ಮತ್ತನೀಶ್ವರವೆನುವರವರಿಗೆ ಕಾಮಭೋಗವೆ ಹೇತುವು ॥ ೮

ದೃಷ್ಟಿಯಿದನಾಶ್ರಯಿಸಿ ಆ ಅವಿವೇಕಿಗಳು, ನಷ್ಟಾತ್ಮರು ।
ಪುಟ್ಟುವರು ಜಗ ನಷ್ಟಮಾಡಲು ದುಷ್ಟಕರ್ಮಿಗಳಹಿತರು ॥ ೯

ಮಾನ ಮದ ದಂಭದಲಿ ಯುಕ್ತನು ಹೊಂದಿ ಮಿಥ್ಯಾಜ್ಞಾನವ ।
ತಾನು ದುಷ್ಕರ್ಮವನು ಗೈವನು ನಂಬಿ ದುರ್ಭರಕಾಮವ ॥ ೧೦

ಮರಣಕಾಲದವರೆಗೆ ಪರಿಮಿತಿಯಿರದ ಚಿಂತೆಯೊಳಿರುವರು ।
ನಿರತರಾಗುತ ವಿಷಯಭೋಗದಿ, ಪರಮಗುರಿ ಇದು ಎನುವರು ॥ ೧೧

ಕಾಮ ಕ್ರೋಧದಿರತರು, ಆಶಾಶತದ ಬಲೆಯಲಿ ಬದ್ಧರು ।
ಕಾಮ ಭೋಗಕ್ಕಾಗಿ ಧನ ಅನ್ಯಾಯದಲಿ ಕೂಡಿಡುವರು ॥ ೧೨

'ನಾನು ಈದಿನ ಇಷ್ಟು ಹೊಂದಿಹೆ, ಈ ಮನೋರಥ ಪಡೆವೆನ್ನೆ ।
ನಾನು ಪಡೆದಿಹೆನಿಷ್ಟು ಹಣ, ಇನ್ನಷ್ಟು ಮತ್ತೂ ಬರುವುದೈ ॥ ೧೩

ನಾನು ಕೊಂದೆನು ಇಂಥ ಹಗೆಯನು, ಕೊಲುವೆನುಳಿದವರನ್ನು ನಾ ।
ನಾನೆ ಈಶ್ವರ, ನಾನೆ ಭೋಗಿಯು, ಸಿದ್ಧ, ಸುಖಿಯು, ಬಲಿಷ್ಠನಾ ॥ ೧೪

ದಾನಿ, ಧನಿಕ, ಕುಲೀನ, ಯಾಜಿಯುನಾನೆ ಮೋದಿಸುವಾತನು ;' ।
ಜ್ಞಾನ ಹೀನ, ವಿಮೂಢನಾತನು, ತನಗೆ ಸಮನಾರೆನುವನು ॥ ೧೫

ಸಿಲುಕಿ ಮೋಹದ ಜಾಲದಲಿ ಬಹು ವಿಧದಿ ಚಿತ್ತ ಭ್ರಮಿಷ್ಟರು ।
ಮುಳುಗುತಲಿ ವಿಷಯೋಪಭೋಗದಿ, ಅಶುಚಿ ನರಕದಿ ಬೀಳ್ವರು ॥ ೧೬

ಆತ್ಮ ಪೌರುಷಿ, ಜಂಭಗಾರರು ಮಾನ ಧನದ ಮದಾಂಧರು ।
ಮತ್ತೆ ವಿಧಿಗಳ ಬಿಟ್ಟು ದಂಭದಿ ನಾಮಮಾತ್ರಕೆ ಯಜಿಪರು ॥ ೧೭

ಅಧ್ಯಾಯ ೧೭.

ಶ್ರದ್ಧಾತ್ರಯ ವಿಭಾಗ ಯೋಗ

ಅರ್ಜುನ :

ಬಿಟ್ಟು ಶಾಸ್ತ್ರದ ವಿಧಿಯ, ಕೇವಲ ಶ್ರದ್ಧೆಯಿಂದಲಿ ಭಜಿಪರ ।
ನಿಷ್ಠೆ ಸತ್ವವೊ, ರಜವೊ, ತಮವೊ, ಆವುದಿರುವುದು ಮುರಹರ ?॥

ಶ್ರೀಕೃಷ್ಣ :

ಮಾನವನ ಆ ಸಹಜ ಶ್ರದ್ಧೆಯು ಮೂರು ವಿಧವಾಗಿರುವುದು ।
ನೀನು ಕೇಳದು ಸಾತ್ವಿಕವು, ರಾಜಸವು, ತಾಮಸವೆಂಬುದು ॥

ನರನೆ ಸರ್ವರ ಶ್ರದ್ಧೆ ಅವರ ಸ್ವಭಾವಕನುಗುಣವಿರುವುದೈ ।
ಪುರುಷ ಶ್ರದ್ಧಾಮಯನು, ತನ್ನಯ ಶ್ರದ್ಧೆಯಂತವನಿರುವನೈ ॥

ಸಾತ್ವಿಕರು ದೇವತೆಗಳನು, ರಾಜಸರು, ರಾಕ್ಷಸ ಯಕ್ಷರ ।
ಮತ್ತೆ ತಾಮಸರೆಲ್ಲ ಭಜಿಪರು, ಭೂತಗಣಗಳ, ಪ್ರೇತರ ॥

ಮತ್ತೆ ದಂಭದಿ ಅಹಂಕಾರದಿ ಕಾಮರಾಗಕೆ ಸಿಲುಕುತ ।
ಶಾಸ್ತ್ರವಿಧಿಗೆ ವಿರುದ್ಧವಾಗಿಹ ಘೋರ ತಪವಾಚರಿಸುತ ॥

ದೇಹದಿಹ ಇಂದ್ರಿಯ ಸಮೂಹವ, ತನುವಿನೊಳಗಿಹ ನನ್ನನು ।
ಮೋಹಚಿತ್ತದಲಾವ ಕೊರಗಿಸುತಿಹನೊ, ತಿಳಿ ಅವನಸುರನು ॥

ಅನ್ನವೂ ಸಹ ಮೂರು ಬಗೆಯಲಿ ಸರ್ವರಿಗು ಪ್ರಿಯವಾದುದೈ ।
ಯಜ್ಞ ತಪದಾನಗಳು ಅಂತೆಯೆ, ಭೇದವಿವುಗಳ, ಆಲಿಸೈ ॥

ಸತ್ವ, ಬಲ, ಆರೋಗ್ಯ, ಸುಖ, ಆಯುಷ್ಯ, ಪ್ರೀತಿಯ ಬೆಳೆಸುವ ।
ಮತ್ತೆ ರಸಮಯ, ಸ್ನಿಗ್ಧ, ಸ್ಥಿರ, ಹೃದ್ಯಾನ್ನ, ಸಾತ್ವಿಕ ಬಯಸುವ ॥

ಬಹಳ ಬಿಸಿ, ಹುಳಿ, ಕಹಿಯು, ಕಾರವು, ಲವಣ, ರುಕ್ಷವು, ದಾಹ್ಯವು ।
ಇಹವು ರಾಜಸಗಿಷ್ಟ ; ಶೋಕವ, ದುಃಖ, ರೋಗವ ತರುವುವು ॥ ೯ ॥

ಪ್ರಹರ ಮೀರಿದ ಅನ್ನ, ತಂಗಳು ಎಂಜಲವು, ಅಪವಿತ್ರವು ।
ಅಹಿತವಾಸನೆಯುಳ್ಳ, ನೀರಸ ತಿನಸು, ತಾಮಸಗಿಷ್ಟವು ॥ ೧೦ ॥

ಮಾಡತಕ್ಕದು ಎಂದು, ಮನಸ್ಥಿರಗೊಳಿಸಿ, ಫಲವನು ಬಯಸದೆ ।
ಮಾಡಿದಂತಹ ಶಾಸ್ತ್ರಸಮ್ಮತ ಯಜ್ಞ, ಸಾತ್ವಿಕವೆನಿಸದೆ ? ॥ ೧೧ ॥

ಫಲವ ಬಯಸುತ, ಜಂಭಕಾಗಿಯೆ ಮಾಡಿದಂತಹ ಯಜ್ಞವು ।
ತ್ರಿಳಿಯೋ ನೀ ಭರತರ್ಷಭನೆ, ಎನಿಸುವುದು ರಾಜಸ ಯಜ್ಞವು ॥ ೧೨ ॥

ಅನ್ನ ನೀಡದ, ಮಂತ್ರದಕ್ಷಿಣೆ ಶ್ರದ್ಧೆ ವಿರಹಿತ ಯಜ್ಞವು ।
ಇನ್ನು ವಿಧಿಯನು ಬಿಟ್ಟುಗೈದರೆ, ಅದುವೆ ತಾಮಸ ಯಜ್ಞವು ॥ ೧೩ ॥

ಬ್ರಾಹ್ಮಣರ ಗುರು–ದೇವ–ಜ್ಞಾನೀಜನರ ಪೂಜೆ, ಅಹಿಂಸೆಯು ।
ಬ್ರಹ್ಮಚರ್ಯೆ, ಶುಚಿತ್ವ, ಸರಳತೆ, ಕಾಯಕದ ತಪವೆನಿಪುದು ॥ ೧೪ ॥

ಸತ್ಯ-ಪ್ರಿಯ–ಹಿತವಾದ–ಮನನೋಯಿಸದ ನುಡಿಯನು ನುಡಿವುದು ।
ಮತ್ತೆ ಸ್ವಾಧ್ಯಾಯಾಧ್ಯಯನ ತಾ ತಪವು ವಾಚಿಕವೆನಿಪುದು ॥ ೧೫ ॥

ಆತ್ಮನಿಗ್ರಹ, ಭಾವಶುದ್ಧಿಯು, ಸುಪ್ರಸನ್ನತೆ, ಮೌನವು ।
ಮತ್ತೆ ಸೌಮ್ಯಸ್ವಭಾವ, ಇವುಗಳು ಮಾನಸಿಕ ತಪವೆನಿಪುವು ॥ ೧೬ ॥

ನರರು ಈ ಮೂಬಗೆಯ ತಪಗಳ ಫಲದಪೇಕ್ಷೆಯ ನಿಡದಲೆ ।
ಪರಮ ಶ್ರದ್ಧೆಯನಿಟ್ಟು ಮಾಡುವ ತಪವು ಸಾತ್ವಿಕವಿಹುದೆಲೆ ॥ ೧೭ ॥

ಪೂಜೆ–ಸತ್ಕಾರಕ್ಕೆ, ಮಾನಕೆ ಗೈದ ಡಾಂಭಿಕ ತಪವೆಲೊ ।
ರಾಜಸವು ತಾನೆನಿಸುವುದು, ಅಸ್ಥಿರವು, ಚಂಚಲವಿಹುದೆಲೊ ॥ ೧೮ ॥

ಮೂಢ ಹಟದಿಂ ತನ್ನ ಪೀಡಿಸಿ, ಪರರ ಹಿಂಸೆಯುಗೊಳಿಸಲು ।
ಮಾಡಿದಂತಹ ತಪಕೆ ತಾಮಸ ತಪವು ಎಂಬಭಿಧಾನವು ॥ ೧೯

ಕೊಡುವುದುಚಿತವು ಎಂದು, ಪ್ರತ್ಯುಪಕಾರದಾಸೆಯುಮಾಡದೆ ।
ಕೊಡೆ ಸುಕಾಲ–ಸ್ಥಾನ–ಪಾತ್ರದಿ, ದಾನ ಸಾತ್ವಿಕವೆನಿಸದೆ ? ॥ ೨೦

ಮತ್ತೆ ಪ್ರತ್ಯುಪಕಾರ ಬಯಸುತ ಫಲನಿರೀಕ್ಷಿಸಿ ಮನುಜನು ।
ಇತ್ತ ವ್ಯಥೆಪೂರ್ವಕದ ದಾನವು ರಾಜಸವು ಎಂದೆನಿಪುದು ॥ ೨೧

ಸ್ಥಾನ ಕಾಲೌಚಿತ್ಯವರಿಯದೆ, ಮಾನಮಾಡದೆ ಜರೆಯುತ ।
ದಾನವೀಯಲಪಾತ್ರನಿಗೆ ಆ ದಾನವೆನಿಪುದು ತಾಮಸ ॥ ೨೨

ಬ್ರಹ್ಮನಿಗೆ ನಿರ್ದೇಶ ಮೂಬಗೆ 'ಓಂ, ತತ್, ಸತ್' ಎಂಬುವು ।
ಬಾಹ್ಮಣರು, ವೇದಗಳು, ಯಜ್ಞಗಳೆಲ್ಲ ಇದರಿಂದಾದುವು ॥ ೨೩

ಅಂತೆ ವಿಧಿಪೂರ್ವಕದಿ ಯಜ್ಞದ, ತಪದ, ದಾನದ ಕ್ರಿಯೆಯನು ।
ಸಂತತದಿ "ಓಂ" ಕಾರ ಪೇಳುತ, ಬ್ರಹ್ಮವಾದಿಯು ಗೈವನು ॥ ೨೪

ದಾನ ತಪ ಯಜ್ಞಗಳ ಬಗೆಬಗೆ ಕ್ರಿಯೆಗಳನು ಮೋಕ್ಷಾರ್ಥಿಯು ।
ತಾನು 'ತತ್' ಉಚ್ಚಾರಮಾಡುತ ಫಲವ ಬೇಡದೆಗೈವನು ॥ ೨೫

ಸತ್ಯಸಾಧೂ ಭಾವಕೆಲ್ಲಕು 'ಸತ್' ಪ್ರಯೋಗಿಸುತಿರುವರು ।
ಮತ್ತೆ ಉತ್ತಮ ಕ್ರಿಯೆಗಳಿಗೆ 'ಸತ್' ಶಬ್ದ ಹೊಂದಿಸುತಿರುವರು ॥ ೨೬

ಯಜ್ಞ–ತಪ–ದಾನಗಳಲಿಹ ಸ್ಥಿರಭಾವಕೂ 'ಸತ್' ಎಂಬರು ।
ಇನ್ನು ಅವುಗಳಿಗಾಗಿ ಎಸಗುವ ಕರ್ಮಕೂ 'ಸತ್' ಎಂಬರು ॥ ೨೭

ಮತ್ತೆ ಶ್ರದ್ಧಾರಹಿತ ಹೋಮವು, ತಪವು, ದಾನವು, ಕರ್ಮವು ।
ಪಾರ್ಥನೇ, ಇವು 'ಅಸತ್' ಎನಿಪುವು, ಇಹಪರಗಳದಕಿಲ್ಲವು ॥ ೨೮

ಶ್ರೀ ಕೃಷ್ಣಾರ್ಪಣವು.

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಶ್ರದ್ಧಾತ್ರಯವು ಕೊನೆ, ಹದಿನೇಳನೆಯ ಅಧ್ಯಾಯದಿ ॥

ಅಧ್ಯಾಯ ೧೮.

ಮೋಕ್ಷ ಸಂನ್ಯಾಸಯೋಗ

ಅರ್ಜುನ :

ಈಗ ಕೇಶಿನಿಷೂದನನೆ, ಹೃಷಿಕೇಶ ಬೇರೇ ಬೇರೆಯೆ ।
ತ್ಯಾಗ–ಸಂನ್ಯಾಸಗಳ ನಿಜ ತತ್ವಗಳನರಿಯಲು ಬಯಸುವೆ ॥ ೧

ಶ್ರೀಕೃಷ್ಣ :

ಕಾಮ್ಯಕರ್ಮದ ತ್ಯಾಗವೇ ಸಂನ್ಯಾಸವೆಂಬರು ಜಾಣರು ।
ಕರ್ಮಫಲಗಳನೆಲ್ಲ ತ್ಯಜಿಪುದೆ ತ್ಯಾಗವೆನುವರು ಕುಶಲರು ॥ ೨

ಜಾಣರೆನಿಬರೊ " ಕರ್ಮದೋಷದಿ ಯುಕ್ತ, ಬಿಡಿರದ "ನೆನುವರು ।
ದಾನ ತಪ ಯಜ್ಞಾದಿ ಕರ್ಮವ ಬಿಡದಿರೆಂಬರು ಹಲವರು ॥ ೩

ಭರತಶ್ರೇಷ್ಠನೆ, ತ್ಯಾಗವಿಷಯದೊಳೆನ್ನ ನಿರ್ಣಯವಾಲಿಸೈ ।
ಪುರುಷ ವ್ಯಾಘ್ರನೆ, ಮೂರು ಬಗೆಯಲಿ ತ್ಯಾಗವರ್ಣಿತವಿರುವುದೈ ॥ ೪

ಯಜ್ಞ ತಪ ದಾನಾದಿ ಕರ್ಮವು ತ್ಯಾಜ್ಯವಲ್ಲವು ; ಕಾರ್ಯವು, ।
ಯಜ್ಞ ತಪ ದಾನಗಳು ಪಂಡಿತರನ್ನು ಪಾವನ ಗೊಳಿಪುವು ॥ ೫

ಅಂತೆಯೇ, ಆಸಕ್ತಿ ಫಲಗಳ ತ್ಯಜಿಸಿ ಕರ್ಮವ ಮಾಡೆಲೊ ।
ಕುಂತಿಸುತ, ಇದು ನನ್ನ ನಿಶ್ಚಿತ ಶ್ರೇಷ್ಠ ಮತವಾಗಿಹುದೆಲೊ ॥ ೬

ಶಾಸ್ತ್ರನಿಯಮಿತ ಕರ್ಮಗಳ ತ್ಯಜಿಸುವುದು ಉಚಿತವದಲ್ಲವು ।
ಮತ್ತೆ ಮೋಹದೊಳದನು ತ್ಯಜಿಸಲು ಅದುವೆ ತಾಮಸ ತ್ಯಾಗವು ॥ ೭

ಕರ್ಮದುಃಖವ ಕೊಡುವುದೆನ್ನುತ ಕಾಯಕ್ಲೇಶದ ಭಯದಲಿ ।
ಕರ್ಮ ತ್ಯಜಿಸಲು, ರಾಜಸವು ಅದು, ತ್ಯಾಗಫಲ ಸಿಗದದರಲಿ ॥ ೮

ಾರ್ಥನೇ ಕರ್ತವ್ಯವೆನ್ನುತ ಸಂಗಫಲಗಳ ತ್ಯಜಿಸುತ ।
ಾಸ್ತ್ರನಿಯಮಿತ ಕರ್ಮ ಗೈಯಲು, ಅಂಥ ತ್ಯಾಗವು ಸಾತ್ವಿಕ ॥ ೯ ॥

ತ್ವಯುತ, ಸಂದೇಹವಳಿದಿಹ, ಜ್ಞಾನಿ ಎನಿಪನು ತ್ಯಾಗಿಯು ।
ುತ್ತ ಶುಭ ಶುಭ ಕಾರ್ಯದೊಳಗವಗಿಲ್ಲ ದ್ವೇಷವು, ಪ್ರೀತಿಯು ॥ ೧೦ ॥

ಕರ್ಮವನು ಸಂಪೂರ್ಣ ತ್ಯಜಿಸಲಶಕ್ಯವಿರುವುದು ನರನಿಗೆ ।
ಕರ್ಮಫಲ ಬಿಟ್ಟಿರುವನಾವನೊ, ತ್ಯಾಗಿಯೆಂಬುವರವನಿಗೆ ॥ ೧೧ ॥

ಕರುಮಫಲಗಳು ಮೂರು ಬಗೆಯುವು, ಶುಭ, ಅಶುಭ, ಸಂಮಿಶ್ರವು ।
ಮರಣಹೊಂದಿದ ಸಕ್ತನಿಗೆ; ಸಂನ್ಯಾಸಿಗೆಂದಿಗು ಇಲ್ಲವು ॥ ೧೨ ॥

ಸರುವಕರ್ಮದ ಸಿದ್ಧಿಗೋಸುಗ ಐದು ಕಾರಣ ಇವು, ಎಲೊ ।
ನರನೆ, ಸಾಂಖ್ಯರ ಶಾಸ್ತ್ರದಲಿ, ಪೇಳಿದುದ ನನ್ನಿಂದರಿಯೆಲೊ ॥ ೧೩ ॥

ಕ್ಷೇತ್ರ ಹಾಗೂ ಕರ್ಮ, ಬಗೆಬಗೆ ಇಂದ್ರಿಯಂಗಳು ಎಲ್ಲವು ।
ಮತ್ತೆ ನಾನಾ ಬಗೆಯ ಕ್ರಿಯೆಗಳು, ಐದನೇಯುದು ದೈವವು ॥ ೧೪ ॥

ಕಾಯ ವಾಕ್ ಮನದಿಂದ ಮಾನವ ಗೈವ ಕಾರ್ಯಗಳೆಲ್ಲವು ।
ನ್ಯಾಯಬದ್ಧವೊ ತದ್ವಿರುದ್ಧವೊ, ಹೇತು ಈ ಐದುಳ್ಳುವು ॥ ೧೫ ॥

ಇನ್ನು ಸ್ಥಿತಿ ಹೀಗಿರೆ, ಅಸಂಸ್ಕೃತ ಬುದ್ಧಿಯಿಂ ಮತಿಗೆಟ್ಟವ ।
ತನ್ನನೇ ಕರ್ತಾರನೆನ್ನುತ, ಕಾಣಲಾರನು ನೈಜವ ॥ ೧೬ ॥

'ನಾನು ಮಾಡಿದೆ'ನೆಂದು ಭಾವಿಸದವನು, ನಿರ್ಮಲ ಚಿತ್ತನು ।
ತಾನು ಈ ಲೋಕಗಳ ಕೊಂದರು, ಕೊಲದವನು ಅನಿಬಧ್ಯನು ॥ ೧೭ ॥

ಕರ್ಮಪ್ರೇರಣೆ ತ್ರಿವಿಧವಾಗಿದೆ ಜ್ಞಾನ. ಜ್ಞೇಯವು, ಜ್ಞಾತೃವು ।
ಕರ್ಮಸಂಗ್ರಹ ಸಹಿತ ತ್ರಿವಿಧವು. ಕರಣ, ಕರ್ಮವು. ಕರ್ತೃವು ॥ ೧೮ ॥

ಮನವ ಜಯಿಸಿದ, ಆಸೆ ತ್ಯಜಿಸಿದ, ಸಂಗವೆಲ್ಲಿಯು ಇರಿಸದ ।
ಮನುಜ ಸನ್ಯಾಸದಲಿ ಸಿದ್ಧಿಯ ಪಡೆವ, ಘನನೈಷ್ಕರ್ಮ್ಯದ ॥ ೪೯ ॥

ಕುಂತಿ ತನಯನೆ ಸಿದ್ಧಿ ಪಡೆದವಗೆಂತು ಲಭ್ಯವೊ ಬ್ರಹ್ಮವು ।
ಅಂಥ ಬಗೆ ಕೇಳದುವೆ ಜ್ಞಾನದ ಪರಮಸೀಮೆಯು ನಿಷ್ಠೆಯು ॥ ೫೦ ॥

ಶುದ್ಧ ಬುದ್ಧಿಯು ಯೋಗಿ ತನ್ನನು ದೃಢದಿ ವಶದಲ್ಲಿರಿಸುತ ।
ಗೆದ್ದು ರಾಗದ್ವೇಷಗಳ, ಶಬ್ದಾದಿ ವಿಷಯುವ ತ್ಯಜಿಸುತ ॥ ೫೧ ॥

ಇದ್ದು ಏಕಾಂತದಲಿ, ಅಲ್ಪಾಹಾರಿ, ತನುಮನ ನುಡಿಯನು ।
ಗೆದ್ದುಕೊಂಡ ವಿರಕ್ತ, ನಿತ್ಯದಿ, ಧ್ಯಾನಯೋಗದಿ ಯುಕ್ತನು ॥ ೫೨ ॥

ಪರಿಗ್ರಹ ಬಲ ಅಹಂಕಾರವ, ಕಾಮ, ಕ್ರೋಧವ, ದರ್ಪವ ।
ತೊರೆದಿರುವ ನಿರ್ಮಮ, ಪ್ರಸನ್ನನು ಹೊಂದಲರ್ಹನು ಬ್ರಹ್ಮವ ॥ ೫೩ ॥

ತಾನು ಶೋಕಿಸ, ಬಯಸನೇನನು, ಬ್ರಹ್ಮಭಾವ ಪ್ರಸನ್ನನು ।
ಪ್ರಾಣಿಮಾತ್ರರೊಳಿರುತ ಸಮ, ಮಮ ಪರಮಭಕ್ತಿಯ ಪಡೆವನು ॥ ೫೪ ॥

ಆರು ನಾನೆಂಥವನು, ಎಂಬುದನಾವ ನರಿವನೊ ಭಕ್ತಿಲಿ ।
ಸೇರುವನು ತತ್ವದಲಿ ನನ್ನನು ತಿಳಿಯುತಾತನು ನನ್ನಲಿ ॥ ೫೫ ॥

ಎನ್ನ ಆಶ್ರಯ ಹೊಂದಿ ಸಂತತ ಕರ್ಮಗೈದರು ಆತನು ।
ಎನ್ನ ಕೃಪೆಯಲಿ ಪಡೆವನವ್ಯಯ ಮತ್ತೆ ಶಾಶ್ವತ ಪದವನು ॥ ೫೬ ॥

ಮತ್ಪರಾಯಣನಾಗಿ ಮನದಿಂ ಕರ್ಮವರ್ಪಿಸು ನನ್ನಲಿ ।
ಚಿತ್ತವನ್ನಿಡು ಬುದ್ಧಿಯೋಗವ ಹೊಂದಿ ಸಂತತ ನನ್ನಲಿ ॥ ೫೭ ॥

ಚಿತ್ತವೆನ್ನೊಳಗಿರಿಸೆ, ನನ್ನಯ ದಯದಿ ಸಂಕಟದಾಟುವಿ ।
ಮತ್ತೆ ನೀನು ಮಮತ್ವದಿಂದಿದ ಕೇಳದಿರ್ದೊಡೆ ನಶಿಸುವಿ ॥ ೫೮ ॥

ನಿದ್ರೆ ಹಾಗು ಪ್ರಮಾದ ಆಲಸ್ಯದಲಿ ಜನಿಸುವ ಸೌಖ್ಯವು ।
ಆದಿ ಅಂತ್ಯದಿ ಮನವ ಮೋಹಿಸುತಿಹುದೆ ತಾಮಸ ಸೌಖ್ಯವು ॥ ೩೯

ಪೃಥ್ವಿಯಲ್ಲಿಯು, ಸ್ವರ್ಗದೇವತೆಗಳಲಿ ಆವುದೆ ಸತ್ವವು ।
ಮತ್ತೆ ಪ್ರಕೃತಿಜ ತ್ರಿಗುಣದಿಂದಲಿ ಮುಕ್ತವಾದುದುದಿಲ್ಲವು ॥ ೪೦

ಪಾರ್ಥನೇ. ಬ್ರಾಹ್ಮಣರ, ಕ್ಷತ್ರಿಯ, ವೈಶ್ಯಶೂದ್ರರ ಕರ್ಮವು ।
ಮತ್ತೆ ಅವರ ಸ್ವಭಾವದಿಂ ಬಹ ಗುಣಗಳಿಂದ ವಿಭಿನ್ನಹವು ॥ ೪೧

ಶಮ, ದಮವು, ತಪ, ಜ್ಞಾನ, ವಿಜ್ಞಾನಗಳು, ಸರಳತೆ ಶೌಚವು ।
ಕ್ಷಮೆಯು, ಆಸ್ತಿಕ ಭಾವ, ಬ್ರಾಹ್ಮಣ ಸಹಜವಾಗಿಹ ಕರ್ಮವು ॥ ೪೨

ಶೌರ್ಯ, ರಣದಿಂದೋಡದಿರುವುದು, ದಾನ, ದಕ್ಷತೆ, ತೇಜವು ।
ಧೈರ್ಯ, ಈಶ್ವರಭಾವ, ಕ್ಷತ್ರಿಯ ಸಹಜವಾಗಿಹ ಕರ್ಮವು ॥ ೪೩

ನರನೆ, ಕೃಷಿ, ಗೋರಕ್ಷಣೆಯು, ವಾಣಿಜ್ಯ, ವೈಶ್ಯಗೆ ಸಹಜವು ।
ಇರುವುದೈ ಪರಿಚರ್ಯ ಶೂದ್ರಗೆ. ಸಹಜವಾಗಿಹ ಕರ್ಮವು ॥ ೪೪

ತನ್ನ ಕರ್ಮದಿ ನಿರತನಾಗಿಹ ನರನು ಪಡೆವನು ಸಿದ್ಧಿಯ ।
ಇನ್ನು ಕೇಳೈ, ಕರ್ಮನಿರತನು, ಸಿದ್ಧಿ ಹೊಂದುವ ರೀತಿಯ ॥ ೪೫

ಭೂತರಿಗೆ ಪ್ರೇರಕನದಾವನೊ, ತುಂಬಿಹನೊ. ಜಗವಾವನು ।
ಆತನನು ನಿಜ ಕರ್ಮದಲಿ, ನರಭಜಿಸಿ ಸಿದ್ಧಿಯ ಪಡೆವನು ॥ ೪೬

ಶ್ರೇಷ್ಠವಿಗುಣ ಸ್ವಧರ್ಮ, ಅನ್ಯರ ಸುಗಮ ಧರ್ಮಕ್ಕಿಂತಲು ।
ಮುಟ್ಟದವನನು ಪಾಪ, ನಿಯತ ಸ್ವಭಾವ ಕರ್ಮವಗೈಯಲು ॥ ೪೭

ದೋಷವಿದ್ದರು ಸಹಜ ಕರ್ಮವ ಬಿಡಲುಸಲ್ಲ, ಧನಂಜಯ ।
ದೋಷ ಕವಿದಿಹುದೆಲ್ಲ ಕರ್ಮವ, ಧೂಮ ತಾನೆಂತಗ್ನಿಯ ॥ ೪೮

ಇನ್ನಹಂಕಾರದಲಿ 'ಯುದ್ಧವ ಮಾಡೆ' ನೆನುವುದು ವ್ಯರ್ಥವೈ ।
ನಿನ್ನ ಪ್ರಕೃತಿಯೆ ನಿನ್ನನಾ ಕಾರ್ಯದಲಿ ತೊಡಗಿಸಿಬಿಡುವುದೈ ॥ ೫೯ ॥

ಪ್ರಕೃತಿಜನ್ಯ ಸ್ವಕರ್ಮಬದ್ಧನು, ಮಾಡೆನೆಂದರು ಮೋಹದಿ ।
ಪ್ರಕೃತಿವಶನಾಗುತ್ತ ನೀನೇ ಅದನು ಮಾಡಿಯೆ ಮಾಡುವಿ ॥ ೬೦ ॥

ಸರುವ ಭೂತರ ಹೃದಯದೊಳಗೀಶ್ವರನು ವಾಸಿಸುತಿರುವನು ।
ತಿರುಗಿಸುವ ಮಾಯೆಯಲಿ ಯಂತ್ರಾರೂಢರಂದದಿ ಅವರನು ॥ ೬೧ ॥

ಅವನಿಗೇ ಮೊರೆಹೋಗು, ಪಾರ್ಥನೆ, ನೀನು ಎಲ್ಲಾ ಬಗೆಯಲಿ ।
ಅವನ ಕೃಪೆಯಲಿ ಪರಮಶಾಂತಿಯು ಅಮರ ಪದವಿಯ ಪಡೆಯುವಿ
॥ ೬೨ ॥

ಇಂತು ಗೌಪ್ಯದಿ ಗೌಪ್ಯವಾಗಿಹ ಜ್ಞಾನ ಪೇಳಿದೆ ನಿನಗೆಲೊ ।
ಕುಂತಿ-ಸುತ, ಎಲ್ಲವ ವಿಮರ್ಶಿಸಿ, ಇಷ್ಟವಾದುದ ಮಾಡೆಲೊ ॥ ೬೩ ॥

ನೀನು ಆಲಿಸು ಗೂಢ ತಮವಾದೆನ್ನ ಉತ್ತಮ ನುಡಿಯನು ।
ನೀನು ನನಗತಿ ಪ್ರಿಯನು ಅಂತೆಯೆ, ನಿನ್ನ ಶ್ರೇಯಕೆ ಪೇಳ್ವೆನು ॥ ೬೪ ॥

ನನ್ನೊಳಿಡು ಮನ, ನನ್ನ ಭಕ್ತನು ಆಗು, ಯಾಜಿಸು, ನಮಿಸು ನೀ ।
ನನ್ನನೈದುವಿ, ನನ್ನ ಸತ್ಯ ಪ್ರತಿಜ್ಞೆಯಿದು, ಮಮಸಖನು ನೀ ॥ ೬೫ ॥

ಸರ್ವ ಧರ್ಮಗಳನ್ನು ತೊರೆದೆನಗೊಬ್ಬನಿಗೆ ಶರಣಾಗೆಲೊ ।
ಸರ್ವಪಾಪದಿ ನಿನ್ನನಾ ನುಳಿಸುವೆನು ಚಿಂತಿಸಬೇಡೆಲೊ ॥ ೬೬ ॥

ಪೇಳದಿರು ಇದನೆಂದಿಗೂ ತಪಹೀನ ಹಾಗು ಅಭಕ್ತಗೆ ।
ಕೇಳಬೇಕೆಂಬಿಚ್ಛೆ ಇರದಗೆ, ನನ್ನ ನಿಂದೆಯ ಗೈವಗೆ ॥ ೬೭ ॥

ನನ್ನ ಭಕ್ತರಿಗೀ ಪರಮ ಗೌಪ್ಯವನು ತಿಳಿಸುವ ಪುರುಷನು ।
ನನ್ನೊಳಗೆ ದೃಢಭಕ್ತಿಯಿಟ್ಟೆನ್ನೆಡೆಗೆ ತಪ್ಪದೆ ಬರುವನು ॥ ೬೮ ॥

ನನ್ನ ಪ್ರೀತಿಪರೊಳಗೆ ಅವಗಿಂತಧಿಕ ನಿಲ್ಲವು ನರರೊಳು ।
ಇನ್ನು ನನಗವಗಿಂತಲೂ ಪ್ರಿಯ ನನ್ಯನಾಗನು ಧರೆಯೊಳು ॥ ೬೯ ॥

ಇನ್ನು ನಮ್ಮೀ ಧರ್ಮಮಯ ಸಂವಾದ ಪಠಿಸುವ ಮನುಜನು ।
ನನ್ನ ಪೂಜೆಯು, ಜ್ಞಾನ ಯಜ್ಞದಿ ಗೈವನೆಂದೇ ತಿಳಿವೆನು ॥ ೭೦ ॥

ಮತ್ಸರಿಸದೆ ಕೇಳುವ ನಿಡದೆ ನರರಿದ ಶ್ರದ್ಧೆಯಿಂದಲಿ ಕೇಳ್ದರೂ ।
ಮುಕ್ತರಾಗುತ ಪುಣ್ಯಕರ್ಮಿಯು ಪುಣ್ಯಲೋಕವ ಪಡೆವರು ॥ ೭೧ ॥

ಮತ್ತೆ ನೀನಾಲಿಸಿದೆಯೋ ಏಕಾಗ್ರಮನದಿ ಧನಂಜಯ ।
ಪಾರ್ಥನೇ, ಅಜ್ಞಾನರೂಪೀ ಮೋಹವಳಿಯಿತೆ ನಿನ್ನಯ ॥ ೭೨ ॥

ಅರ್ಜುನ :

ನಿನ್ನ ಕೃಪೆಯಲಿ ಮೋಹವಳಿಯಿತು. ಅಚ್ಯುತನೆ, ಸ್ಮೃತಿ–ಪಡೆದೆನು ।
ನನ್ನ ಸಂಶಯ ನಾಶಹೊಂದಿತು, ನಿನ್ನ ನುಡಿಯೊಲೆ ನಡೆವೆನು ॥ ೭೩ ॥

ಸಂಜಯ :

ಆ ಮಹಾತ್ಮಾ ಪಾರ್ಥ-ಕೃಷ್ಣರ ಇಂಥ ಸಂಭಾಷಣೆಯನು ।
ರೋಮ ಹರ್ಷಣಕಾರಿ, ಅದ್ಭುತ-ವಾದುದನು ನಾ ಕೇಳ್ದೆನು ॥ ೭೪ ॥

ವಾಸುದೇವನು ತಾನೆ ಸಾಕ್ಷಾತ್ ಪೇಳುತಿರೆ ಯೋಗೇಶನು ।
ವ್ಯಾಸರನುಗ್ರಹದಿಂದ ಉತ್ತಮ ಗೌಪ್ಯಯೋಗವ ಕೇಳ್ದೆನು ॥ ೭೫ ॥

ದೊರೆಯೆ, ಹರಿನರರದ್ಭುತದ ಈ ಪುಣ್ಯಮಯ ಸಂವಾದವ ।
ಸ್ಮರಿಸ್ಮರಿಸಿ ನಾ ಮತ್ತೆ ಮತ್ತೆಯು ಹೊಂದುತಿರುವೆನು ಹರುಷವ ॥ ೭೬ ॥

ಹರಿಯ ಅತ್ಯದ್ಭುತದ ರೂಪವ ಅರಸನೇ ನೆನೆನೆನೆಯುತ ।
ಪರಮ ಆಶ್ಚರ್ಯದಲಿ ಮತ್ತೂ ಮತ್ತೆ ಆಗುವೆ ಹರುಷಿತ ॥ ೭೭ ॥

ಎಲ್ಲಿಹನೊ ಯೋಗೇಶ ಕೃಷ್ಣನು, ಎಲ್ಲಿ ನರ ಧನು ಪಿಡಿದವ ।
ಅಲ್ಲಿಹವು ಮಮ ಮತದಿ ಅವಿಚಲ ನೀತಿ, ಶ್ರೀ, ಜಯ, ವೈಭವ ॥ ೭

ಶ್ರೀಕೃಷ್ಣಾರ್ಪಣವು

ಹೀಗೆ ಭಗವದ್ಗೀತೆಯಲಿ ಕೃಷ್ಣಾರ್ಜುನರ ಸಂವಾದದಿ ।
ಈಗ ಮುಗಿಯಿತು ಮೋಕ್ಷ ಸಂನ್ಯಸ ಹತ್ತು ಎಂಟಧ್ಯಾಯದಿ ॥

ಶ್ರೀಮದ್ಭಗವದ್ಗೀತಾ

(ಮೂಲ)